ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 16 ಏಪ್ರಿಲ್ 18, 2004 ಬೆಲೆ ರೂ. 3.00

ಕಾರ್ಮಿಕ ವರ್ಗಕ್ಕೊಂದು ಕರೆ





ವಿಧಾನಸಭಾ ಚುನಾವಣೆ ಸಿಪಿಐ(ಎಂ) ಅಭ್ಯರ್ಥಿಗಳು



ತೃತೀಯ ಶಕ್ತಿ : ಕರ್ನಾಟಕದ ಆಯ್ಕೆ



ಆರೋಗ್ಯ ಯಾರ ಭಾಗ್ಯ ?



ಎನ್‌ಡಿಎ ಬಣ್ಣ ಬಯಲು

ಪೋಸ್ಟರ್ ಕಾಂಗ್ರೆಸ್ ಅಪರಾಧಿ

ಬಾಕಿ ತೀರಿಸದ ತೆವಲಿನವರು

ಕೆ.ಎಸ್.ರವಿಕುಮಾರ್ ಹಾಸನ

ನಮ್ಮ ರಾಜ್ಯಸಭಾ ಮತ್ತು ಲೋಕಸಭಾ ಸದಸ್ಯರಿಗೆ ದೆಹಲಿಯಲ್ಲಿ ಸುಸಜ್ಜಿತ ನಿವಾಸಗಳನ್ನು ಒದಗಿಸಲಾಗುತ್ತದೆ. ಈ ನಿವಾಸಗಳಿಗೆ ಇವರು ಬಾಡಿಗೆ ನೀಡಬೇಕಾಗಿಲ್ಲ. ಇದರ ಜೊತೆ ಪ್ರತಿ ಸದಸ್ಯನಿಗೂ ವರ್ಷಕ್ಕೆ 50 ಸಾವಿರ ಯೂನಿಟ್ ವಿದ್ಯುತ್, 35 ಸಾವಿರ ಗ್ಯಾಲನ್ ನೀರು ಮತ್ತು 1ಲಕ್ಷ 50 ಸಾವಿರ ದೂರವಾಣಿ ಕರೆಗಳನ್ನು ಉಚಿತವಾಗಿ ಒದಗಿಸಲಾಗುವುದು. ಈ ಪ್ರಮಾಣವನ್ನು ಮೀರಿ ಸದಸ್ಯರು ಹೆಚ್ಚು ಖರ್ಚು ಮಾಡಿದರೆ ಬಿಲ್ ಪಾವತಿಸಬೇಕು. ಆದರೆ ಕಾಲಕಾಲಕ್ಕೆ ಬಿಲ್ ಕಟ್ಟದೆ ದೊಡ್ಡ ಪ್ರಮಾಣದಲ್ಲಿ ಬಾಕಿ ಉಳಿಸಿಕೊಳ್ಳುವುದು ಹಲವರ ಚಾಳಿ. ಈಗ ವಿಸರ್ಜನೆಗೊಂಡ 13ನೇ ಲೋಕಸಭೆಯ 80 ಮಂದಿ ಸಂಸತ್ ಸದಸ್ಯರು ಹೀಗೆ ಬಿಲ್ ಬಾಕಿ ಉಳಿಸಿಕೊಂಡಿದ್ದಾರೆ. (ವಿವರಗಳಿಗೆ ಕೋಷ್ಟಕಗಳನ್ನು ನೋಡಿ). ಇವರಲ್ಲಿ ಘಟಾನುಘಟಿಗಳಿದ್ದಾರೆ. ಬಿಜೆಪಿಯ ಸ್ಪುರದ್ರೂಪಿ ನಾಯಕ ಪ್ರಮೋದ್ ಮಹಾಜನ್, ಬಹಳ ಮಾತನಾಡುವ ಬಿಜೆಪಿ ಅಧ್ಯಕ್ಷ ವೆಂಕಯ್ಯನಾಯ್ಡು, ಬಿಜೆಪಿಯ ಮಾಸ್ಟರ್ ಮೈಂಡ್ ಎನಿಸಿರುವ ಅರುಣ್ ಜೇಟ್ಲೆ (ಇವರು ಕಾನೂನು ಸಚಿವರು ಜೇರೆ ಪಾರ್ಲಿಮೆಂಟರಿ ಕಾಯಿದೆಗಳ ಅರಿವಿರುವವರು), ಪೆಟ್ರೋಲ್ ಹಗರಣದ ಕುಖ್ಯಾತಿಯ ರಾಮನಾಯಕ್, ವಿಮಾನಯಾನ ಖಾತೆಯ ರಾಜೀವ್ ಪ್ರತಾಪ್ ರೂಡಿ(ತಮ್ಮ ವಿಹಾರದ ಖರ್ಚನ್ನು ವೈಮಾನಿಕ ಇಲಾಖೆಗೆ ವರ್ಗಾಯಿಸಿದ ಖ್ಯಾತಿ ಇವರದು), ಅಹಿಂಸಾ ಪ್ರಿಯೆ ಮನೇಕಾ ಗಾಂಧಿ, ಕಾರ್ಮಿಕ ಮಂತ್ರಿಯಾಗಿದ್ದ ಸಾಹಿಬ್ ಸಿಂಗ್ ವರ್ಮಾ, ಮಾಜಿ ಕ್ರಿಕೆಟ್ ಆಟಗಾರ ಕೀರ್ತಿ ಆಜಾದ್, ಪ್ರವಾಸೋದ್ಯಮ ಮತ್ತು ಸಂಸತಿ ಮಂತ್ರಿಯಾಗಿದ್ದ ಜಗಮೋಹನ್ (ಬಾಕಿಯುಳಿಸಿಕೊಳ್ಳುವುದೂ ಸಂಸತಿಯ ಒಂದು ಭಾಗವೇ?) ಮುಂತಾದವರು ಬಿಜೆಪಿಗೆ ಹೆಸರು ತಂದಿದ್ದರೆ, ಕಾಂಗ್ರೆಸ್ ಪರವಾಗಿ ಸ್ವತಃ ಅಧ್ಯಕ್ಷೆ ಸೋನಿಯಾಗಾಂಧಿ, ಪಿ.ಎಂ.ಸಯೀದ್ (ಇವರು ಏಳೆಂಟು ಬಾರಿ ಸಂಸತ್ತಿಗೆ ಲಕ್ಷದ್ವೀಪದಿಂದ ಆಯ್ಕೆಯಾದ ಖ್ಯಾತಿ ಹೊಂದಿರುವವರು), ಬೂಟಾಸಿಂಗ್, ಮಾಜಿ ರೈಲುಮಂತ್ರಿ ಜಾಫರ್ ಷರೀಫ್, ಕೋಲಾರದ ಕೆ.ಎಚ್.ಮುನಿಯಪ್ಪ ಮುಂತಾದವರಿದ್ದಾರೆ. ಇತರ ಪಕ್ಷಗಳ ವತಿಯಿಂದ ಮಾಜಿ ಪ್ರಧಾನಿ ಚಂದ್ರಶೇಖರ್, ಸೋನಿಯಾ ಪ್ರಧಾನಿಯಾದರೆ ಲೋಕಸಭೆಗೆ ಶಾಶ್ವತ ವಿದಾಯ ಹೇಳುತ್ತೇನೆಂದು ಬೆದರಿಕೆ ಹಾಕಿರುವ ಪಿ.ಎ.ಸಂಗ್ಮಾ, ನ್ಯಾಷನಲ್ ಕಾನ್ಫರೆನ್ಸ್‌ನ ಮುದ್ದು ಮುಖದ ಉತ್ಸಾಹಿ ಒಮರ್ ಅಬ್ದುಲ್ಲಾ, ಜೆಡಿಯುನ ರೈಲುಮಂತ್ರಿ ನಿತೀಶ್‌ಕುಮಾರ್, ಬಿ.ಎಸ್.ಪಿ.ಯ ರಷೀದ್ ಅಲ್ವಿ, ಚರಣಸಿಂಗರ ಮಗ ಅಜಿತ್ ಸಿಂಗ್, ಶಿವಸೇನೆಯ ಸುರೇಶ್‌ಪ್ರಭು ಇನ್ನೂ ಮುಂತಾದವರಿದ್ದಾರೆ.

80 ಮಂದಿ ಬಾಕಿದಾರರ ಪಟ್ಟಿಯಲ್ಲಿ ಬಿಜೆಪಿಯ 34 ಮಂದಿ, ಕಾಂಗ್ರೆಸ್ಸಿನ 20 ಮತ್ತು ಇತರ ಪಕ್ಷಗಳ 26 ಮಂದಿ ಇದ್ದಾರೆ. ಇವರೆಲ್ಲರ ಬಾಕಿಯ ಒಟ್ಟು ಮೊತ್ತ 2,9,777 ಕೋಟಿ ರೂಪಾಯಿಗಳು.


ಬಾಕಿ ಉಳಿಸಿಕೊಂಡ ಕೆಲವು ಪ್ರಮುಖರನ್ನು ಸಂಪರ್ಕಿಸಿ ಅವರ ಅಭಿಪ್ರಾಯ ಕೇಳೋಣವೆ? (ಇಲ್ಲಿ ಯಾರೊಬ್ಬರ ಪ್ರತಿಕ್ರಿಯೆಯನ್ನೂ ನಾನು ವಿಶ್ಲೇಷಿಸಲು ಹೋಗುವುದಿಲ್ಲ. ಅವರ ಮಾತುಗಳೇ ಅವರ ಧೋರಣೆ ಮತ್ತು ಉಡಾಫೆಗಳನ್ನು ಪ್ರತಿಬಿಂಬಿಸುತ್ತವೆ. ದೇಶದ ಬಗ್ಗೆ ಇವರಿಗೆಷ್ಟು ಕಾಳಜಿ ಇದೆ ಎಂಬುದು ವ್ಯಕ್ತವಾಗುತ್ತದೆ).

ಮೊದಲಿಗೆ 3.5 ಲಕ್ಷ ಬಾಕಿ ಉಳಿಸಿಕೊಂಡಿರುವ ಅರುಣ್ ಜೇಟ್ಲಿಯವರ ಮನೆ ಬಾಗಿಲು ತಟ್ಟೋಣ. ಅವರು ಹೇಳುತ್ತಾರೆ "ನಾನು ಸಾಮಾನ್ಯ ಎಂ.ಪಿ.ಯಲ್ಲ ಕ್ಯಾಬಿನೇಟ್ ಸಚಿವನಾಗಿದ್ದೆ. ವಿದ್ಯುತ್, ನೀರು ಮತ್ತು ದೂರವಾಣಿ ಬಿಲ್ಲುಗಳನ್ನು ಸದಸ್ಯರೇ ಪಾವತಿಸಬೇಕೆಂಬ ಬಗ್ಗೆ ನನಗೆ ಮಾಹಿತಿ ಇಲ್ಲ. 1954 ರ ಸಂಸತ್ ಸದಸ್ಯರ ಸಂಬಳ, ಭತ್ಯೆ ಮತ್ತು ಪಿಂಚಣಿ ಕಾಯ್ದೆಯಲ್ಲಿ ಈ ಬಗ್ಗೆ ಏನೂ ಹೇಳಿಲ್ಲ. ಸಂಬಂಧಿಸಿದ ಸದಸ್ಯ ಬಾಕಿ ತೀರಿಸದಿದ್ದರೆ ಅವನದಕ್ಕೆ ಋಣಿ ಅಷ್ಟೆ. ಬಹಳ ತಲೆ ಕೆಡಿಸಿಕೊಳ್ಳಬೇಕಾದ ವಿಚಾರವೇನಲ್ಲ ಇದು".!

ನಂತರ ನಮ್ಮ ಭೇಟಿ ರಾಮ್‌ನಾಯಕ್ ಜೊತೆ. ಈ ಪೆಟ್ರೋಲಿಯಮ್ ಮಂತ್ರಿ ಹೇಳುತ್ತಾರೆ. "ಸದಸ್ಯರ ಬಾಕಿಯನ್ನು ಸರ್ಕಾರವೇ ಭರಿಸಬೇಕು. ಸಂಬಂಧಿತ ಮಿನಿಸ್ಟ್ರಿ ಆದರೂ ಸರಿ, ಇಲಾಖೆಯಾದರೂ ಸರಿ" ಇವರು 2 ಲಕ್ಷಕ್ಕೆ ಲೆಕ್ಕ ಕೊಡಬೇಕು.

ಪ್ರಮೋದ್ ಮಹಾಜನ್ ತಮ್ಮ ಎಂದಿನ ಸುಂದರ ಮುಗುಳುನಗೆಯೊಂದಿಗೆ ತಮ್ಮ ಬಾಕಿಯಾದ 17 ಲಕ್ಷದ ಬಗ್ಗೆಯೇ ಅನುಮಾನ ವ್ಯಕ್ತಪಡಿಸುತ್ತಾರೆ. ನಾನು 17 ಲಕ್ಷ ಬಾಕಿ ಉಳಿಸಿಕೊಂಡಿದ್ದೇನೆ ಎನ್ನುವುದು ಶುದ್ಧ ಸುಳ್ಳು. ಒಬ್ಬ ಮಧ್ಯಮ ವ್ಯಕ್ತಿ ಬಳಸುವಷ್ಟೇ ನೀರು, ವಿದ್ಯುತ್ತು ಮತ್ತು ಟೆಲಿಫೋನನ್ನು ಬಳಸುತ್ತೇನೆ. ಹೀಗಾಗಿ ನನ್ನ ಬಿಲ್ ಏನಿದ್ದರೂ ಕೆಲವೇ ಸಾವಿರಗಳಲ್ಲಿರಬೇಕು".

ಇನ್ನು ಕಾಂಗ್ರೆಸ್ಸಿನ ಅಧ್ಯಕ್ಷೆ ಸೋನಿಯಾಗಾಂಧಿಯವರ ಆಪ್ತಕಾರ್ಯದರ್ಶಿ ಮಾಧವನ್‌ರವರನ್ನು ಭೇಟಿ ಮಾಡೋಣ. ಅವರು ಹೇಳುತ್ತಾರೆ" ಸೋನಿಯಾರವರ ಬಾಕಿ ಕೇವಲ ಅವರ ನಿವಾಸಕ್ಕೆ ಸಂಬಂಧಿಸಿಲ್ಲ. ಎಲ್ಲಾ ಎಐಸಿಸಿ ಮತ್ತು ಪಕ್ಷದ ಕಛೇರಿಯ ಕನೆಕ್ಷನ್‌ಗಳನ್ನು ಒಟ್ಟುಗೂಡಿಸಿದರೆ ಇಷ್ಟು ದೊಡ್ಡ ಮೊತ್ತವಾಗಬಹುದು" ಅಂದಹಾಗೆ ಸೋನಿಯಾ ಗಾಂಧಿ ಉಳಿಸಿಕೊಂಡ ಬಾಕಿ ಎಷ್ಟು ಗೊತ್ತೆ? ಕೇವಲ 21 ಲಕ್ಷ! ಇವರು ಕಾಂಗ್ರೆಸ್ಸಿಗೆ ಈಗ ಕಾಯಕಲ್ಪ ಕೊಡುವ ಕಾರ್ಯದಲ್ಲಿದ್ದಾರೆ.



ಪ್ರಮೋದ್ ಮಹಾಜನ್ - ಅರುಣ್ ಜೆಟ್ಲಿ

ಭೇಟಿ ಮಾಡಿದವರಲ್ಲಿ ಶರದ್ ಯಾದವ್ ಇದ್ದುದರಲ್ಲಿ ಪ್ರಾಮಾಣಿಕ ಉತ್ತರ ಕೊಟ್ಟರು ಎನ್ನಬಹುದು. "ನಾನು 2.6 ಲಕ್ಷ ಬಾಕಿ ಉಳಿಸಿಕೊಂಡಿದ್ದೇನೆ ಎನ್ನುವುದು ನಿಜ. ನಾನದನ್ನು ತೀರಿಸುತ್ತೇನೆ. ಅಷ್ಟು ಹಣವನ್ನು ಹೊಂದಿಸಲು ನನಗೆ ಸಮಯಾವಕಾಶ ಬೇಕು. ಕಳೆದ ಮೂವತ್ತು ವರ್ಷಗಳಿಂದ ನನಗೆ ಸಂಬಂಧಿಸಿದ ಯಾವ ಬಿಲ್ಲನ್ನು ಬಾಕಿ ಉಳಿಸಿಲ್ಲ. ಎಷ್ಟೆಂದರೂ ಇದು ಸರ್ಕಾರದ ಹಣ. ಸರ್ಕಾರಕ್ಕೆ ಸೇರಲಿ.

ಕೆಟ್ಟುಹೋದ ಮೀಟರ್!

ಈಗ ನಾವು ಬಿಜೆಪಿ ಅಧ್ಯಕ್ಷ ವೆಂಕಯ್ಯ ನಾಯ್ಡುರವರ ನಿವಾಸದಲ್ಲಿದ್ದೇವೆ. (ನಮ್ಮ ದುರಾದೃಷ್ಟಕ್ಕೆ) ಅವರು ಚುನಾವಣಾ ಪ್ರಚಾರಕ್ಕೆಂದು ಜಮ್ಮುವಿಗೆ ಹೋಗಿದ್ದಾರೆ. ಅವರ ಆಪ್ತಕಾರ್ಯದರ್ಶಿ ಸುರೇಶ್‌ರವರನ್ನೇ ಕೇಳೋಣ. ಬಾಕಿಯ ಬಗ್ಗೆ ಅವರು ಹೇಳುತ್ತಾರೆ "ನಮ್ಮ ಅಧ್ಯಕ್ಷರ ನಿವಾಸದ ವಿದ್ಯುತ್ ಮೀಟರ್ ಸರಿಯಿಲ್ಲ. ವಿದ್ಯುತ್ ನಿಂತಿರುವಾಗಲೂ ಅದು ಚಲಿಸುತ್ತದೆ. ಅದನ್ನು ಬದಲಾಯಿಸಿ ಹೊಸದನ್ನು ಹಾಕಲಾಯಿತು. ಅದೂ ಸರಿಯಿಲ್ಲ. ಅದನ್ನೂ ಬದಲಾಯಿಸಲು ಇವತ್ತು ಬರುತ್ತೇವೆಂದು ವಿದ್ಯುತ್ ಮಂಡಳಿಯ ಸಿಬ್ಬಂದಿಗಳು ತಿಳಿಸಿದ್ದರು. ಆದರೆ ಇವತ್ತು ಸರ್ಕಾರಿ ರಜೆ. ಕೆಟ್ಟುಹೋದ ಮೀಟರಿನಿಂದ ಬಿಲ್ಲು ಜಾಸ್ತಿ ಬಂದಿದೆ ಎಂದು ನನ್ನ ಅನಿಸಿಕೆ" . ಬಾಕಿ ಕಟ್ಟದಿರುವುದಕ್ಕೆ ನಮ್ಮ ಸಂಸತ್ ಸದಸ್ಯರು ಕತೆ ಕಟ್ಟಲು ತೆಗೆದುಕೊಳ್ಳುವ ಶ್ರಮದ ಬಗ್ಗೆ ನಾವು ಮೆಚ್ಚಿ ತಲೆದೂಗಲೇಬೇಕು!

ಇವರೆಲ್ಲ ನಮ್ಮನ್ನು ಪ್ರತಿನಿಧಿಸುವ ಜನಪ್ರತಿನಿಧಿಗಳು, ನಾವು ತೆರುವ ವಿವಿಧ ಬಗೆಯ ತೆರಿಗೆಗಳಿಂದ ಕೊಬ್ಬಿಹೋಗಿದ್ದಾರೆ. ಕೆಲವು ಲಕ್ಷಗಳು ಇವರಿಗೆ ಹೊರೆಯೇ ಇಲ್ಲ. ಇವರಿಗಾಗದಿದ್ದರ ಇವರ ಪಕ್ಷಗಳೇ ತುಂಬಬಹುದು. ಅದನ್ನೂ ಪಾವತಿಸಲಾಗದ ಇಂತಹ ದಟ್ಟ ದರಿದ್ರರನ್ನು ನಾವು ಚುನಾಯಿಸುತ್ತೇವಲ್ಲ.

ಇವರಿಗೆ ಒಂದು ಮನೆ ಸಾಲದು

ಕೆಲವರಿಗೆ ಬಾಕಿ ಉಳಿಸಿಕೊಳ್ಳುವ ಚಾಳಿಯಿದ್ದರೆ ಇನ್ನು ಕೆಲವು ಸದಸ್ಯರಿಗೆ ಒಂದಕ್ಕಿಂತ ಹೆಚ್ಚು ಸರ್ಕಾರಿ ನಿವಾಸಗಳಲ್ಲಿ ಠಿಕಾಣಿ ಹೂಡುವ ಚಾಳಿ. 22 ಮಂದಿ ಸಂಸತ್ ಸದಸ್ಯರು ಎರಡು ಅಥವಾ ಎರಡಕ್ಕಿಂತ ಹೆಚ್ಚು ನಿವಾಸ ಹೊಂದಿದ್ದಾರೆ. ಇವರಲ್ಲಿ 12 ಮಂದಿ ಬಿಜೆಪಿಯವರು, 4 ಮಂದಿ ಕಾಂಗ್ರೆಸ್ಸಿನವರು, 6 ಮಂದಿ ಇತರ ಪಕ್ಷಗಳಿಗೆ ಸೇರಿದ್ದಾರೆ.


ಉಮಾಭಾರತಿ ಮಧ್ಯಪ್ರದೇಶದ ಮುಖ್ಯಮಂತ್ರಿ ಆದ ಮೇಲೂ, ವಸುಂಧರಾ ರಾಜೆ ರಾಜಸ್ಥಾನದ ಮುಖ್ಯಮಂತ್ರಿ ಆದಮೇಲೂ ದೆಹಲಿಯಲ್ಲಿ ತಮಗೆ ನೀಡಿದ್ದ ನಿವಾಸಗಳನ್ನು ತೆರವು ಮಾಡುವ ತೊಂದರೆಯನ್ನು ತೆಗೆದುಕೊಂಡಿಲ್ಲ. ಮುಖ್ಯಮಂತ್ರಿ ಆಗುತ್ತಿದ್ದಂತೆ ತಾನೇ ತಾನಾಗಿ ಎಂ.ಪಿ.ಗಳಿಗೆ ಕೊಡಮಾಡುವ ಸೌಲಭ್ಯಗಳು ನಿಂತುಹೋಗುತ್ತವೆ. ಆದರೆ ಈ ಇಬ್ಬರು ಮುಖ್ಯಮಂತ್ರಿಗಳಿಗೆ ಸೌಲಭ್ಯಗಳು ಇನ್ನೂ ಮುಂದುವರಿದಿವೆ. ನಮ್ಮ ಚಾಣಾಕ್ಷ, ಮುತ್ಸದ್ದಿ

ಪುಟ 4ಕ್ಕೆ

ಕಾನೂನಿನ ಎದುರು ಎಲ್ಲರೂ ಸರಿಸಮಾನರು ಎಂಬ ಮಾತು ಕಾನೂನಿನ ಪುಸ್ತಕದಲ್ಲಿ ಮಾತ್ರ. ಇಲ್ನೋಡಿ. ಕಾನೂನು ರಚಿಸುವವರೇ ಕಾನೂನುಗಳನ್ನು ನುಂಗಿ ನೀರು ಕುಡಿಯುತ್ತಿದ್ದಾರೆ!

ಪ್ರಧಾನಿ ವಾಜಪೇಯಿಯ ಮೌನ

ಇತ್ತೀಚೆಗೆ ವಾಜಪೇಯಿ ಭಾಷಣ ಮಾಡುತ್ತ ವಿದೇಶಿ ಮೂಲದವರು ಉನ್ನತ ಸ್ಥಾನಕ್ಕೆ ಬರುವುದರ ಕುರಿತು ಚರ್ಚೆಯಾಗಬೇಕು ಎಂದಿದ್ದಾರೆ. ಹೀಗೆ ಕರೆ ಕೊಡುವಾಗ ಅವರ ಮನಸ್ಸಿನಲ್ಲಿ ಸೋನಿಯಾ ಇದ್ದರು ಎಂದು ಸುಲಭವಾಗಿ ಊಹಿಸಬಹುದು. ನಿಜ ವಾಗಿಯೂ ವಾಜಪೇಯಿ ಪ್ರಧಾನ ಮಂತ್ರಿ ಸ್ಥಾನದ ಜವಾಬ್ದಾರಿಯಿಂದ ಮಾತನಾಡುವವರಾಗಿದ್ದರೆ ವಿರೋಧ ಪಕ್ಷದ ನಾಯಕಿಯಾಗಿರುವ ಸೋನಿಯಾರವರಿಗೆ ಅವರ ಬಾಕಿಯನ್ನು ಸರ್ಕಾರಕ್ಕೆ ತುಂಬಲು ಒತ್ತಾಯಿಸಬೇಕಿತ್ತು. ಆದರೆ ವಾಜಪೇಯಿಗೆ ಅಂತಹ ನೈತಿಕ ಸ್ಥೈರ್ಯವಿಲ್ಲ. ಯಾಕೆಂದರೆ ಅವರ ಸಂಗಡಿಗರೇ ಕೋಟಿಗೂ ಹೆಚ್ಚು ಬಾಕಿ ಉಳಿಸಿದ್ದಾರೆ. ತಾವು ಭಾರತೀಯರಾಗಿ ದ್ರೋಹ ಬಗೆದಿದ್ದಾರೆ. ನೈತಿಕತೆ ಸತ್ತು ಹೋದ ಕಡೆ ವಿದೇಶಿ ಮೂಲದಂತಹ ಕ್ಷುಲ್ಲಕ ವಿಚಾರ ರಾಷ್ಟ್ರೀಯ ಚರ್ಚೆಯಾಗಬೇಕು ವಾಜಪೇಯಿಯವರಿಗೆ. ಪ್ರಧಾನಿಯವರ ಭ್ರಷ್ಟಾಚಾರ ಕುರಿತ ಮೌನ ಕೂಡ ಹೆಚ್ಚಿನ ಭ್ರಷ್ಟಾಚಾರಕ್ಕೆ ಪ್ರೇರಣೆ ನೀಡುತ್ತದೆ. ಇಲ್ಲಿಯ ತನಕ ವಾಜಪೇಯಿಯವರಿಗೆ ದೇಶದ ಬಗ್ಗೆ ನಾಟಕೀಯ ಕಾಳಜಿ ಇರಲಿಲ್ಲ ಎಂದು ಭಾವಿಸಲಾಗಿತ್ತು. ಆದರೆ ಜನಪ್ರಿಯ ಪ್ರಧಾನಿಯೂ ಕರ್ತವ್ಯ ಭ್ರಷ್ಟತೆಯಿಂದ ಮುಕ್ತರಾಗಿಲ್ಲ. ಇಂತಹವರಿಂದಲೇ 2020ರ ಹೊತ್ತಿಗೆ ಭಾರತ ಸೂಪರ್ ಪವರ್ ಆಗುತ್ತದೆನ್ನುವುದು ಶತಮಾನದ ಜೋಕ್.



ವಿದ್ಯುತ್, ನೀರು ಮತ್ತು ದೂರವಾಣಿ ಬಾಕಿ ಉಳಿಸಿಕೊಂಡ ಸಂಸತ್ ಸದಸ್ಯರ ಪಕ್ಷವಾರು ವಿವರ

ಒಟ್ಟು ಸದಸ್ಯರು	80
ಬಿ.ಜೆ.ಪಿ	34
ಕಾಂಗ್ರೆಸ್	20
ಇತರ ಪಕ್ಷಗಳು	24

★

ಬಿಜೆಪಿ ಸದಸ್ಯರ

ಒಟ್ಟು ಬಾಕಿ	13,323 ಕೋಟಿ ರೂ
ಕಾಂಗ್ರೆಸ್ ಸದಸ್ಯರು	88,59 ಲಕ್ಷ ರೂ.
ಇತರ ಪಕ್ಷಗಳ ಸದಸ್ಯರು	75,95 ಲಕ್ಷ ರೂ.
ಒಟ್ಟು	2,9777 ಕೋಟಿ ರೂ.

★

5 ಲಕ್ಷಕ್ಕಿಂತ ಹೆಚ್ಚು ಬಾಕಿ ಉಳಿಸಿಕೊಂಡವರ ವಿವರಗಳು

ಕಾಂಗ್ರೆಸ್	
ಪಿ.ಎಂ.ಸಯೀದ್	29 ಲಕ್ಷ ರೂ.
ಸೋನಿಯಾ ಗಾಂಧಿ	21 ಲಕ್ಷ ರೂ.
ರಮಾ ಪೈಲಟ್	7 ಲಕ್ಷ ರೂ.
ಬಿಜೆಪಿ	
ಪ್ರಮೋದ್ ಮಹಾಜನ್	17 ಲಕ್ಷ ರೂ.
ರಾಜೀವ್ ಪ್ರತಾಪ್ ರೂಡಿ	13 ಲಕ್ಷ ರೂ.
ಸಾಹಿಬ್‌ಸಿಂಗ್ ವರ್ಮಾ	17 ಲಕ್ಷ ರೂ.
ಸುಖದೇವ ಸಿಂಗ್ ಧಿಂಡ್ಸಾ	11 ಲಕ್ಷ ರೂ.
ಶಿವರಾಜ್ ಸಿಂಗ್	18 ಲಕ್ಷ ರೂ.
ಡಾ. ಸಂಜಯ್ ಪಾಸ್ವಾನ್	11 ಲಕ್ಷ ರೂ.
ಇತರ ಪಕ್ಷಗಳು	
ನಿತೀಶ್ ಕುಮಾರ್(ಜೆಡಿಯು)	7 ಲಕ್ಷ ರೂ.
ಅಜಿತ್ ಸಿಂಗ್ (ಆರ್‌ಜೆಡಿ)	5 ಲಕ್ಷ ರೂ.
ಚಂದ್ರಶೇಖರ್(ಎಸ್‌ಜೆಡಿ-ಆರ್)	7 ಲಕ್ಷ ರೂ.
ಪಿ.ಎ.ಸಂಗ್ಮಾ	9 ಲಕ್ಷ ರೂ.
ಮೊ.ಶಹಾಬುದ್ದೀನ್	19 ಲಕ್ಷ ರೂ.

ಕರ್ನಾಟಕ ವಿಧಾನಸಭಾ ಚುನಾವಣೆ - 2004

ಬಿಜೆಪಿಯವರು ಹೇಳುವುದೊಂದು. ಮಾಡುವುದು ಇನ್ನೊಂದು ! ನಂಬಲರ್ಹರಲ್ಲ. ಅವರಿಂದ ಭಿನ್ನರಲ್ಲದವರು ಕಾಂಗ್ರೆಸ್ಸಿಗರು. ಇವರಬ್ಬರನ್ನು ಬಿಟ್ಟು ಇನ್ನ್ಯಾರಿದ್ದಾರೆ ಕರ್ನಾಟಕದ ಹಿತ ಕಾಯುವವರು ? ಮುಂದೆ ಓದಿ

ತೃತೀಯ ಶಕ್ತಿ

ಕರ್ನಾಟಕದ ಜನತೆಯ ಆಯ್ಕೆ

ನಿತ್ಯಾನಂದಸ್ವಾಮಿ

ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್.ಡಿ.ಎ ಕೂಟವು ಹೇಗಾದರೂ ಮಾಡಿ ಮತ್ತೆ ಅಧಿಕಾರಕ್ಕೆ ಬರಲು ಭಾರೀ ಕಸರತ್ತು ನಡೆಸಿದೆ. 'ಸಾರ್ವಜನಿಕ ರಂಗದ ಉದ್ದಿಮೆಗಳ ಖಾಸಗೀಕರಣ' ಎಂಬ ಹೆಸರಿನ ಬಹು ಕೋಟಿ ರೂಪಾಯಿಗಳ ಹಗರಣದಿಂದ ಸಂಗ್ರಹಿಸಿಡಲಾದ ಹಣದ ರುಚಿ ತೋರಿಸಿ ಚಲನಚಿತ್ರ ತಾರೆಯರನ್ನು, ಅಧಿಕಾರದಲ್ಲಿದ್ದಾಗ ಲೂಟಿ ಮಾಡಿ ನಿವೃತ್ತರಾದ ಹಿರಿಯ ಅಧಿಕಾರಿಗಳನ್ನು, ಬೇರೆ ಪಕ್ಷಗಳಲ್ಲಿ ಅಧಿಕಾರದ ಎಲ್ಲ ಮಜಲುಗಳನ್ನು ಅನುಭವಿಸಿ ಈಗ ಸವಕಲು ನಾಣ್ಯಗಳಂತಾಗಿರುವ ಅತೃಪ್ತರನ್ನು ಬಿಜೆಪಿ ತೆಕ್ಕೆಗೆ ಸೇರಿಸಿಕೊಳ್ಳುವ ಮೂಲಕ ತನಗೆ ಭಾರೀ ಬೆಂಬಲ ವ್ಯಕ್ತವಾಗುತ್ತಿದೆ ಎಂದು ಬೀಗುತ್ತಿದೆ. ನೂರಾರು ಕೋಟಿ ರೂ. ಜನರ ಹಣವನ್ನು ಬಳಸಿದ ಜಾಹಿರಾತುಗಳು, ಅಭಿವೃದ್ಧಿ ಕುರಿತಾದ ಸುಳ್ಳು ಅಂಕಿ-ಸಂಖ್ಯೆಗಳು, ಮತದಾರರನ್ನು ಗೊಂದಲಕ್ಕೀಡುಮಾಡುವ ಉದ್ದೇಶದ ಸಮೀಕ್ಷೆಗಳು, ಜನತೆಗೆ ಮಂಕುಬೂದಿ ಎರೆಚುವ ರಥಯಾತ್ರೆಗಳು ಮುಗ್ಧ ಮುಸಲ್ಮಾನರ ಮತಗಳನ್ನು ಕಿತ್ತುಕೊಳ್ಳುವ ಉದ್ದೇಶದ ಮುಖವಾಡಗಳು, ಬಹುಸಂಖ್ಯಾತ ಹಿಂದೂಗಳ ನಡುವೆ ಮತೀಯ ದ್ವೇಷದ ಕಿಚ್ಚು ಆರದಂತೆ ನೋಡಿಕೊಳ್ಳುವ ಉದ್ದೇಶದ ಬಿಜೆಪಿ ಮುನ್ನೋಟ ಮತ್ತು ಎನ್.ಡಿ.ಎ. ಪ್ರಣಾಳಿಕೆಯಂತಹ ದಾಖಲೆಗಳು ಇವೆಲ್ಲವುಗಳ ಮೂಲಕ ಒಮ್ಮೆ ಕೈಗೆ ಸಿಕ್ಕ ಅಧಿಕಾರವನ್ನು ಉಳಿಸಿಕೊಳ್ಳಲು ಬಿಜೆಪಿ ಹತಾಶ ಪ್ರಯತ್ನ ನಡೆಸಿದೆ.

ಇತ್ತ ಕರ್ನಾಟಕವನ್ನು ಇನ್ನೊಂದು ಗುಜರಾತ್ ಮಾಡುತ್ತೇವೆ ಎಂಬ ಬಿಜೆಪಿಯವರ ಘೋಷಣೆಗೆ ಜನತೆಯ ಬೆಂಬಲ ವ್ಯಕ್ತವಾಗದಿರುವುದನ್ನು ಕಂಡು ಅನಂತಕುಮಾರ್ ಮತ್ತು ಆತನ ಚಡ್ಡಿ ಪಡೆಗೆ ದಿಕ್ಕು ತೋಚದಂತಾಗಿದೆ. 1999 ಚುನಾವಣೆಯಲ್ಲಿ ಕರ್ನಾಟಕದ ಮತದಾರರು ಚುನಾವಣಾ ಪೂರ್ವದ ಸಮೀಕ್ಷೆಗಳನ್ನೆಲ್ಲಾ ಸುಳ್ಳಾಗಿಸಿ ಬಿಜೆಪಿಗೆ ಹೃದಯಾಘಾತ ಉಂಟುಮಾಡಿದ್ದರು. ಲೋಕಸಭೆಯಲ್ಲಿ ಕರ್ನಾಟಕದಿಂದ ಬಿಜೆಪಿಯ ಪ್ರಾತಿನಿಧ್ಯ 13 ಸ್ಥಾನಗಳಿಂದ 7 ಕ್ಕೆ ಕುಸಿದಿತ್ತು. ರಾಜ್ಯ ವಿಧಾನಸಭೆಯಲ್ಲಿ ಕೇವಲ 44 ಸ್ಥಾನಗಳಿಗೆ ಅದು ತೃಪ್ತಿಪಡಬೇಕಾಯಿತು. ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿಗಳಾಗಿದ್ದ ಯಡಿಯೂರಪ್ಪ, ಈಶ್ವರಪ್ಪ ಮೊದಲಾದವರು ಹೀನಾಯ ಸೋಲು ಅನುಭವಿಸಿದ್ದರು. ಅನಂತರ ನಡೆದ ಜಿಲ್ಲಾ ಪಂಚಾಯತ್, ತಾಲೂಕ್ ಪಂಚಾಯತ್ ಚುನಾವಣೆಗಳಲ್ಲಿ ಬಿಜೆಪಿ ನಾಲ್ಕನೇಯ ಸ್ಥಾನಕ್ಕೆ ತಳ್ಳಲ್ಪಟ್ಟಿತ್ತು. ಯಾವುದೇ ಮಹಾನಗರಪಾಲಿಕೆ, ನಗರಪಾಲಿಕೆಗಳಲ್ಲಿ ಅಧಿಕಾರಕ್ಕೆ ಬರಲು ಬಿಜೆಪಿಗೆ ಸಾಧ್ಯವಾಗಿರಲಿಲ್ಲ. ನಂತರದ ವಿಧಾನಸಭಾ ಉಪಚುನಾವಣೆಗಳಲ್ಲಿಯೂ ಬಿಜೆಪಿಗೆ ಒಂದೂ ಸ್ಥಾನವನ್ನು ಗೆಲ್ಲಲಾಗಿರಲಿಲ್ಲ. ಬಿಜೆಪಿ ಟಿಕೇಟ್ ಪಡೆದು ಗೆದ್ದ 8 ಜನ ಶಾಸಕರು ಪಕ್ಷವನ್ನು ಬಿಟ್ಟುಹೋದರು. ಇತ್ತೀಚೆಗೆ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ನ 25 ಸ್ಥಾನಗಳಿಗೆ ನಡೆದ ಚುನಾವಣೆಗಳಲ್ಲಿಯೂ ಬಿಜೆಪಿಗೆ ಒಂದೂ ಸ್ಥಾನವನ್ನು ಗೆಲ್ಲಲಾಗಲಿಲ್ಲ. ಕೇಂದ್ರದ ಎನ್.ಡಿ.ಎ. ಸರ್ಕಾರದ ವೈಫಲ್ಯಗಳೇ ಕರ್ನಾಟಕದ ಜನತೆ ಬಿಜೆಪಿಯನ್ನು ಪ್ರತಿಯೊಂದು ಹಂತದಲ್ಲೂ ತಿರಸ್ಕರಿಸಲು ಕಾರಣವಾಗಿದೆ. ವಾಜಪೇಯಿ ಅವರ ನಾಯಕತ್ವವಾಗಲಿ, ಬಿಜೆಪಿಯ ಆಡಂಬರವಾಗಲಿ ಕರ್ನಾಟಕದ ಜನತೆಯನ್ನು ಆಕರ್ಷಿಸುವುದಿಲ್ಲ ಎಂಬುದು ಇದರಿಂದ ಸಾಬೀತಾಗಿದೆ.


ಬಿಜೆಪಿಗೆ ರಾಜ್ಯದಲ್ಲಿ ಸ್ವತಂತ್ರವಾಗಿ ಅಧಿಕಾರಕ್ಕೆ ಬರುವುದು ಸಾಧ್ಯವಿಲ್ಲ ಎಂದು ಮನವರಿಕೆಯಾಗಿ ರಾಜ್ಯ ಬಿಜೆಪಿ ಕೊರಗುತ್ತಿದ್ದಾಗ ಕರ್ನಾಟಕದ ಮಹಾನ್ ಸಂದರ್ಭಸಾಧಕ ಜಾರ್ಜ್ ಫರ್ನಾಂಡಿಸ್ ಇಲ್ಲಿಗೆ ಓಡಿ ಬಂದು ಕರ್ನಾಟಕದಲ್ಲಿ ಒಂದು ಎನ್‌ಡಿಎ ಮಾದರಿಯ ಸರ್ಕಾರ ರಚಿಸಬಹುದೆಂಬ ವಿಷಬೀಜ ಬಿತ್ತಿದ್ದಾರೆ. ಇವರು ಶವಪೆಟ್ಟಿಗೆ ವ್ಯವಹಾರದಲ್ಲಿ ಮಾಡಿದ ಸಂಪಾದನೆಯ ಕೆಲವು ಕೋಟಿಗಳನ್ನು ಮತ್ತು ಸಾಯುವ ಮೊದಲು ರಾಜ್ಯಪಾಲರ ಹುದ್ದೆಯನ್ನು ನೀಡುವ ಭರವಸೆಯನ್ನು ಕೊಟ್ಟು 'ರೊಯಿಸ್ಟ್' ಬೊಮ್ಮಾಯಿ ಒಬ್ಬರನ್ನು ಬುಟ್ಟಿಗೆ ಹಾಕಿಕೊಂಡರೂ ಎನ್‌ಡಿಎ ಮಾದರಿಯ ಸರ್ಕಾರ ರಚಿಸುವ ಸಾಧ್ಯತೆಯ ಬಗ್ಗೆ ಕರ್ನಾಟಕದ ಜನತೆಯಲ್ಲಿ ಕಿಂಚಿತ್ತೂ ಆಸಕ್ತಿ ಕೆರಳಲಿಲ್ಲ. ಹೀಗಾಗಿ ಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಾಗಲಿ ಅವರ ಕೂಟವೇ ಆಗಲಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬರುವ ಅವರ ಕನಸು ನುಚ್ಚು ನೂರಾಗುವುದು ಶತಸಿದ್ಧ

ಕಾಂಗ್ರೆಸ್ ಪಕ್ಷಕ್ಕೆ ಪಾಠ ಕಲಿಸಬೇಕು


ಕಳೆದ ನಾಲ್ಕುವರೆ ವರ್ಷಗಳಿಂದ ರಾಜ್ಯದಲ್ಲಿ ಅಧಿಕಾರ ನಡೆಸಿದ ಎಸ್.ಎಂ.ಕೃಷ್ಣಾರವರ ಕಾಂಗ್ರೆಸ್ ಕೂಡಾ ಮತ್ತೆ ಅಧಿಕಾರಕ್ಕೆ ಬರುವ ಕನಸು ಕಾಣುತ್ತಿದೆ. ಕರ್ನಾಟಕದ ಪ್ರಬುದ್ಧ ಮತದಾರರು ಕೃಷ್ಣ ಸರ್ಕಾರದ ಆಡಳಿತದ ಮೌಲ್ಯ ಮಾಪನದಲ್ಲಿ ತೊಡಗಿದ್ದಾರೆ. ಕೃಷ್ಣ ಸರ್ಕಾರದ ಆಡಳಿತ ವೈಖರಿಯನ್ನು ಪರಿಶೀಲಿಸುವಾಗ ಕೃಷ್ಣರವರ ಸರ್ಕಾರ ಎನ್‌ಡಿಎ ಸರ್ಕಾರದ ಒಂದು ಭಾಗವಾಗಿತ್ತೇ ಎಂಬ ಸಂದೇಹ ಬಾರದಿರುವುದಿಲ್ಲ.




ಸಿದ್ದರಾಮಯ್ಯ



ಜಿ.ಎನ್.ನಾಗರಾಜ್



ಡಾ. ಸಿದ್ದನಗೌಡ ಪಾಟೀಲ್



ಪುಟ್ಟಣ್ಣಯ್ಯ

ರಾಜ್ಯ ಜನತಾದಳದ ಒಡಕಿನ ಲಾಭ ಪಡೆದು 1999 ರಲ್ಲಿ ಕಾಂಗ್ರೆಸ್ ಗೆಲ್ಲುವಂತಾಗಿ, ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ತಕ್ಷಣದಿಂದ ವಾಜಪೇಯಿ ಸರ್ಕಾರದ ಮಾದರಿಯಲ್ಲೇ ವಿಶ್ವಬ್ಯಾಂಕ್ ನಿರ್ದೇಶಿತ ದಾರಿಯನ್ನು ತುಳಿಯಲಾರಂಭಿಸಿದರು. ಕರ್ನಾಟಕಕ್ಕೆ ಮುಖ್ಯವಾಗಿ ಬೆಂಗಳೂರು ನಗರಕ್ಕೆ ವಿಶ್ವ ಬಂಡವಾಳವನ್ನು ಆಕರ್ಷಿಸಲು ಆದ್ಯತೆ ನೀಡಲಾಯಿತು. ಬೆಂಗಳೂರನ್ನು ಸಿಂಗಪುರ ಮಾಡುತ್ತೇನೆ ಎಂದು ಹೇಳುತ್ತಾ ವಿಶ್ವಬ್ಯಾಂಕಿನಿಂದ ಸಾಲವಾಗಿ ಪಡೆದ ಕೋಟಿಗಟ್ಟಲೆ ರೂಪಾಯಿ ಹಣವನ್ನು ಸುರಿದು ಬೆಂಗಳೂರಿನಲ್ಲಿ ಫ್ಲೈ ಓವರ್‌ಗಳು, ರಿಂಗ್ ರಸ್ತೆಗಳು ನಿರ್ಮಾಣ ಮಾಡುತ್ತಾ, ಐಟಿ, ಬಿಟಿ ಭಾಷೆ ಮಾತನಾಡುತ್ತಾ ಮೇಲ್ವರ್ಗದ ಜನರಲ್ಲಿ ಅಭಿವೃದ್ಧಿಯ ಭ್ರಮೆಗಳನ್ನು ಹುಟ್ಟಿಸುತ್ತಾ, ಪ್ರಚಾರ ಗಿಟ್ಟಿಸುತ್ತಾ ಸಾಗಿದ ಕೃಷ್ಣರ ಆಡಳಿತವು ನಾಡಿನ ರೈತರ ಮತ್ತು ಗ್ರಾಮೀಣ ಬಡವರ ಸಮಸ್ಯೆಗಳನ್ನು ಎದುರಿಸಿ ಬಗೆಹರಿಸುವಲ್ಲಿ ಮುಗ್ಗರಿಸಿ ಬಿದ್ದದ್ದು ಸುದ್ದಿಯಾಗಲೇ ಇಲ್ಲ.

ವಾಜಪೇಯಿ ಸರ್ಕಾರವು ದೇಶದ ಕೃಷಿ ಕ್ಷೇತ್ರವನ್ನು ಡಬ್ಲ್ಯು.ಟಿ.ಓ ಎಂಬ ಕಟುಕನ ಕೈಗೆ ಒಪ್ಪಿಸಿದ ಪರಿಣಾಮವಾಗಿ ರಾಜ್ಯದ ರೈತರು ದಿಕ್ಕಿಲ್ಲದವರಾಗಿ ವಧಾಸ್ಥಾನದತ್ತ ಹೆಜ್ಜೆ ಹಾಕತೊಡಗಿದಾಗ ಕೃಷ್ಣ ಸರ್ಕಾರ ಎಳ್ಳಷ್ಟೂ ವಿಚಲಿತವಾಗಲಿಲ್ಲ. ಬೆಳೆಹಾನಿ, ಬೆಲೆಕುಸಿತ, ಸಾಲದ ಬಾಧೆ ತಾಳಲಾರದೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾಗ ಅವರ ಸಾಲವನ್ನು ಸರ್ಕಾರವೇ ವಹಿಸಿಕೊಂಡು ಸಾವಿನ ದವಡೆಯಿಂದ ಅವರನ್ನು ಪಾರು ಮಾಡುವುದನ್ನು ಬಿಟ್ಟು 'ಚಟಗಳಿಗೆ ಬಲಿಯಾದ ರೈತರು ಸಾಲ ಮಾಡಿ ಸಾಯುತ್ತಿದ್ದಾರೆ' ಎಂದು ಹೇಳುವಷ್ಟು ಭಂಡತನವನ್ನು ಪ್ರದರ್ಶಿಸಿದ್ದು ನಾಡಿನ ಜನತೆ ಮರೆತಿಲ್ಲ. ರೈತರ ಸರಣಿ ಆತ್ಮಹತ್ಯೆಗಳ ಬಗ್ಗೆ ಸರ್ಕಾರದ ನಿಲುವು ರಾಜ್ಯಾದ್ಯಂತ ತೀವ್ರ ಟೀಕೆಗೆ ಒಳಗಾದಾಗ ಯಾವುದೇ ತಿರುಳಿಲ್ಲದ 'ರೈತರ ಪ್ಯಾಕೇಜ್' ಪ್ರಕಟಿಸಿ, ಎಸ್.ಎಂ.ಕೃಷ್ಣ ಕೈತೊಳೆದುಕೊಂಡಿದ್ದರು. ರೈತರ ಆತ್ಮಹತ್ಯೆಗಳು ಮಾತ್ರ ಇಂದಿಗೂ ನಿಂತಿಲ್ಲ.

ರೈತರೆ ದಿವಾಳಿಯಾಗುತ್ತಿರುವಾಗ ರೈತರನ್ನು ಅವಲಂಭಿಸಿ ಬದುಕುತ್ತಿದ್ದ ಕೂಲಿಕಾರರು ಕೆಲಸ ಹುಡುಕಿಕೊಂಡು ಊರೂರು ಅಲೆಯುವಂತಾಗಿ, ಉಪವಾಸ ವನವಾಸ ಅನುಭವಿಸಿದರು ಮಾತ್ರವಲ್ಲ ಹಸಿವು ತಾಳಲಾರದೆ ಜೀವಬಿಟ್ಟರೂ ಕೇಂದ್ರ ಸರ್ಕಾರದ ಉಗ್ರಾಣಗಳಲ್ಲಿ ಕೊಳೆಯುತ್ತಿದ್ದ ಕೋಟಿಗಟ್ಟಲೆ ಟನ್ ಆಹಾರಧಾನ್ಯಗಳನ್ನು ಬಡಬಗ್ಗರಿಗೆ ಕೊಟ್ಟು ಅವರ ಪ್ರಾಣ ಉಳಿಸಲು ವಾಜಪೇಯಿ ಸರ್ಕಾರ ಮುಂದಾಗಲಿಲ್ಲ. ಅದರ ಬದಲು 1 ಕೋಟಿ ಟನ್‌ಗಳಷ್ಟು ಆಹಾರ ಧಾನ್ಯಗಳನ್ನು ರೇಷನ್ ದರಗಳಿಗಿಂತ ಕಡಿಮೆ ಬೆಲೆಗೆ ವಿದೇಶಕ್ಕೆ ಮಾರಾಟ ಮಾಡಲಾಯಿತು. ಮಾತ್ರವಲ್ಲ ಬಡವರ ರೇಷನ್ ಅಕ್ಕಿ, ಗೋದಿ ದರಗಳನ್ನು ಹೆಚ್ಚಿಸಿ ಬಡವರ ತುತ್ತು ಕೂಳನ್ನು ಕಿತ್ತುಕೊಳ್ಳುವ ಕೆಲಸ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಮಾಡಿತು. ಅಂತಹ ಸಮಯದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರವೂ ಬಡಜನರ ನೆರವಿಗೆ ಬರಲಿಲ್ಲ. ಅದರ ಬದಲು 69 ಲಕ್ಷ ಹಸಿರು ಪಡಿತರ ಕಾರ್ಡುಗಳಲ್ಲಿ 42 ಲಕ್ಷ ಕಾರ್ಡುಗಳನ್ನು ಕಡಿಮೆ ಮಾಡುವ ನಿರ್ಧಾರವನ್ನು ಕಾಂಗ್ರೆಸ್ ಸರ್ಕಾರ ಕೈಗೊಂಡಿತು. ರಾಜ್ಯಾದ್ಯಂತ ತೀವ್ರ ಪ್ರತಿಭಟನೆ ವ್ಯಕ್ತವಾದಾಗ ಎಲ್ಲ ಬಡವರಿಗೂ ಹಳದಿ ರೇಷನ್ ಕಾರ್ಡ್ ಕೊಡುತ್ತೇವೆ ಎಂಬ ಭರವಸೆ ನೀಡಲಾಯಿತು. ರೇಷನ್ ಕಾರ್ಡುಗಳಿಗಾಗಿ ಅರ್ಜಿಗಳನ್ನು ಸ್ವೀಕರಿಸುವ ಪ್ರಕ್ರಿಯೆ ನಡೆಯಿತು. ಆದರೆ ಕಾರ್ಡುಗಳ ಹಂಚಿಕೆ ಆಗಲಿಲ್ಲ ಮಾತ್ರವಲ್ಲ ರೇಷನ್ ದರಗಳನ್ನು ಎರಡು ಪಟ್ಟು ಹೆಚ್ಚಿಗೆ ಮಾಡಿ ಬಡವರ ಸುಲಿಗೆ ಮುಂದುವರೆಸಲಾಯಿತು.

ಲೋಕಸಭೆಯಲ್ಲಿ ತನಗಿದ್ದ ಬಹುಮತವನ್ನು ಬಳಸಿಕೊಂಡು ವಿದ್ಯುತ್ ರಂಗದ ಸುಧಾರಣೆಗಳ ಹೆಸರಿನಲ್ಲಿ ವಿದ್ಯುತ್ ಕಾಯ್ದೆ-2003 ಎಂಬ ಜನವಿರೋಧಿ ವಿದ್ಯುತ್ ಕಾಯ್ದೆಯನ್ನು ಪಾಸ್ ಮಾಡಿದ ವಾಜಪೇಯಿ ಸರ್ಕಾರ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸಬೇಕು ಮತ್ತು ವಿದ್ಯುತ್ ದರಗಳನ್ನು ಏರಿಸಬೇಕು ಎಂದು ಆದೇಶ ಹೊರಡಿಸಿತಲ್ಲದೆ ರಾಜ್ಯ ಸರ್ಕಾರಗಳು ಈ ಆದೇಶವನ್ನು ಜಾರಿಗೊಳಿಸದಿದ್ದರೆ ರಾಜ್ಯಗಳಿಗೆ ಕೇಂದ್ರದಿಂದ ನೀಡುವ ಅನುದಾನವನ್ನು ಕಡಿತ ಮಾಡುವ ಬೆದರಿಕೆ ಹಾಕಿದರು. ರಾಜ್ಯಗಳ ಹಕ್ಕುಗಳ ಮೇಲೆ ಆಕ್ರಮಣ ಮಾಡುವ ಕೇಂದ್ರ ಸರ್ಕಾರದ ಈ ಕ್ರಮವನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ವಿರೋಧಿಸಲಿಲ್ಲ ಮಾತ್ರವಲ್ಲ ವಿಶ್ವಬ್ಯಾಂಕ್ ದೊರೆಗಳನ್ನು ಸಂತೃಪ್ತಗೊಳಿಸುವ ಉದ್ದೇಶದಿಂದ ಕೇಂದ್ರ ಸರ್ಕಾರದ ಒತ್ತಡ ಬರುವ ಮೊದಲೇ ರಾಜ್ಯದಲ್ಲಿ ವಿದ್ಯುತ್ ರಂಗದ ಖಾಸಗೀಕರಣಕ್ಕೆ, ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವುದಕ್ಕೆ ಮತ್ತು ವಿದ್ಯುತ್ ದರಗಳನ್ನು ಏರಿಸುವುದಕ್ಕೆ ಕೃಷ್ಣಾ ಸರ್ಕಾರ ಮುಂದಾಯಿತು.

ಪುಟ 8 ಕ್ಕೆ

ದೂರದರ್ಶನದಲ್ಲಿ ಸಿಪಿಐ(ಎಂ) ಮುಖಂಡರ ಚುನಾವಣಾ ಪ್ರಚಾರ ಭಾಷಣ

ಸಿಪಿಐ(ಎಂ)ನ ಅಖಿಲ ಭಾರತ ಮುಖಂಡರ ಈ ಕೆಳಕಂಡ ದಿನಗಳಲ್ಲಿ ದೂರದರ್ಶನದಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡಲಿದ್ದಾರೆ.

ಏಪ್ರಿಲ್ 15, 2004	ರಾತ್ರಿ	8.40 ರಿಂದ 8.45
ಏಪ್ರಿಲ್ 17, 2004	ರಾತ್ರಿ	8.30 ರಿಂದ 8.40
ಏಪ್ರಿಲ್ 23, 2004	ರಾತ್ರಿ	9.10 ರಿಂದ 9.15
ಏಪ್ರಿಲ್ 28, 2004	ರಾತ್ರಿ	9.00 ರಿಂದ 9.10
ಮೇ 2, 2004	ರಾತ್ರಿ	8.55 ರಿಂದ 9.00
ಮೇ 7, 2004	ರಾತ್ರಿ	8.45 ರಿಂದ 8.55

ರಾಜ್ಯಮುಖಂಡರು ಕೆಳಕಂಡ ದಿನಗಳಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡಲಿದ್ದಾರೆ.

ದೂರದರ್ಶನ 15.04.04 ರಾತ್ರಿ 7.15ರಿಂದ 7.20
ಆಕಾಶವಾಣಿ16.04.04ರಾತ್ರಿ 8.15 ರಿಂದ 8.20

ಅಲ್ಲದೆ ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಸಿಪಿಐ(ಎಂ) ಮತ್ತು ಇತರೆ ರಾಜಕೀಯ ಪಕ್ಷಗಳ ಮುಖಂಡರ ಚರ್ಚಾಗೋಷ್ಠಿ ನಡೆಯಲಿದೆ. ವಿಷಯ: 'ರಾಜಕೀಯ ಪಕ್ಷಗಳು ಮತ್ತು ಪ್ರಣಾಳಿಕೆಗಳು'.

ಆಕಾಶವಾಣಿಯಲ್ಲಿ ಇದನ್ನು ಏಪ್ರಿಲ್ 13, 2004 ರಂದು ರಾತ್ರಿ 7.45ಕ್ಕೆ ಬಿತ್ತರಿಸಲಾಗುವುದು. ದೂರದರ್ಶನದಲ್ಲಿ ಏಪ್ರಿಲ್ 15 ಅಥವಾ 16 ರಂದು ಪ್ರಸಾರವಾಗುವ ನಿರೀಕ್ಷೆಯಿದೆ.

ಸಿಪಿಐ(ಎಂ), ಸಿಪಿಐ, ಜನತಾದಳ(ಜಾತ್ಯತೀತ) ಮತ್ತು ರೈತಸಂಘ ಬೆಂಬಲಿಸಿ

ಸೈದ್ಧಾಂತಿಕ ಬದ್ಧತೆಯ ರಾಜಕಾರಣಕ್ಕೆ ಸಿಪಿಐ(ಎಂ) ಕರೆ

ದೇಶದ ಬಹುಸಂಖ್ಯಾತ ದುಡಿವ ಜನರನ್ನು ದಾರಿ ತಪ್ಪಿಸಿ ತಮ್ಮ ಅಧಿಕಾರವನ್ನು ಭದ್ರ ಮಾಡಿಕೊಳ್ಳಲು ಯಾವುದೇ ಕಾರಣಕ್ಕೂ ದುಡಿಯುವ ಜನ ಬಿಡಬಾರದೆಂದು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಜಿ.ಎನ್. ನಾಗರಾಜು ಕರೆ ನೀಡಿದರು. ಅವರು ಏಪ್ರಿಲ್ 3ರಂದು ತುಮಕೂರಿನಲ್ಲಿ ನಡೆದ ದುಡಿಯುವ ಜನರ ರಾಜಕೀಯ ಸಮಾವೇಶದಲ್ಲಿ ಮಾತನಾಡುತ್ತಿದ್ದರು. ಮತದಾರರ ದಿಕ್ಕನ್ನೇ ತಪ್ಪಿಸುವಂತಹ ಪ್ರಯತ್ನಗಳನ್ನು ಬಿ.ಜೆ.ಪಿ. ಮತ್ತು ಕಾಂಗ್ರೆಸ್ ನಡೆಸಿದೆ. ಅಸಂಘಟಿತ ವಲಯದ ಕಾರ್ಮಿಕರ ಮೇಲೆ ದೊಡ್ಡ ರೀತಿಯಲ್ಲಿ ಪ್ರಹಾರ ಮಾಡಿ ಬಹುರಾಷ್ಟ್ರೀಯ ಕಂಪನಿಗಳಿಗೆ ಮಣೆ ಹಾಕಿರುವುದನ್ನು ಕಾಣುತ್ತಿದ್ದೇವೆ. ಹಾಗೂ ಪಡಿತರ ಚೀಟಿ ವಿಷಯದಲ್ಲಿ ಅವ್ಯವಸ್ಥೆ ಮಾಡಿ ಕೇಂದ್ರ ಸರ್ಕಾರದ ಗುಲಾಮರಂತೆ ರಾಜ್ಯ ಕಾಂಗ್ರೆಸ್ ಸರ್ಕಾರ ವರ್ತಿಸಿ ರೇಷನ್ ದರಗಳನ್ನು ದುಬಾರಿ ಮಾಡಿದೆ. ಹಾಗಾಗಿ ದೇಶದ ದುಡಿಯುವ ವರ್ಗದ ಜನರ ಪರ ಇರುವಂತಹ ಮತ್ತು ಜಾತ್ಯತೀತ ನಿಲುವು ಹೊಂದಿರುವಂತಹ, ಜನಪರ ಸೈದ್ಧಾಂತಿಕ ಬದ್ಧತೆ ಇರುವಂತಹ ಪಕ್ಷಗಳಿಗೆ ಮತ ನೀಡಲು ಕರೆ ನೀಡಿದರು.

ಸಿಐಟಿಯುನ ಮುಖಂಡರಾದ ಕಾಂ. ಮೀನಾಕ್ಷಿ ಸುಂದರಂ ಮಾತನಾಡಿ ಉದ್ಯೋಗದ ಹಕ್ಕುಗಳ ಮೇಲೆ ದಾಳಿ, ಮುಷ್ಕರದ ಹಕ್ಕನ್ನೇ ಇಲ್ಲವಾಗಿಸುವ ನೀತಿಗಳು, ಕೋಟಿ ಉದ್ಯೋಗದ ಸುಳ್ಳು ಭರವಸೆಗಳನ್ನು ನಮ್ಮನ್ನು ಆಳುವ ಸರ್ಕಾರಗಳು ನೀಡುತ್ತಾ ಬಂದಿವೆ. ಇಂತಹ ಪಕ್ಷಗಳನ್ನು ದೂರ ಇರಿಸಬೇಕೆಂದು ಜನತೆಗೆ ಮನವಿ ಮಾಡಿದರು. ದೇಶದಲ್ಲಿ 7 ಲಕ್ಷಕ್ಕಿಂತ ಹೆಚ್ಚು ಕಾರ್ಖಾನೆಗಳು ಮುಚ್ಚಿ ಲಕ್ಷಾಂತರ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ. ವಿದೇಶಿ ಆಮದಿನ ಮೇಲೆ ಸುಂಕ ವಿನಾಯಿತಿ ನೀಡಿ ವಿದೇಶದಿಂದ ಸಾಕಷ್ಟು ಉತ್ಪನ್ನಗಳನ್ನು ತರಿಸಿ ದೇಶದಲ್ಲಿ ರೈತರು ಬೆಳೆಯುವ ಬೆಳೆಗಳಿಗೆ ಬೆಲೆಗಳು ಕುಸಿತವಾಗಿ ರೈತರ ಆತ್ಮಹತ್ಯೆಗೆ ಕಾರಣವಾಗಿದೆ. ದೇಶದಲ್ಲಿ 1 ಲಕ್ಷ ಕೋಟಿ ರೂ.ಗಳಷ್ಟು ಹಣ ಈ ದೇಶದ ಶ್ರೀಮಂತ ವರ್ಗಗಳ ಕೈಗೆ ಸಿಕ್ಕಿದೆ. ಇವರೆಲ್ಲರಿಗೂ 80 ಸಾವಿರ ಕೋಟಿ ತೆರಿಗೆ ವಿನಾಯಿತಿ ನೀಡಿದ್ದಾರೆ ಎಂದು ಆಪಾದಿಸಿದರು.



ಸಿಐಟಿಯುನ ಮುಖಂಡರಾದ ಮಹಮದ್ ದಸ್ತೆಗೀರ್ ಮಾತನಾಡಿ ಜಾತ್ಯತೀತ ಪಕ್ಷಗಳಿಗೆ ಮತ ನೀಡಬೇಕೆಂದು ಮನವಿ ಮಾಡಿದರು. ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದ ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಸಯ್ಯದ್ ಮುಜೀಬ್‌ರವರು ಮಾತನಾಡಿ ನಾವು ಈ ಬಾರಿ ಬಿಜೆಪಿಯನ್ನು ಸೋಲಿಸದಿದ್ದರೆ ಇಡೀ ದೇಶ ಗುಜರಾತ್ ಆಗಿ ಪರಿಣಮಿಸಲಿದೆ. ಆದ್ದರಿಂದ ಜಾತ್ಯತೀತ ಶಕ್ತಿಗಳಿಗೆ ಬೆಂಬಲಿಸುವುದು ಅಗತ್ಯವಿದೆ ಎಂದರು.

ಸಭೆಯಲ್ಲಿ ಸಿ.ಪಿ.ಎಂ. ಮುಖಂಡರಾದ ಕೋದಂಡರಾವ್, ಬಿ.ಉಮೇಶ್ ಉಪಸ್ಥಿತರಿದ್ದರು. ಅಲ್ಲಾಬಕಾಶ್ ವಂದಿಸಿ, ಆರಂಭದಲ್ಲಿ ಸಿ.ಪಿ.ಐ.(ಎಂ)ನ ಎನ್.ಕೆ. ಸುಬ್ರಹ್ಮಣ್ಯ ಸ್ವಾಗತಿಸಿದರು.

ವರದಿ

ಹೆಚ್.ಕೆ.ವೆಂಕಟೇಶ್

ಬಾಕಿ ತೀರಿಸದ ತೆವಲಿನವರು

ಪುಟ 2 ರಿಂದ

ಪ್ರಧಾನಿ ವಾಜಪೇಯಿ ಕೂಡಾ ಈ ವಿಚಾರದಲ್ಲಿ ಮೌನವಾಗಿದ್ದಾರೆ.

ದೆಹಲಿಯಿಂದ ಮೂರು ಬಾರಿ ಆಯ್ಕೆಯಾಗಿರುವ ಬಿಜೆಪಿಯ ವಿಜಯ್ ಗೋಯಲ್ ಬಹಳ ಬುದ್ಧಿವಂತ. ತನ್ನ ನಿವಾಸದ ಪಕ್ಕದಲ್ಲಿ ಖಾಲಿಯಾದ ಇನ್ನೊಂದು ನಿವಾಸವನ್ನು ಛಾವಣಿಯ ಮೂಲಕ ಒಂದುಗೂಡಿಸಿ ಎರಡು ನಿವಾಸಗಳನ್ನು ಬಳಸುತ್ತಾರೆ. ಥಟ್ಟನೆ ಹೊರಗಿನಿಂದ ನೋಡಿದವರಿಗೆ ಇವರು ವಾಸಿಸುತ್ತಿರುವುದು ಒಂದೇ ಬಂಗಲೆಯಲ್ಲಿ ಎಂದು ಅನ್ನಿಸಬೇಕು. ಇವರ ಅವಳಿಜವಳಿ ನಿವಾಸ ಮಹದೇವ ರಸ್ತೆಯಲ್ಲಿದೆ.

ಇನ್ನು ಉತ್ತರಪ್ರದೇಶದ ಮಾಜಿ ಭಜರಂಗದಳದ ನಾಯಕ, ಹಾಲಿ ಉತ್ತರ ಪ್ರದೇಶದ ಬಿಜೆಪಿ ಅಧ್ಯಕ್ಷ ವಿನಯ ಕಟಿಯಾರ್ ಕೂಡ ಉತ್ತರ ಅವೆನ್ಯುದಲ್ಲಿರುವ 62 ಮತ್ತು 64 ನಂಬರಿನ ಎರಡು ಬಂಗಲೆಗಳನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡಿದ್ದಾರೆ. ಇವರು ಮೂರು ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದಾರೆ. ನಾಲ್ಕನೇ ಬಾರಿಗೂ ಸ್ಪರ್ಧಿಸುತ್ತಿದ್ದಾರೆ.

ಸಂಸದೀಯ ಗೃಹಸಮಿತಿ (parliamentary housing committee) ಛೇರ್‌ಮನ್ ಆಗಿರುವ ಎಸ್.ಎಸ್.ಚವ್ಹಾಣ್, ತನ್ನ ಅಧಿಕಾರ ಬಳಸಿ ಎರಡು ಬಂಗಲೆ ಪಡೆದಿದ್ದಾರೆ. ಪಂಡಿತ್ ಪಂತ್ ಮಾರ್ಗದಲ್ಲಿ ಒಂದು, ಇನ್ನೊಂದು 41 ನೇ ವಿ.ಪಿ.ಹೌಸ್‌ನಲ್ಲಿ ಇವರು ನಾಲ್ಕು ಬಾರಿ ಬಿಜೆಪಿಯಿಂದ ಎಂ.ಪಿಯಾಗಿದ್ದಾರೆ.

ದೆಹಲಿಯ ಮಾಜಿ ಮೇಯರ್ ಅನಿತಾ ಆರ್ಯ ಬಿಜೆಪಿಯಿಂದ ಮೊದಲಬಾರಿ 1999 ರಲ್ಲಿ ಎಂ.ಪಿ.ಯಾದರು. ಈಕೆಗೆ ಲೋಕಸಭಾ ರಾಜಕಾರಣದ ಅನುಭವವಿಲ್ಲದಿದ್ದರೂ ಉತ್ತರ ಅವೆನ್ಯೂದಲ್ಲಿ 3 ಮತ್ತು 5 ನಂಬರಿನ ಎರಡು ಬಂಗಲೆ ಹಿಡಿದಿದ್ದಾರೆ. ಇದೇ ಅವೆನ್ಯೂದ 123 ಮತ್ತು 125 ನಿವಾಸಗಳಲ್ಲಿ ಬಿಜೆಪಿಯ ಎರಡು ಬಾರಿಯ ಎಂ.ಪಿ.ಯೋಗಿ ಆದಿತ್ಯನಾಥ್ ಇದ್ದಾರೆ.

ಬಿ.ಎಸ್.ಪಿಯ ರಷೀದ್ ಅಲ್ವಿಗೆ ಎರಡು ನಿವಾಸಗಳೂ ಸಾಲವು. ಅವರು ಮೂರನೇಯದನ್ನು ಆಕ್ರಮಿಸಿದ್ದಾರೆ.

ಎರಡು ನಿವಾಸ ಹೊಂದಿರುವ ಕಾಂಗ್ರೆಸ್ಸಿನ ನಾಲ್ವರು ಅಷ್ಟೇನೂ ಖ್ಯಾತನಾಮರಲ್ಲ. ಎರಡು ಬಂಗಲೆ ಹೊಂದುವ ಲಾಲಸೆಗೂ, ಖ್ಯಾತಿಗೂ ಸಂಬಂಧವಿಲ್ಲ ಬಿಡಿ.

ದೇಶದ ಕೋಟ್ಯಾಂತರ ಭಾರತೀಯರಿಗೆ ಸ್ವಂತ ಮನೆಯಿಲ್ಲ. ಇನ್ನಷ್ಟು ಕೋಟ್ಯಾಂತರ ಮಂದಿಗೆ ಮನೆಯೇ ಇಲ್ಲ. ಇಂತಹುದರಲ್ಲಿ ನಮ್ಮ ಸಂಸತ್ ಸದಸ್ಯರಿಗೆ ತಮ್ಮ ಕಾರುಬಾರು ಮಾಡಲು ಒಂದು ಬಂಗಲೆ ಸಾಲದು!

ಈ ಬಾರಿ ಚುನಾವಣೆಯಲ್ಲಿ ಏಕಾಂಗಿಯಾಗೇ ಬಹುಮತ ಪಡೆಯುವ ನಿರೀಕ್ಷೆಯಿಂದಿರುವ ಬಿಜೆಪಿ ಸದಸ್ಯರೇ ವಿದ್ಯುತ್ತು, ನೀರು, ಟೆಲಿಫೋನ್ ಬಾಕಿ ಉಳಿಸಿಕೊಂಡಿರುವವರು ಮತ್ತು ಎರಡು ಬಂಗಲೆ ಆಕ್ರಮಿಸಿಕೊಂಡಿರುವವರ ಪಟ್ಟಿಯಲ್ಲಿ ಬಹುಮತ (majority) ಸಾಧಿಸಿದ್ದಾರೆ. ಇವರನ್ನು ನೋಡಿದಾಗ ಬಿಜೆಪಿಯ ಬಗ್ಗೆ ಭ್ರಮೆ ಇಟ್ಟುಕೊಳ್ಳುವುದು ಅನವಶ್ಯಕ ಅಲ್ಲವೆ?

ಕಾಂಗ್ರೆಸ್ಸನ್ನು ನಾವೆಂದೂ ಭ್ರಷ್ಟಾಚಾರ ಮುಕ್ತ ಪಕ್ಷವೆಂದು ಭಾವಿಸಿರಲಿಲ್ಲ. ತನ್ನ ಭ್ರಷ್ಟ ನಿಲುವುಗಳಿಂದಲೇ ಅದು ಇವತ್ತು ನಿಶ್ಯಕ್ತ ವಿರೋಧ ಪಕ್ಷ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ಇಂದು ಕಾಂಗ್ರೆಸ್‌ಗಾದ ಗತಿ ನಾಳೆ ಬಿಜೆಪಿಗಾಗಲಿದೆ. ಆ ವೇಳೆಗೆ ಸೆಕ್ಯೂಲರ್ ಮತ್ತು ಪ್ರಗತಿಗಾಮಿಯಾದಂತಹ ಪರ್ಯಾಯ ರಾಜಕೀಯ ಶಕ್ತಿಯೊಂದು ಧೃಡವಾಗಿ ಬೇಕು. ನಿರಾಶೆ ಬೇಡ, ಅಂತಹ ಶಕ್ತಿಯೊಂದು ಸಾಧ್ಯವಾಗುತ್ತದೆ. ಯಾಕೆಂದರೆ ಭಾರತೀಯ ಸಮಾಜದಲ್ಲಿ ಮನಸ್ಸಾಕ್ಷಿಯ ವಿಶಿಷ್ಟ ಚಲನಶೀಲ ಅಂತರ್ ಸೆಲೆಯೊಂದು ಸದಾ ಜೀವಂತವಾಗಿದ್ದುಕೊಂಡು ಬಂದಿದೆ.

ಅಕ್ಷರ ದಾಸೋಹ ಕಾರ್ಯಕರ್ತೆಯರ ಸಂಘಟನೆ - ರಚನೆ

ಕರ್ನಾಟಕದ ಪ್ರಾಥಮಿಕ ಶಾಲೆಯ ಪ್ರತಿ ಮಕ್ಕಳನ್ನು ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ತಂದಿದೆ. ಮಕ್ಕಳನ್ನು ಮರಳಿ ಶಾಲೆಗೆ ತರುವ ಕಾರ್ಯಕ್ರಮ ಈಗಾಗಲೇ ಗಂಭೀರ ಪರಿಣಾಮ ಉಂಟು ಮಾಡಿದೆ. ಈಗಿನ ವರದಿಗಳ ಪ್ರಕಾರ ಪ್ರಾಥಮಿಕ ಶಾಲಾ ಮಕ್ಕಳ ಹಾಜರಾತಿ ಸುಮಾರು ಒಂದು ಲಕ್ಷ ಏರಿಕೆಯಾಗಿದೆ.

ಈ ಯೋಜನೆಯನ್ನು 2004-05ನೇ ಸಾಲಿನ ಶೈಕ್ಷಣಿಕ ವರ್ಷದಿಂದ 7ನೇ ತರಗತಿಯವರೆಗಿನ ಎಲ್ಲಾ ಮಕ್ಕಳಿಗೂ ವಿಸ್ತರಿಸಲು ರಾಜ್ಯ ಸರ್ಕಾರ ಯೋಜಿಸಿದೆ. ಇದರಿಂದ 16ಲಕ್ಷ ಮಕ್ಕಳು ಅನುಕೂಲ ಪಡೆಯಲಿವೆ. ಈ ಯೋಜನೆಯ ವಿಸ್ತರಣೆಗೆ ಅಗತ್ಯ ಕ್ರಮ ಮುಂದಿನ ಸರ್ಕಾರ ಕೈಗೊಳ್ಳಬೇಕಿದೆ. ಕೇಂದ್ರ ಸರ್ಕಾರವೂ ಈ ಯೋಜನೆಯ ಬಗ್ಗೆ ಉತ್ತೇಜನದ ಮಾತುಗಳನ್ನಾಡಿದರೂ ನಿರ್ಧಾರಕವಾಗಿ ಏನನ್ನೂ ತೀರ್ಮಾನಿಸಿಲ್ಲವಾದರೂ ರಾಜ್ಯ ಸರ್ಕಾರ ಒಂದು ನೂರು ಕೋಟಿ ರೂ.ಗಳನ್ನು ಮೀಸಲಿಟ್ಟಿದೆ.

ಇಂತಹ ಮಹತ್ವದ ಯೋಜನೆಯನ್ನು ಫಲಾನುಭವಿಗಳಿಗೆ ಮುಟ್ಟಿಸುವ ಕೆಲಸ ಮಾಡುವ ಕೆಲಸಗಾರರ ಭವಿಷ್ಯ ಯಾವತ್ತು ಕತ್ತಲಲ್ಲೇ ಇರುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಯಾವುದೇ ಯೋಜನೆಗಳನ್ನು ತೆಗೆದುಕೊಂಡರೂ ಅದರಲ್ಲಿ ದುಡಿಯುವವರು ಯಾವಾಗಲೂ ನಗಣ್ಯವೇ ಆಗಿರುತ್ತಾರೆ. ಉದಾಃ ಮುಂದುವರಿದ ಶಿಕ್ಷಣದಲ್ಲಿ ದುಡಿಯುತ್ತಿರುವ ಪ್ರೇರಕರು, ಸಹಪ್ರೇರಕರು, ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿಯಲ್ಲಿ ಕೆಲಸ ಮಾಡುವ ಅಂಗನವಾಡಿ ನೌಕರರು, ಪಂಚಾಯ್ತಿ ನೌಕರರು.

"ಅಕ್ಷರ ದಾಸೋಹ"

ಈ ಕಾರ್ಯಕ್ರಮದಲ್ಲಿ ಸುಮಾರು ಒಂದು ಲಕ್ಷ ಕೆಲಸಗಾರರು ದುಡಿಯುತ್ತಿದ್ದಾರೆ. ಇವರಲ್ಲಿ ಶೇ.99 ಭಾಗ ಮಹಿಳೆಯರೇ. ಆದರೆ ಇವರಿಗೆ ಸರ್ಕಾರವೇ ಮುನ್ನೆಚ್ಚರಿಕೆಯ ಕ್ರಮವಾಗಿ ಕೇವಲ 10 ತಿಂಗಳು ಮಾತ್ರ ಎಂದು ಶಾಲಾ ಅಭಿವೃದ್ಧಿ ಸಮಿತಿ (School Development Committee) ಯಿಂದ ನೇಮಕಾತಿ ಆದೇಶದಲ್ಲಿ ನಮೂದಿಸಲಾಗಿದೆ. ಈ ಕೆಲಸಗಾರರನ್ನೇ 10 ತಿಂಗಳ ನಂತರ ಮುಂದುವರಿಸಬೇಕೆಂಬ ಯಾವ ನಿಯಮಗಳು ಇಲ್ಲ. ಇವರ ಗೌರವಧನ 650 ಮುಖ್ಯ ಅಡಿಗೆದಾರರು, 450 ಅಡಿಗೆದಾರರು, 300 ರೂ.ಸಹಾಯಕರು ಹೀಗೆ ಮೂರು ಸ್ಥಾನಗಳನ್ನು ಕಲ್ಪಿಸಿ ನೂರಾರು ಮಕ್ಕಳ ಹೊಟ್ಟೆಯನ್ನು ತುಂಬಿಸಲು ದುಡಿಸುತ್ತಾರೆ.

ನಿರಂತರವಾಗಿ ಇವರನ್ನೇ ದುಡಿಸುವು ದಾದರೆ ಈ ಕೆಲಸಗಾರರು ಒಗ್ಗಟ್ಟಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಾರೆ ಎಂಬ ಬೀತಿಯೂ ಸರ್ಕಾರಕ್ಕಿದೆ. ಹೈದರಾಬಾದ್ ಕರ್ನಾಟಕದ ಜಿಲ್ಲೆಗಳಲ್ಲಿ 2 ವರ್ಷದಿಂದ, ಉಳಿದ ಜಿಲ್ಲೆಗಳಲ್ಲಿ 10 ತಿಂಗಳಿಂದ ದುಡಿಯುತ್ತಿರುವ ಇವರಿಗೆ 3-4 ತಿಂಗಳಿಗೊಮ್ಮೆ ಗೌರವಧನ. ಇವರು ಯಾವಾಗಲೂ ಸ್ಕೂಲ್ ಡೆವಲಪ್‌ಮೆಂಟ್ ಕಮಿಟಿ, ಗ್ರಾಮ ಪಂಚಾಯ್ತಿ ಸದಸ್ಯರ ಕೃಪಾಕಟಾಕ್ಷದಲ್ಲಿಯೇ ಇರಬೇಕು. ತಮ್ಮ ಮೇಲೆ ಯಾವ ತರಹ ಒತ್ತಡ ಬಂದರೂ ಎದುರು ಬೀಳುವ ಪ್ರಶ್ನೆಯೇ ಇಲ್ಲ. ಎಲ್ಲಕ್ಕೂ ರಾಜಿ ಮಾಡಿಕೊಂಡೇ ಕೆಲಸ ನಿರ್ವಹಿಸಬೇಕು.

ಮುಖ್ಯ ಅಡಿಗೆದಾರರಿಗೆ ಶಾಲೆಯ ಪ್ರತಿದಿನ ಮಕ್ಕಳ ಹಾಜರಾತಿ ಶಾಲಾ ಮುಖ್ಯೋಪಾಧ್ಯಾಯರು ಕೊಡಬೇಕು. ಅದರ ಆಧಾರದಲ್ಲಿ ಅಡಿಗೆಯ ಸಾಮಾನುಗಳನ್ನು ತೆಗೆದುಕೊಂಡು, ರಿಜಿಸ್ಟರ್ ಪುಸ್ತಕ ನೊಂದಾಯಿಸಿ ಕೆಲಸ ನಿರ್ವಹಿಸಬೇಕು. ಆದರೆ ಹಲವಾರು ಶಾಲೆಗಳಲ್ಲಿ ಪ್ರತಿಯೊಂದನ್ನು ಶಾಲೆಯ ಮುಖ್ಯೋಪಾದ್ಯಯರೇ ನಿರ್ವಹಿಸುತ್ತಾರೆ, ಪುನಃ 10 ತಿಂಗಳ ಲೆಕ್ಕವನ್ನು ಏನೂ ದಾಖಲೆ ಇಡಲು ಗೊತ್ತಿಲ್ಲದ ಈ ಕೆಲಸಗಾರರನ್ನೇ ಹೊಣೆಗಾರರನ್ನಾಗಿ ಮಾಡಲಾಗುತ್ತದೆ.

ಶಾಲೆಯಿರುವ ಹಳ್ಳಿಗಳಲ್ಲಿ, ಹಳ್ಳಿಗಳ ಕಾಮಗಾರಿ ಕೆಲಸಗಳನ್ನು ಮಾಡಲು ಬರುವ ಕೂಲಿಯಾಳುಗಳಿಗೆ ಈ ಊಟವೇ ಕೊಡಬೇಕು ಅಥವಾ ವಸ್ತುಗಳ ರೂಪದಲ್ಲಿ ಅವರಿಗೆ ಕೊಡಬೇಕು. ಇದನ್ನು ಪ್ರತಿಭಟಿಸಿದರೆ ಕೆಲಸದಿಂದ ತೆಗೆಯುವ ಬೆದರಿಕೆ.

ಒಂದು ಮಗುವಿಗೆ 40 ಪೈಸೆ ಸಾದಿಲ್ವಾರು ಹಣ ಕೊಡುತ್ತಾರೆ. ಇದರಲ್ಲಿ 20 ಪೈಸೆ ಗ್ಯಾಸ್ ಅಥವಾ ಸೌದೆಗೆ. ಉಳಿದ 20 ಪೈಸೆಯಲ್ಲಿ ತರಕಾರಿ, ಸಾಂಬಾರು ಪದಾರ್ಥಗಳು, ಕ್ಲೀನಿಂಗ್‌ಗೆ ಬೇಕಾದ ಸಾಮಾನುಗಳನ್ನು ಕೊಳ್ಳಬೇಕು. ಹೆಚ್ಚುತ್ತಿರುವ ಬೆಲೆಯೇರಿಕೆಯ ಈ ದಿನಗಳಲ್ಲಿ ತಮ್ಮ ಕೈಯಿಂದಲೇ ಹಣ ಖರ್ಚು ಮಾಡುವ ಪರಿಸ್ಥಿತಿ.

ಹೆರಿಗೆಗೆ ಹೋದ ಮಹಿಳೆಯರನ್ನು ಕೆಲಸದಿಂದ ತೆಗೆದು ಹಾಕಿ ಹೊಸಬರನ್ನು ಆಯ್ಕೆ ಮಾಡುವ ಪ್ರವೃತ್ತಿಯೂ ಇದೆ.

ಕೊಡುವ ಆಹಾರ ಪದಾರ್ಥಗಳಲ್ಲಿ ಕಡಿಮೆ ಎಲ್ಲಾ ಮಕ್ಕಳಿಗೂ 100 ಗ್ರಾಂನಂತೆ ಅನ್ನ ಕೊಡಬೇಕು. ಕೊಡುವ ಕಡಿಮೆ ಹಾಗೂ ಮುಗ್ಗಲು ಹಿಡಿದಿರುವುದರಿಂದ ಅಕ್ಕಿಯನ್ನು ಬೇಯಿಸಿದರೆ ಅನ್ನ ಮುದ್ದೆಯಾಗುತ್ತದೆ. ಮುದ್ದೆಯಾದ ಅನ್ನ ಗ್ರಾಂ ಲೆಕ್ಕದಲ್ಲಿ ಕೊಡಲಿಕ್ಕೆ ಆಗುವುದಿಲ್ಲ. ಅದರಿಂದಾಗಿ ಕೆಲವು ಮಕ್ಕಳಿಗೆ ಊಟವೇ ಸಿಗುವುದಿಲ್ಲ. ಇಂತಹ ಹತ್ತು ಹಲವು ಸಮಸ್ಯೆಗಳನ್ನು ಅನುಭವಿಸುತ್ತಿರುವ ಈ ಮಹಿಳೆಯರನ್ನು ಸಿಐಟಿಯು ಸಂಘಟಿಸುತ್ತಿದೆ. ಇದರ ಪ್ರಥಮ ರಾಜ್ಯ ಮಟ್ಟದ ಸಭೆ ಮಾರ್ಚ್ 26 ರಂದು ಬೆಂಗಳೂರಿನಲ್ಲಿ ನಡೆಯಿತು.

ಸಭೆಯ ಅಧ್ಯಕ್ಷತೆಯನ್ನು ಸಿಐಟಿಯು ರಾಜ್ಯ ಕಾರ್ಯದರ್ಶಿಗಳಾದ ಎಸ್.ಪ್ರಸನ್ನ ಕುಮಾರ್ ವಹಿಸಿದ್ದರು, ಸಿಐಟಿಯುವಿನ ಸಹ ಕಾರ್ಯದರ್ಶಿಯಾದ ಟಿ.ಲೀಲಾವತಿ ಉಪಸ್ಥಿತರಿದ್ದರು.

ಸಂಚಾಲಕ ಸಮಿತಿ

ಸಂಚಾಲಕರಾಗಿ ಎಸ್.ವರಲಕ್ಷ್ಮಿ, ಸಹ ಸಂಚಾಲಕರಾಗಿ ಲೀಲಾವತಿ.ಟಿ ಆಯ್ಕೆಯಾಗಿದ್ದಾರೆ.

ಎನ್‌ಡಿಎ ಬಣ್ಣ ಬಯಲು

ಬಿಜೆಪಿ ಬದಲಾಗಿದೆ ಎಂದು ಜನ ಅಂದುಕೊಳ್ಳಲಾರಂಭಿಸಿದ್ದರು. ಮುಸಲ್ಮಾನರ ಬಗ್ಗೆ ಅವರ ದ್ವೇಷ ವಿರೋಧಿಗಳು ಸೃಷ್ಟಿಸಿದ ಕಟ್ಟುಕತೆ ಎನ್ನಲಾಯಿತು. ಆದರೆ ಈಗ ಹೊರಬಿದ್ದಿರುವ ಎನ್‌ಡಿಎ ಪ್ರಣಾಳಿಕೆ ಅದರ ಮುಖವಾಡವನ್ನು ಕಳಚಿಹಾಕಿದೆ.

ಬಿಜೆಪಿಯ ಗುಪ್ತ ಕಾರ್ಯಸೂಚಿಯ ವಿಚಾರಗಳೆಲ್ಲ ರಾಷ್ಟ್ರೀಯ ಪ್ರಜಾತಾಂತ್ರಿಕ ಮೈತ್ರಿಕೂಟ (ಎನ್‌ಡಿಎ)ದ ಪ್ರಣಾಳಿಕೆಯಲ್ಲಿ ಸೇರ್ಪಡೆಯಾಗುವುದರೊಂದಿಗೆ ಎನ್‌ಡಿಎ ಬಣ್ಣ ಬಯಲಾಗಿದೆ. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ, ಗೋಹತ್ಯೆ ನಿಷೇದಕ್ಕೆ ಕಾನೂನು ಮುಂತಾದ ವಿವಾದಾಸ್ಪದ ವಿಚಾರಗಳನ್ನು ಎನ್‌ಡಿಎ ಪ್ರಣಾಳಿಕೆಯಲ್ಲಿ ಸೇರಿಸುವ ಮೂಲಕ ಎನ್‌ಡಿಎ ಕೇವಲ ಬಿಜೆಪಿಯ ಹೊರ ಮುಖವಾಡ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಬಿಜೆಪಿ ಆರ್‌ಎಸ್‌ಎಸ್‌ನ ಮುಖವಾಡ. ಇಂಡಿಯಾವೆಂಬ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ಒಂದು ಫ್ಯಾಸಿಸ್ಟ್, ಮತೀಯವಾದಿ 'ಹಿಂದೂರಾಷ್ಟ್ರ'ವನ್ನಾಗಿ ಬದಲಾಯಿಸಬೇಕೆಂಬ ಆರ್‌ಎಸ್‌ಎಸ್ ಗುರಿಯತ್ತ ಮುನ್ನಡೆಯಲು ಈಗ ಬಿಜೆಪಿಗೆ ಯಾವುದೇ ಸಂಕೋಚವಿಲ್ಲ ಎಂದು ಅದು ತೋರಿಸಿಕೊಂಡಿದೆ. ಮತ್ತೆ ಮರಳಿ ಅದು ಅಧಿಕಾರಕ್ಕೆ ಬಂದರೆ ಕಳೆದ ಐದಾರು ವರ್ಷಗಳಿಗಿಂತ ಹೆಚ್ಚು ಭಡಂತನದಿಂದ ಆರ್‌ಎಸ್‌ಎಸ್ ದುಷ್ಟ ಕಾರ್ಯಸೂಚಿಯನ್ನು ಜಾರಿಗೆ ತರಲು ಪ್ರಯತ್ನಿಸಲಿದೆ ಎಂಬುದು ಈಗ ಬಹಳ ಸ್ಪಷ್ಟವಾಗಿದೆ.

ಅದ್ವಾನಿಯವರ 'ಮಹತ್ವಾಕಾಂಕ್ಷೆಯ 'ಉದಯಯಾತ್ರೆ' ಅಯೋಧ್ಯೆಗೆ ತಲುಪಿದಾಗ ಅಲ್ಲಿಯ ನಿವಾಸಿಗಳಲ್ಲಿ ಅದು ಯಾವುದೇ ಉತ್ಸಾಹ ಉಂಟುಮಾಡದಿದ್ದುದನ್ನು ಗಮನಿಸಿ ಆತಂಕಪಟ್ಟ ಅವರು 'ಬಿಜೆಪಿ ರಾಮ ಜನ್ಮಭೂಮಿಯಲ್ಲಿ ರಾಮಮಂದಿರ ಕಟ್ಟಲು ಬದ್ಧವಾಗಿದೆ' ಎಂದು ಘೋಷಿಸಿದರು. ಅದ್ವಾನಿಯವರೇ ಒಪ್ಪಿಕೊಂಡಂತೆ ತನ್ನ ನೇತೃತ್ವದಲ್ಲಿ ಧ್ವಂಸಗೊಂಡ ಬಾಬ್ರಿ ಮಸೀದಿ ಇದ್ದುದೇ ಆ ಜಾಗದಲ್ಲಿ. ಈ ಮಾತುಗಳ ಹಿಂದಿನ ಸಂದೇಶ ಬಹಳ ಸ್ಪಷ್ಟವಾಗಿದೆ.

ಅದ್ವಾನಿಯವರು ಮೊತ್ತ ಮೊದಲ ಬಾರಿಗೆ, ಜನತೆಗೆ ಈಗಾಗಲೇ ಗೊತ್ತಿರುವ ಕೆಲವು ವಿಚಾರಗಳನ್ನು ಪ್ರಸ್ತಾಪಿಸುತ್ತಿರುವುದು ಸೋಜಿಗವಾಗಿದೆ. ಅವರ ಅಯೋಧ್ಯಾ ಚಳುವಳಿ, ಮುಖ್ಯವಾಗಿ 1990 ರ ಅವರ ರಥಯಾತ್ರೆ ಹಿಂದೂ ಸಮಾಜವನ್ನು ಜಾತಿ ಆಧಾರದಲ್ಲಿ ಒಡೆಯುವ ಪ್ರಯತ್ನದ ವಿರುದ್ಧವಾಗಿತ್ತು ಎಂದು ಅವರು ಹೇಳುತ್ತಾರೆ. ಇದು ಅಂದಿನ ವಿ.ಪಿ.ಸಿಂಗ್ ಸರ್ಕಾರವು ಮಂಡಲ್ ಆಯೋಗದ ಶಿಫಾರಸುಗಳನ್ನು ಜಾರಿ ಮಾಡಲು ಹೊರಟಿದ್ದರ ಉಲ್ಲೇಖವಾಗಿದೆ. ಇದರಿಂದ ಹಿಂದೂ ಸಮಾಜವನ್ನು ಉಚ್ಚ ಜಾತಿಗಳ ನೇತೃತ್ವದ ಅಡಿಯಲ್ಲಿ ಪುನರ್‌ಸಂಘಟಿಸುವ ಆರ್‌ಎಸ್‌ಎಸ್/ ಬಿಜೆಪಿಯ ಉದ್ದೇಶ ಸ್ಪಷ್ಟವಾಗಿದೆ ಮಾತ್ರವಲ್ಲ ಹಿಂದುಳಿದ ಜಾತಿಗಳ ಜನಗಳಿಗೆ ಅಲ್ಪಸ್ವಲ್ಪ ಸೌಲಭ್ಯಗಳನ್ನು ಒದಗಿಸುವುದು ಸಹ ಅವರಿಗೆ ಇಷ್ಟವಿಲ್ಲ ಎಂದು ಸಾಬೀತಾಗಿದೆ.

ಬಿಜೆಪಿ ಅಭಿವೃದ್ಧಿಯ ಪ್ರಶ್ನೆಗಳನ್ನು ಎತ್ತುವುದು, ಆಡಳಿತದ ಕುರಿತು ಪ್ರಸ್ತಾಪಿಸುವುದು ತನ್ನ ನಿಜವಾದ ಕಾರ್ಯಸೂಚಿಯನ್ನು ಮರೆಮಾಚುವ ಉದ್ದೇಶದಿಂದ ಮಾತ್ರ ಎಂದು ದೇಶದ ಮತದಾರರಿಗೆ ಬಹುತೇಕವಾಗಿ ಅರ್ಥವಾಗತೊಡಗಿದೆ. ಕಳೆದ ವಾರ ಬಿಜೆಪಿ ಪ್ರಕಟಿಸಿದ 'ಮುನ್ನೋಟ' ಎಂಬ ದಾಖಲೆಯಲ್ಲಿ ಈ ಕಾರ್ಯಸೂಚಿ ಸೇರಿಕೊಂಡಿದೆ. ಸಾಮಾನ್ಯ ನಾಗರಿಕ ಸಂಹಿತೆ, ಗೋಹತ್ಯೆ ನಿಷೇದ, ಸಂವಿಧಾನದ 370 ನೇ ವಿಧಿ ಮೊದಲಾದ ವಿವಾದಾಸ್ಪದ ಅಂಶಗಳನ್ನು ಸೇರಿಸುವ ಮೂಲಕ ಮತೀಯ ಧ್ರುವೀಕರಣವನ್ನು ತೀವ್ರಗೊಳಿಸಲು ಉದ್ದೇಶಿಸಲಾಗಿದೆ.

ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್ ನವದೆಹಲಿಯಲ್ಲಿ ಪತ್ರಿಕಾ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡುತ್ತಾ "ಬಿಜೆಪಿಯ 'ಮುನ್ನೋಟ' ಮತ್ತು ಎನ್‌ಡಿಎ 'ಪ್ರಣಾಳಿಕೆ' ಎಂಬ ದಾಖಲೆಗಳ ಹೂರಣ ಒಂದೇ, ಹೆಸರು ಮಾತ್ರ ಬೇರೆ ಬೇರೆ" ಎಂದಿದ್ದಾರೆ. ಬಿಜೆಪಿ ಪ್ರಣಾಳಿಕೆಯಲ್ಲಿನ ಬಹುತೇಕ ವಿಚಾರಗಳನ್ನು ಈಗ ಎನ್‌ಡಿಎ ಪ್ರಣಾಳಿಕೆಯಲ್ಲಿ ಸೇರಿಸಿದ್ದಾರೆ. ಹಿಂದೆ ಮಂದಿರ ಮಸೀದಿ ವಿವಾದ ಬಂದಾಗಲೆಲ್ಲ ಎನ್‌ಡಿಎ ಕಾರ್ಯಸೂಚಿಯಲ್ಲಿ ಅದರ ಪ್ರಸ್ತಾಪವಿಲ್ಲ ಎಂಬ ನೆಪ ಹೇಳಿ ಎನ್‌ಡಿಎನಲ್ಲಿರುವ ಇತರ ಪಕ್ಷಗಳು ನುಣುಚಿಕೊಳ್ಳುತ್ತಿದ್ದವು. ಈಗ ಎನ್‌ಡಿಎ ಪ್ರಣಾಳಿಕೆಯಲ್ಲಿ ಆ ಎಲ್ಲ ವಿವಾದಾಸ್ಪದ ವಿಚಾರಗಳನ್ನು ಸೇರಿಸಿರುವಾಗ ಚಂದ್ರಬಾಬು ನಾಯ್ಡುರಂತವರು ಏನು ಹೇಳುತ್ತಾರೆ? ಗೋಹತ್ಯೆ ನಿಷೇದ ಮಸೂದೆಯೊಂದನ್ನು ಲೋಕಸಭೆಯಲ್ಲಿ ಮಂಡಿಸುವುದನ್ನು ವಿರೋಧಿಸಿದ್ದ ಬಿಜೆಪಿಯ ಮಿತ್ರಪಕ್ಷಗಳು ಈಗ ಯಾಕೆ ಮೌನವಾಗಿವೆ? ಅಯೋಧ್ಯಾ ವಿವಾದವನ್ನು ಮಾತುಕತೆಯ ಮೂಲಕ ಬಗೆಹರಿಸುವ ಪ್ರಸ್ತಾಪ ಮಾಡಲಾಗಿದೆ. ಹಿಂದೆ ಕಾಂಚಿ ಶಂಕರಾಚಾರ್ಯರ ಮೂಲಕ ಮಾತುಕತೆ ಹೆಸರಿನಲ್ಲಿ ನಡೆಸಿದ ಪಿತೂರಿ ವಿಫಲವಾಗಿದೆ. ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ವಿವಾದದಲ್ಲಿ ಒಂದು ಕಡೆ ಇರುವವರ ಪರವಾಗಿ ಇನ್ನೊಂದು ಕಡೆ ಇರುವವರ ಮೇಲೆ ಒತ್ತಡ ಹೇರುವ ಸಂಚು ನಡೆಯುವ ಅಪಾಯವಿದೆ.




ಬಿಜೆಪಿಯ ಈ ಕೊನೆಗಾಲದ ಕಸರತ್ತು ವಿಫಲವಾಗುವುದು ಖಚಿತ. ಇಂಡಿಯಾದ ಮತದಾರರು, ಅವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಯುವ ಮತದಾರರು 5 ವರ್ಷಗಳ ಹಿಂದೆ ಬಿಜೆಪಿ ನೀಡಿದ ಭರವಸೆಗಳು ಏನಾದವು ಎಂದು ಕೇಳುತ್ತಿದ್ದಾರೆ. ದೇಶವನ್ನು ಹಸಿವು, ಭಯ ಮತ್ತು ಭ್ರಷ್ಟಾಚಾರದಿಂದ ಮುಕ್ತ ಮಾಡುವುದಲ್ಲದೆ ವರ್ಷಕ್ಕೆ ಒಂದು ಕೋಟಿ ಉದ್ಯೋಗಗಳ ಸೃಷ್ಟಿ ಮಾಡಲಾಗುವುದು ಎಂದಿದ್ದರು ವಾಜಪೇಯಿ ಅವರು. ಹಿಂದೆ ಕೊಟ್ಟ ಭರವಸೆಗಳಲ್ಲಿ ಒಂದನ್ನೂ ಜಾರಿ ಮಾಡದ ಎನ್‌ಡಿಎ ಈಗ ಭರವಸೆಗಳ ಇನ್ನೊಂದು ಕಂತನ್ನು ಜನತೆಯ ಮುಂದಿಟ್ಟಿದೆ. ಸುಳ್ಳು ಭರವಸೆಗಳನ್ನು ನೀಡುವ ಇವರ ಚಾಳಿಯನ್ನು ಮತದಾರರು ನಿರ್ಣಾಯಕವಾಗಿ ಧಿಕ್ಕರಿಸಲು ಸಜ್ಜಾಗುತ್ತಿದ್ದಾರೆ.

ವಿದೇಶಿ ಮೂಲದವರಿಗೆ ದೇಶದ ಉನ್ನತ ಹುದ್ದೆಗಳನ್ನು ನಿಷೇಧಿಸುವ ಕಾನೂನನ್ನು ತರುವ ವಿಷಯವನ್ನೂ ಎನ್‌ಡಿಎ ಪ್ರಣಾಳಿಕೆಯಲ್ಲಿ ಸೇರಿಸಲಾಗಿದೆ. "ಭಾರತ ಪ್ರಕಾಶಿಸುತ್ತದೆ" ಎಂಬ ಸರ್ಕಾರದ ಹಣದಿಂದ ಮಾಡಿದ ಜಾಹೀರಾತು ಪ್ರಚಾರ ಹಾಗೂ 'ಸುಖಾನುಭವ' ಪ್ರಚಾರಗಳು ಜನರನ್ನು ಆಕರ್ಷಿಸಲು ವಿಫಲವಾದ ನಂತರ ಜನತೆ ತಮ್ಮ ಬದುಕಿನ ಪ್ರಶ್ನೆಗಳನ್ನು ಎತ್ತುವುದನ್ನು ತಡೆಯಲು, ಅವರ ಮೂಲಭೂತ ಸಮಸ್ಯೆಗಳಿಗೆ ಸಂಬಂಧವಿಲ್ಲದ ಕ್ಷುಲ್ಲಕ ವಿಷಯಗಳತ್ತ ಅವರ ಗಮನವನ್ನು ಸೆಳೆಯಲು 'ವಿದೇಶಿ ಮೂಲ'ದ ಪ್ರಶ್ನೆಯನ್ನು ಎತ್ತಲಾಗುತ್ತಿದೆ. ಇದು ಈಗಾಗಲೇ ನಿರ್ಧಾರವಾದ ಪ್ರಶ್ನೆ. ಅವನು ಅಥವಾ ಅವಳು ದೇಶದ ಪೌರತ್ವವನ್ನು ಪಡೆದಿದ್ದರೆ ಅವನಿಗೆ ಅಥವಾ ಅವಳಿಗೆ 'ಸಂವಿಧಾನಬದ್ಧ ಎಲ್ಲ ಹಕ್ಕುಗಳೂ ಇರುತ್ತವೆ. ಬಿಜೆಪಿ ಜನತೆಯ ಅಭಿವೃದ್ಧಿಯ ವಿಷಯಗಳಿಗಿಂತ ಹೆಚ್ಚಾಗಿ ಇಂತಹ ಅಪ್ರಸ್ತುತ ವಿಷಗಳಿಗೆ ಪ್ರಾಮುಖ್ಯತೆ ನೀಡುತ್ತಿರುವುದು ಅದರ ದುರುದ್ದೇಶದ ದ್ಯೋತಕವಾಗಿದೆ.

ಎನ್‌ಡಿಎ ಸರ್ಕಾರದ ಆಳ್ವಿಕೆಯಲ್ಲಿ 'ಆರೋಗ್ಯ ಬರೀ ಭಾಗ್ಯ'!

'ಆರೋಗ್ಯವೇ ಭಾಗ್ಯ' ಎಂಬ ಗಾದೆ ಇದೆ. 'ಎಲ್ಲರಿಗೂ ಆರೋಗ್ಯ 2000 ದೊಳಗೆ' ಎಂದು ಅಲ್ಮಾ-ಅಲಾ ಎಂಬಲ್ಲಿ 1978ರಲ್ಲೇ ಅಂತರ ರಾಷ್ಟ್ರೀಯ ಪೋಲ್‌ಗೆ ಭಾರತ ಸಹ ಸಹಿ ಹಾಕಿತ್ತು. ಎನ್‌ಡಿಎ ಸರ್ಕಾರದ ಆಳ್ವಿಕೆ ಯಲ್ಲಿ ಆರೋಗ್ಯ ಕ್ಷೇತ್ರದಲ್ಲಿ (ಉಳಿದ ಕ್ಷೇತ್ರಗಳಂತೆ) ಇದ್ದ ಬದ್ದ ಕೆಲವು ಸೀಮಿತ ಸಾಧನೆ ಗಳೂ ಕುಂಠಿತ ವಾಗಿವೆ. ಆರೋಗ್ಯ ಒಂದು ಹಕ್ಕು, ಸೇವೆ,ಸವಲತ್ತು ಆಗಿಲ್ಲ. ಬರಿಯ ಭಾಗ್ಯ ಆಗಿದೆ. ಕೆಲವರಿಗೆ ಇದೆ, ಕೆಲವರಿಗೆ ಇಲ್ಲ. ಆರೋಗ್ಯ ಕ್ಷೇತ್ರದಲ್ಲಿ ಎನ್.ಡಿ.ಎ.ಯ 'ಸಾಧನೆ'ಗಳ ಕಿರುಪರಿಚಯ.



ದೇಶದ ಬಹುಭಾಗ ಜನತೆ ಉಪವಾಸ, ಅರೆ ಹೊಟ್ಟೆಯಲ್ಲಿ ಇರುವಾಗ ಆರೋಗ್ಯದ ಮಾತೇನು? ಹಸಿವು, ಪೋಷಕಾಂಶಗಳ ಅಭಾವ ಅತ್ಯಂತ ದೊಡ್ಡ ಆರೋಗ್ಯ ಸಮಸ್ಯೆ. ಆಹಾರ ಭದ್ರತೆ ಮತ್ತು ಕೃಷಿ ನಾಶ ಮಾಡುವ ಸಾಮ್ರಾಜ್ಯಶಾಹಿ ಜಾಗತೀಕರಣ ಪರ ನೀತಿಗಳಿಂದ ಈ ಸಮಸ್ಯೆಯನ್ನು ಸರ್ಕಾರ ಇನ್ನಷ್ಟು ಉಲ್ಬಣಗೊಳಿಸಿದೆ. ಇನ್ನು ಆರೋಗ್ಯದ ಇತರ ಆಯಾಮಗಳತ್ತ ಸಂಪನ್ಮೂಲ ಹೂಡುವಲ್ಲೂ ಸರ್ಕಾರ ಅಸಡ್ಡೆ ತೋರಿದೆ. ಆರೋಗ್ಯ ಕ್ಷೇತ್ರಕ್ಕೆ ಕೊಡುವ ಸಂಪನ್ಮೂಲಗಳಲ್ಲಿ ಕಡಿತ ಮಾಡಲಾಗಿದೆ. ಒಟ್ಟು ಉತ್ಪನ್ನ(ಜಿಡಿಪಿ)ದಲ್ಲಿ ಆರೋಗ್ಯ ಕ್ಷೇತ್ರಕ್ಕೆ ಕೊಡುವ ಸಂಪನ್ಮೂಲಗಳ ಪ್ರಮಾಣ 1991-92ರಲ್ಲಿ 1.3ಶೇಕಡಾ ಇದ್ದಿದ್ದು, 2001-02 ಹೊತ್ತಿಗೆ 0.9ಶೇಕಡಾ ಕುಸಿದಿದೆ. ಜಿಡಿಪಿಯ ಶೇಕಡಾ 1ಕ್ಕಿಂತಲೂ ಕಡಿಮೆ ಆರೋಗ್ಯ ವೆಚ್ಚ ಮಾಡುವ ದೇಶಗಳು ಆಫ್ರಿಕಾದ ತೀರಾ ಹಿಂದುಳಿದ, ಆಂತರಿಕ ಯುದ್ಧದಿಂದ ಸರ್ಕಾರವೇ ಇಲ್ಲದ ಕಾಂಗೋದಂತಹ ದೇಶಗಳು ಮಾತ್ರ! ಜಗತ್ತಿನ ಕೆಲವು ದೇಶಗಳಲ್ಲಿ ಆರೋಗ್ಯವೆಚ್ಚದ ಬಹುಭಾಗ ಸರ್ಕಾರವೇ ಉಳಿಸಿಕೊಳ್ಳುತ್ತದೆ. ಅತ್ಯಂತ ಹೆಚ್ಚು ಖಾಸಗೀಕರಣ ಇರುವ ಅಮೇರಿಕಾದಲ್ಲೂ ಆರೋಗ್ಯ ವೆಚ್ಚದ ಶೇಕಡಾ 45 ಭಾಗ ಸರ್ಕಾರ ಉಳಿಸಿಕೊಳ್ಳುತ್ತದೆ. ಭಾರತದಲ್ಲಿ ಇದು ಕೇವಲ ಶೇಕಡಾ 16. (ಅಂದರೆ ಜನ ಸ್ವತಃ ತಾವೇ ಆರೋಗ್ಯ ವೆಚ್ಚದ ಎಂಟರಲ್ಲಿ ಏಳು ಭಾಗ ಹೊರಬೇಕು). ಇದು 50ರ ದಶಕದ ಅವಧಿಯಲ್ಲಿ ಶೇಕಡಾ 22 ರಷ್ಟಿತ್ತು.

ಎನ್.ಡಿ.ಎ. ಸರ್ಕಾರ ಆರೋಗ್ಯ ಕ್ಷೇತ್ರದಲ್ಲಿ ಮಾಡಿದ ದಾಂಧಲೆಗಳೇನು?

- 1997 ರಿಂದ 2000 ದವರೆಗೆ ರೋಗ ನಿರೋಧ ಕಾರ್ಯಕ್ರಮದ ವ್ಯಾಪಕತೆ ಶೇಕಡಾ 60 ರಿಂದ 40 ಕ್ಕಿಳಿಯಿತು.
- ಶಿಶು ಮರಣ ಪ್ರಮಾಣ ಇಳಿಯುತ್ತಿದ್ದದ್ದು (ಸಾವಿರ ಜನರಲ್ಲಿ) 70ರಲ್ಲಿ ಸ್ಥಗಿತಗೊಂಡಿದೆ.
- ತಾಯಂದಿರ ಮರಣ ಪ್ರಮಾಣ 424ರಿಂದ 540 ಕ್ಕೇರಿದೆ 52-53 ರಿಂದ 98-99 ಅವಧಿಯಲ್ಲಿ.
- ಹೆಣ್ಣು ಮಕ್ಕಳ ಪ್ರಮಾಣ 945 (ಪ್ರತಿ ಸಾವಿರ 6 ವರ್ಷದೊಳಗಿನ ಗಂಡು ಮಕ್ಕಳಿಗೆ) ರಿಂದ 927 ಕ್ಕಿಳಿಯಿತು. 1991 ರಿಂದ 2001ರ ಅವಧಿಯಲ್ಲಿ.
- ಜಗತ್ತಿನ ಪೋಲಿಯೋ ಪೀಡಿತರಲ್ಲಿ ಶೇಕಡಾ 80 ರಷ್ಟು ನಮ್ಮ ದೇಶದಲ್ಲಿದ್ದಾರೆ.
- 5 ಲಕ್ಷ ಕ್ಷಯ ಪೀಡಿತರು ಪ್ರತಿ ವರ್ಷ ಸಾಯುತ್ತಾರೆ (ಜಗತ್ತಿನಲ್ಲೇ ಅತ್ಯಂತ ಹೆಚ್ಚಿನ ಸಂಖ್ಯೆ ಸಾವು)
- ಮಲೇರಿಯಾ ಮುಂತಾದ ಸಾಂಕ್ರಾಮಿಕ ರೋಗಗಳು ಪುನಃ ಕಾಣಿಸಿಕೊಂಡು ಏರಹತ್ತಿವೆ.
- ಆರು ಲಕ್ಷ ಮಕ್ಕಳು ಪ್ರತಿ ವರ್ಷ ಡಯೇರಿಯಾದಂತಹ (ಶುದ್ಧ ನೀರು ಮತ್ತು ಶೌಚಾಲಯದ ಅಭಾವದಿಂದ ಬರುವ ರೋಗ) ಸರಳ ರೋಗಗಳಿಂದ ಸಾಯುತ್ತಾರೆ.

ಈ ಮೇಲಿನ ಅಂಕಿ ಸಂಖ್ಯೆಗಳು ಆತಂಕಕಾರಿಯಾಗಿದ್ದರೂ ಅವು ಇನ್ನು ಭಯಾನಕವಿರುವ ಕೆಳಗಿನ ಅಸಮಾನತೆಗಳ ಬಗ್ಗೆ ಹೇಳುವುದಿಲ್ಲ.

ನಮ್ಮ ದೇಶದ ಜನಸಂಖ್ಯೆಯಲ್ಲಿ ಕೇವಲ ಶೇಕಡಾ 8 ಇರುವ, ಆದಿವಾಸಿಗಳ ಪ್ರಮಾಣ ಮಲೇರಿಯಾದಿಂದ ಆಗುವ ಸಾವುಗಳು ಶೇಕಡಾ 60.

ಪ್ರತಿ ಸಾವಿರ ಜನಸಂಖ್ಯೆಗೆ ಇರುವ ಆಸ್ಪತ್ರೆ ಹಾಸಿಗೆಗಳ ಸಂಖ್ಯೆ ನಗರ ಪ್ರದೇಶಗಳಲ್ಲಿ ಗ್ರಾಮೀಣ ಪ್ರದೇಶದ 15 ಪಟ್ಟು.

ಪುಟ 11 ಕ್ಕೆ

ಚುನಾವಣೆ - 2004

ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರವನ್ನು ನಿರ್ವಹಿಸುತ್ತಿರುವ ಕಾರ್ಮಿಕ ವರ್ಗಕ್ಕೆ ಕಳೆದ ಐದಾರು ವರ್ಷಗಳಲ್ಲಿ ಭಾರಿ ಅನ್ಯಾಯವಾಗಿದೆ. ದೊಡ್ಡ ಬಂಡವಾಳಗಾರರ ಒಂದು ವಿಭಾಗದ ಬಲವಾದ ಬೆಂಬಲ ಹೊಂದಿರುವ ಬಿಜೆಪಿ ಕಾರ್ಮಿಕ ವರ್ಗದ ಅತ್ಯಂತ ದೊಡ್ಡ ಶತ್ರು. ಈ ಆರೋಪ ನಿಜವೇ? ಮುಂದೆ ದಾರಿ ಯಾವುದು?

ಬಿಜೆಪಿ ಕೂಟವನ್ನು ಸೆ

ಸಿಐಟಿಯು ಕರೆ

ದೇಶ ಸದ್ಯದಲ್ಲೇ 14ನೇ ಲೋಕಸಭೆಯನ್ನು ಚುನಾಯಿಸಲಿದೆ. ಕಳೆದ ಐದು ವರ್ಷಗಳಲ್ಲಿ ಒಂದಾದ ಮೇಲೊಂದರಂತೆ ತನ್ನ ಹಕ್ಕುಗಳ ಮೇಲೆ, ಬದುಕಿನ ಮೇಲೆಯೇ ವ್ಯವಸ್ಥಿತ ಧಾಳಿಗಳನ್ನು ಅನುಭವಿಸಿರುವ ಕಾರ್ಮಿಕವರ್ಗ ಇದರಲ್ಲಿ ತನ್ನ ಕರ್ತವ್ಯ ಏನೆಂದು ನಿರ್ಧರಿಸಬೇಕಾಗಿದೆ. ಸಿಐಟಿಯುವಿನ 'ಮುಂಬರುವ ಚುನಾವಣೆಗಳಲ್ಲಿ ಬಿಜೆಪಿ ಕೂಟವನ್ನು ಸೋಲಿಸಿ' ಎಂಬ ಕಿರುಹೊತ್ತಿಗೆ ಕಳೆದ ಐದು ವರ್ಷಗಳ ಅನುಭವಗಳನ್ನು ವಿಶ್ಲೇಷಿಸುತ್ತಾ ಭಾರತದ ಸ್ವಾವಲಂಬೀ ಆರ್ಥಿಕ ಪ್ರಕಾಶಿಸಬೇಕಾದರೆ ಬಿಜೆಪಿ ಮತ್ತವರ ಮಿತ್ರರು ಮುಂಬರು ಚುನಾವಣೆಗಳಲ್ಲಿ ಪರಾಭವ ಹೊಂದಲೇಬೇಕು, ಎಡ, ಪ್ರಜಾಪ್ರಭುತ್ವವಾದಿ, ಜಾತ್ಯಾತೀತ ಶಕ್ತಿಗಳನ್ನು ಗೆಲ್ಲಿಸಬೇಕು ಎಂದು ಕಾರ್ಮಿಕರಲ್ಲಿ ಮನವಿ ಮಾಡಿದೆ. ಈ ಕಿರುಹೊತ್ತಿಗೆಯ ಮುಖ್ಯ ಅಂಶಗಳನ್ನು ಮುಂದೆ ಕೊಡಲಾಗಿದೆ.

ಎನ್‌ಡಿಎ ಸಚಿವ ಸಂಪುಟದ ಶಿಫಾರಸ್ಸಿನ ಮೇರೆಗೆ 13ನೇ ಲೋಕಸಭೆಯನ್ನು ರಾಷ್ಟ್ರಪತಿಗಳು ವಿಸರ್ಜಿಸಿರುವುದರಿಂದ 14ನೇ ಲೋಕಸಭೆಯನ್ನು ಆರಿಸಲು ಏಪ್ರಿಲ್, ಮೇ ತಿಂಗಳಲ್ಲಿ ದೇಶದಲ್ಲಿ ಚುನಾವಣೆಗಳು ನಡೆಯಲಿವೆ.

13ನೇ ಲೋಕಸಭಾ ಚುನಾವಣೆಗಳಲ್ಲಿ **"ಲೋಕಸಭೆಗೆ 5 ವರ್ಷದ ನಿಗದಿತ ಅವಧಿಯಿರಬೇಕು"** ಎಂಬುದು ಪ್ರಧಾನ ಮಂತ್ರಿ ವಾಜಪೇಯಿಯವರ ಕಹಳೆಯಾಗಿತ್ತು. ಎನ್‌ಡಿಎ ಸಂವಿಧಾನ ಪರಾಮರ್ಶೆಯ ಕಸರತ್ತೂ ನಡೆಯಿತು. ಆದರೆ ಅವನ್ನೆಲ್ಲಾ ಗಾಳಿಗೆ ತೂರಿ ಪ್ರಧಾನ ಮಂತ್ರಿಗಳು ಲೋಕಸಭೆಯ ವಿಸರ್ಜನೆಗೆ ಸಲಹೆ ಮಾಡಿದರು. ವಿಧಾನಸಭೆಯ ಚುನಾವಣೆಗಳಲ್ಲಿ ದೊರೆತ ವಿಜಯ ಲೋಕಸಭಾ ಚುನಾವಣೆಗಳಲ್ಲಿ ನೆರವಾಗಬಹುದೆಂಬ ನಿರೀಕ್ಷೆ ಅವರದ್ದು.

ಈ ಹಿನ್ನೆಲೆಯಲ್ಲಿ ದೇಶದ ಕಾರ್ಮಿಕ ಆಂದೋಲನ ತನ್ನ ಕರ್ತವ್ಯವೇನೆಂದು ನಿರ್ಧರಿಸಬೇಕು, ಬಿಜೆಪಿ ನೇತೃತ್ವದ ಆಡಳಿತದ ಕಳೆದ ಐದು ವರ್ಷಗಳಲ್ಲಿ ತಮ್ಮ ಅನುಭವದ ಆಧಾರದಲ್ಲಿ ನಿರ್ಧರಿಸಬೇಕು.

ಐದು ವರ್ಷಗಳ ಅನುಭವ

ಬಿಜೆಪಿ ನೇತೃತ್ವದ ಕಳೆದ ಐದು ವರ್ಷಗಳಲ್ಲಿ ಆಡಳಿತದಲ್ಲಿ ಎಲ್ಲೆಡೆ ಅವನತಿ ಕಂಡು ಬಂದಿದೆ. ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮೌಲ್ಯಗಳಲ್ಲಿ ವಿಕೃತಿ ಕಂಡು ಬಂದಿದೆ, ಜೊತೆಗೆ ಆರ್ಥಿಕ ರಂಗದಲ್ಲಿ ವಿನಾಶ ಕಾಣಬಂದಿದೆ.

ಸಾಮ್ರಾಜ್ಯಶಾಹಿ-ಪರ ವಿದೇಶಾಂಗ ನಿಲುವು ಮತ್ತು ಹೀನ ಕೋಮು ಗಲಭೆಗಳು, ಕಾನೂನುಹೀನತೆ ಮತ್ತು ಹಿಂಸಾಚಾರ, ಜತೆಗೆ ಎನ್‌ಡಿಎ ಮಂತ್ರಿಗಳ, ಮುಖಂಡರ ಹಗರಣಗಳ ಸಂಖ್ಯೆಯಲ್ಲಿ ದಾಖಲೆ, ವೋಟ್ ಬ್ಯಾಂಕ್‌ಗಾಗಿ ಮತ್ತೆ 'ಹಿಂದುತ್ವ'ದ ಬಳಕೆ ಹಾಗೂ ಜನಸಾಮಾನ್ಯರ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಧಾಳಿಗಳು ವಾಜಪೇಯಿ ಆಡಳಿತದ ಎದ್ದು ಕಾಣುವ ಅಂಶಗಳು.

ಬಿಜೆಪಿ ಆಳ್ವಿಕೆಯಲ್ಲಿ ಹೀಗಾಗಬೇಕಾದ್ದೇ. ಏಕೆಂದರೆ ಅವರ ಆರ್ಥಿಕ ನೀತಿಗಳು ದೊಡ್ಡ ಭೂಮಾಲಿಕರು ಮತ್ತು ದೇಶೀ-ವಿದೇಶೀ ಬಂಡವಾಳಗಾರರ ಹಿತಕ್ಕಾಗಿ - ಅದಕ್ಕೆ ಬೆಲೆ



ತೆರಬೇಕಾದವರು ಜನಸಾಮಾನ್ಯರು. 1998ರಿಂದ 2003ರವರೆಗೆ ಪ್ರತಿ ಬಜೆಟ್ಟಿನಲ್ಲಿ, ಈ ವರ್ಷದ ಮಧ್ಯಂತರ ಬಜೆಟ್ಟಿನಲ್ಲೂ ಪ್ರತಿವರ್ಷ ಕನಿಷ್ಠ 20000 ಕೋಟಿ ರೂಪಾಯಿಗಳಷ್ಟು ಮೊತ್ತದ ವಿವಿಧ ರಿಯಾಯಿತಿಗಳನ್ನು ಭೂಮಾಲಿಕರಿಗೆ, ಬಂಡವಾಳಗಾರರಿಗೆ ಕೊಟ್ಟ ಸರ್ಕಾರ ಇದು. ಇದಕ್ಕಾಗಿ ಜನಸಾಮಾನ್ಯರ ಮೇಲೆ ತೆರಿಗೆಗಳ, ಬೆಲೆಯೇರಿಕೆಗಳ, ಕ್ಲೋಶರ್, ಉದ್ಯೋಗ ನಷ್ಟಗಳ ಹೊರೆ ಹೇರಿದ ಸರ್ಕಾರ ಇದು. ಅಷ್ಟೇ ಅಲ್ಲ, ಶ್ರೀಮಂತ-ಪರ ನೀತಿಗಳಿಂದ ಉಂಟಾದ ಅತೃಪ್ತಿಯನ್ನು ಎದುರಿಸಲು ಅತ್ಯಂತ ಲೆಕ್ಕಾಚಾರದಿಂದ ಕೋಮು ಧ್ರುವೀಕರಣ ತರಲಿಕ್ಕಾಗಿ ಕೋಮುಗಲಭೆಗಳಿಗೆ ಆಧಾರಗಳನ್ನು ಕಲ್ಪಿಸಲು ತಂತ್ರ ಹೂಡಿ ಅಧಿಕಾರದಲ್ಲುಳಿಯಲು ಮಾನವ ಜೀವಗಳನ್ನೇ ಬಲಿಗೊಟ್ಟವರು ಇವರು. ಬಿಜೆಪಿ ಗುಜಾರಾತಿನಲ್ಲಿ ಅಧಿಕಾರದಲ್ಲುಳಿಯಲು ಹಾಗೂ ಬೇರೆ ರಾಜ್ಯಗಳಲ್ಲಿ ಅಧಿಕಾರಕ್ಕೆ ಬರಲು ಗೋಧ್ರಾ ಹತ್ಯಾಕಾಂಡ ಹಾಗೂ ನಂತರದ ಇಡೀ ಗುಜರಾತಿನ ಹತ್ಯಾಕಾಂಡದಲ್ಲಿ ಆರ್‌ಎಸ್‌ಎಸ್ ಸಂಘಟನೆಗಳ ಕೈವಾಡ ಇರುವುದನ್ನು ಈಗ ಕಾಣಬಹುದು.

ವಂಚನೆ ಮತ್ತು ವಿಭಜನಕಾರೀ ಮಾರ್ಗ

ಬಿಜೆಪಿ ಕೇಂದ್ರದಲ್ಲಿ ಅಧಿಕಾರದ ಪೀಠ ಏರಿದ್ದು, ಜನಗಳನ್ನು ವಂಚಿಸಿ ಮತ್ತು ವಿಭಜನಕಾರೀ ಮಾರ್ಗವನ್ನು ಬಳಸಿ. ಅವೇ ತಂತ್ರಗಳನ್ನು ಉಪಯೋಗಿಸಿ ಐದು ವರ್ಷ ಆಳಲು ಅವರಿಗೆ ಸಾಧ್ಯವಾಗಿದೆ. ಈಗ ಮುಂಬರುವ ಚುನಾವಣೆಗಳನ್ನು ಎದುರಿಸಲು ಮತ್ತೆ ಅವೇ ತಂತ್ರಗಳನ್ನು ಬಳಸುತ್ತಿದೆ.

ಬಿಜೆಪಿ ನೇತೃತ್ವದ ಕೂಟ ದೇಶದ ಶತ್ರು, ಜನಗಳ ಶತ್ರು ಎಂದು ಕಳೆದ ಐದು ವರ್ಷಗಳ ಆಳ್ವಿಕೆ ಬಯಲು ಮಾಡಿದೆ. ಅವರ ಆರ್ಥಿಕ ನೀತಿಗಳು ದೇಶದ ಸ್ವಾವಲಂಬೀ ಅಭಿವೃದ್ಧಿಯನ್ನು ಬಲಿಕೊಟ್ಟು ಸಾಮ್ರಾಜ್ಯಶಾಹೀ ಶಕ್ತಿಗಳಿಗೆ ದೇಶದ ಸಾರ್ವಭೌಮತೆಯನ್ನು ಒತ್ತೆಯಿಡುವಂತವು.

ಕಳೆದ ಐವತ್ತು ವರ್ಷಗಳಲ್ಲಿ ಸೃಷ್ಟಿಸಿದ ರಾಷ್ಟ್ರೀಯ ಸಂಪತ್ತನ್ನು ಅವರು ಮಾರಿ ಕೊಳ್ಳುತ್ತಿದ್ದಾರೆ, ದೇಶದ ಅಪಾರ ನೈಸರ್ಗಿಕ ಸಂಪನ್ಮೂಲಗಳನ್ನು, ಪ್ರಮುಖ ಸೇವೆಗಳನ್ನು, ಸೌಲಭ್ಯಗಳನ್ನು ದೇಶೀ-ವಿದೇಶೀ ಖಾಸಗಿಯವರಿಗೆ ಹಸ್ತಾಂತರಿಸುತ್ತಿದ್ದಾರೆ.

ಖಾಸಗೀಕರಣದ ಪ್ರತಿಯೊಂದು ಪ್ರಯತ್ನವೂ ಸಾಮಾಜಿಕ ವಲಯದ ಘಟಕಗಳನ್ನು ಅವುಗಳ ಅಪಾರ ಆಸ್ತಿಗಳ ಸಮೇತ ಪುಕ್ಕಟೆಯಾಗಿ ಮಾರುವ ಭ್ರಷ್ಟ ವ್ಯವಹಾರವಾಗಿ ಬಿಡುತ್ತಿದೆ. ಖಾಸಗೀಕರಣದಲ್ಲಿ ಭ್ರಷ್ಟಾಚಾರ ಈಗ ಮೇಜಿನ ಕೆಳಗಿನ ವ್ಯವಹಾರವಾಗಿ ಉಳಿಯದೆ ಆಸ್ತಿಗಳ, ಶೇರುಗಳ ಮೌಲ್ಯವನ್ನು ಕನಿಷ್ಟ ಮಟ್ಟಕ್ಕಿಳಿಸುವ ಒಂದು ವ್ಯವಸ್ಥೆಯೇ ಆಗಿಬಿಟ್ಟಿದೆ. ಹಗರಣಗಳಲ್ಲಿಯೂ ಇದು ಚಾಂಪಿಯನ್ ಆಗಿಬಿಟ್ಟಿದೆ. ರಾಜೀವಗಾಂಧಿ ಆಡಳಿತದ ಬೋಫೋರ್ಸ್ ಹಗರಣ ಈ ಸರ್ಕಾರದಡಿಯಲ್ಲಿ ಮತ್ತೆ ಮತ್ತೆ ನಡೆದ ಶೇರು ಮಾರುಕಟ್ಟೆ ಹಗರಣ, ಕಾರ್ಗಿಲ್-ಶವಪೆಟ್ಟಿಗೆ ಹಗರಣ, ತೆಹೆಲ್ಕಾ ಬಯಲು, ಛಾಪಾಕಾಗದ, ವಿದೇಶೀ ಕರೆನ್ಸಿ ಹಗರಣ ಇತ್ಯಾದಿಗಳ ಎದುರು ಏನೂ ಅಲ್ಲ.

ಈ ಚುನಾವಣೆ ಬಂದಿರುವಾಗ ಮತ್ತೆ ಸುಳ್ಳುಗಳ ಪ್ರಚಾರ ಭರದಿಂದ ಸಾಗಿದೆ. ಅದಕ್ಕೆ ದೇಶದ ಖಜಾನೆಯಿಂದಲೇ ಹಲವು ನೂರು ಕೋಟಿ ರೂಪಾಯಿಗಳ ಖರ್ಚು. ಜತೆಗೆ ಕೇವಲ ಶೇ.10 ಶ್ರೀಮಂತರಿಗೆ ಪ್ರಯೋಜನವಾಗುವ ತೆರಿಗೆ - ಸುಂಕ ರಿಯಾಯಿತಿಗಳಿಗಾಗಿ ಮತ್ತೆ ದೇಶದ ಖಜಾನೆಗೆ 11000 ಕೋಟಿ ರೂ.ಗಳ ನಷ್ಟವಾಗಿದೆ.

ಅತ್ತ ಹಣಕಾಸು ಮಂತ್ರಿಗಳು 50000 ಕೋಟಿ ರೂ.ಗಳ 'ಕೃಷಿ ಮೂಲ ರಚನೆ ನಿಧಿ' ಮತ್ತು ಇನ್ನು 50000 ಕೋಟಿ ರೂ.ಗಳ 'ಸಣ್ಣ ಮಧ್ಯಮ ಉದ್ದಿಮೆಗಳ ನಿಧಿ' ಪ್ರಕಟಿಸಿದ್ದಾರೆ. ಆದರೆ ಈ ಬೃಹತ್ ಯೋಜನೆಗಳಿಗೆ ನೀಡಿರುವ ಹಣ ಕೇವಲ 2000 ಕೋಟಿ ರೂ.

37 ಕೋಟಿಯೆಲ್ಲಿ, 10 ಲಕ್ಷವೆಲ್ಲಿ?

ವಾಜಪೇಯಿಯವರು ನೇತಾಜಿ ಸುಭಾಷ್ ಚಂದ್ರ ಬೋಸರ ಭಂಗಿಯಲ್ಲಿ 37 ಕೋಟಿ ಅಸಂಘಟಿತ ವಲಯದ ಕಾರ್ಮಿಕರಿಗೆ 'ಸಾಮಾಜಿಕ ಭದ್ರತಾ ಯೋಜನೆ'ಯನ್ನು ಪ್ರಕಟಿಸುವ ಚಿತ್ರವನ್ನು ಪ್ರತಿದಿನ ಮಾಧ್ಯಮಗಳಲ್ಲಿ ಬಿತ್ತರಿಸಲಾಗುತ್ತಿವೆ. ಈ ಯೋಜನೆಗೆ ಪ್ರತಿ ಕಾರ್ಮಿಕನ ಕನಿಷ್ಠ ಕೂಲಿಯ ಶೇ.1.16 ದಷ್ಟು ವಂತಿಗೆಯನ್ನು ಸರ್ಕಾರ ಕೊಡಬೇಕು. ಆದರೆ ಮಧ್ಯಂತರ ಬಜೆಟ್‌ನಲ್ಲಿ ಈ ಯೋಜನೆಗೆ ಒಂದು ಪೈಸೆಯನ್ನೂ ಮೀಸಲಿಟ್ಟಿಲ್ಲ. ಸರ್ಕಾರದ ಸುತ್ತೋಲೆಯ ಪ್ರಕಾರ ಇದು ಮುಂದಿನ ಐದು ವರ್ಷಗಳಲ್ಲಿ 50 ಆರಿಸಿದ ಜಿಲ್ಲೆಗಳಲ್ಲಿ ಕೇವಲ 10ಲಕ್ಷ ಕಾರ್ಮಿಕರಿಗಾಗಿ ತಂದಿರುವ ಯೋಜನೆ ಮಾತ್ರ. 37 ಕೋಟಿಯೆಲ್ಲಿ, 10 ಲಕ್ಷವೆಲ್ಲಿ?

ಒಟ್ಟು ರಾಷ್ಟ್ರೀಯ ಉತ್ಪನ್ನ ಅಥವಾ ಜಿಡಿಪಿ ಬೆಳವಣಿಗೆಯ ರಂಗದಲ್ಲಿ ಅಪಾರ ಹೆಚ್ಚಳವಾಗಿದೆಯೆಂದು ಅಬ್ಬರಿಸಲಾಗುತ್ತಿದೆ. ಆದರೆ ಆರ್ಥಿಕ ಸರ್ವೇಕ್ಷಣೆಗಳು ಮತ್ತು ರಿಝರ್ವ್ ಬ್ಯಾಂಕ್ ಅಂಕಿ ಅಂಶಗಳ ಪ್ರಕಾರ

- 2000ರಿಂದ 2003ರ ನಂತೆ ವಾರ್ಷಿಕ ಆರ್ಥಿಕ ಬೆಳವಣಿಗೆ 1990 ದಶಕದ ಸರಾಸರಿ ಬೆಳವಣಿಗೆಗಿಂತಲೂ ಕಮ್ಮಿ. ಅಂದರೆ ಉದಾರೀಕರಣದ ಮೊದಲ ದಶಕ ದೇಶದ ಆರ್ಥಿಕವನ್ನು ಅವನತಿಯ ಮಾರ್ಗದಲ್ಲಿ ತಂದು ನಿಲ್ಲಿಸಿದೆ.
- ಎನ್‌ಡಿಎ ಆಳ್ವಿಕೆಯ ಹಿಂದಿನ ಅವಧಿಯಲ್ಲಿ ವಾರ್ಷಿಕ ಬೆಳವಣಿಗೆ ದರ ಶೇ.6.7 ಇದ್ದದ್ದು 1998-2003 ಎನ್‌ಡಿಎ ಆಳ್ವಿಕೆಯಲ್ಲಿ ಶೇ.5ಕ್ಕೆ ಇಳಿಯಿತು.

ಬಡವರ ಬಗ್ಗೆ ಮೊಸಳೆ ಕಣ್ಣೀರು

ಗ್ರಾಮೀಣ ಅಭಿವೃದ್ಧಿ ಹಾಗೂ ಗ್ರಾಮೀಣ ಉದ್ಯೋಗಾವಕಾಶ ರಂಗದಲ್ಲಿ ಎನ್‌ಡಿಎ ಸಾಧನೆಯೇನು? ಅದು ಸತತವಾಗಿ ಗ್ರಾಮೀಣ ಆರ್ಥಿಕವನ್ನು ಹೀರುವ, ಒಟ್ಟು ರಾಷ್ಟ್ರೀಯ ಉತ್ಪನ್ನದಲ್ಲಿ ಗ್ರಾಮೀಣ ಜನತೆಯ ಪಾಲನ್ನು ವಂಚಿಸುವ ಒಂದು ಕಥೆ. ಗ್ರಾಮೀಣ ಅಭಿವೃದ್ಧಿ ಖರ್ಚು 1985-90ರಲ್ಲಿ ಒಟ್ಟು ರಾಷ್ಟ್ರೀಯ ಉತ್ಪನ್ನದ (ಬಿಜೆಪಿ)ದ ಶೇ.14.5 ಇದ್ದದ್ದು, 1990ರ ದಶಕದ ಆರಂಭದಲ್ಲಿ ಶೇ 8ಕ್ಕೆ ಇಳಿಯಿತು, 1998ರ ನಂತರದ ವರ್ಷಗಳಲ್ಲಿ ಶೇ.5ಕ್ಕಿಂತಲೂ ಕಡಿಮೆಯಾಗಿದೆ. ಅಂದರೆ ಕೃಷಿ ಆದಾಯಗಳ 20000 ಕೋಟಿಗಳಿಂದ 1,50,000 ಕೋಟಿ ರೂ.ಗಳಷ್ಟು ಇಳಿಕೆಯಾಗಿದ.

ಕೃಷಿಯಲ್ಲಿ ಉದ್ಯೋಗಾವಕಾಶ ಬೆಳವಣಿಗೆಯ ದರ 1983-93ರಲ್ಲಿ ಶೇ.1.51 ಇದ್ದದ್ದು 1993-2000ರಲ್ಲಿ ಅದು ಬೆಳವಣಿಗೆಯ ಬದಲು ಶೇ.0.34 ಇಳಿಕೆಯನ್ನು ಕಂಡಿದೆ. ಗ್ರಾಮೀಣ ಆರ್ಥಿಕದ ದೊಡ್ಡ ವಿಭಾಗವಾದ ಕೃಷಿ ಕಾರ್ಮಿಕರಿಗೆ ವರ್ಷದಲ್ಲಿ 100 ದಿನಗಳ ಕೆಲಸವೂ ದೊರೆಯುವುದಿಲ್ಲ. ಆದರೂ ಅವರನ್ನು ಉದ್ಯೋಗಸ್ಥರೆಂದು ಪರಿಗಣಿಸ ಲಾಗುತ್ತದೆಯೆಂದರೆ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗದ ಪರಿಸ್ಥಿತಿಯನ್ನು ಗ್ರಹಿಸಬಹುದು. ಭೂಹೀನ ಗ್ರಾಮೀಣ ಕುಟುಂಬಗಳ ಪ್ರಮಾಣ 1987-88ರಲ್ಲಿ ಶೇ.35 ಇದ್ದದ್ದು 1999-2000ರಲ್ಲಿ ಶೇ.41ಕ್ಕೆ ಏರಿದೆ.

ತಮ್ಮ ಆಳ್ವಿಕೆಯಲ್ಲಿ ಬೆಳೆಗಳಿಗೆ ಕೃಷಿ ಬೆಂಬಲ ಬೆಲೆ ಶೇ.15 ದಿಂದ ಶೇ.56ಕ್ಕೇರಿತು ಎನ್ನುತ್ತಾರೆ ಎನ್‌ಡಿಎ ಮಂದಿ. ಆದರೆ ಇದೇ ಅವಧಿಯಲ್ಲಿ ರಸಗೊಬ್ಬರದ ಬೆಲೆ ಶೇ.50 ಏರಿತು. ಡಿಸೇಲ್ ಬೆಲೆ ಶೇ.100 ಏರಿತು, ಸೀಮೆ ಎಣ್ಣೆ ಬೆಲೆ ಮೂರು ಪಟ್ಟಾಯಿತು, ವಿದ್ಯುತ್, ನೀರಾವರಿ ಮತ್ತಿತರ ಕೃಷಿ ಅಗತ್ಯಗಳ ಬೆಲೆಗಳು ಶೇ.100ರಷ್ಟು ಏರಿದವು ಎಂಬುದನ್ನು ಮಾತ್ರ ಅವರು ಮರೆ ಮಾಚುತ್ತಾರೆ.

ಹಸಿದವರಿಗೆಲ್ಲಾ ಅನ್ನ?

ಅಂತ್ಯೋದಯ ಅನ್ನ ಯೋಜನೆಯು ಇನ್ನು 50 ಲಕ್ಷ ಗ್ರಾಮೀಣ ಬಡವರಿಗೆ ವಿಸ್ತರಿಸಲಾಗಿದೆ ಎಂದು ಪ್ರಧಾನ ಮಂತ್ರಿಗಳು ಹೇಳಿಕೊಳ್ಳುತ್ತಿದ್ದಾರೆ. ಕೆ.ಜಿ.ಗೆ 2ರೂ.ಗಳಲ್ಲಿ ಅಕ್ಕಿ, 3 ರೂ.ಗಳಲ್ಲಿ ಗೋಧಿಯನ್ನು ಸೀಮಿತ ಪ್ರಮಾಣದಲ್ಲಿ ಕೊಡುವ ಈ ಯೋಜನೆಯಲ್ಲಿ ಇದರಿಂದ ಒಟ್ಟು 2 ಕೋಟಿ ಜನರಿಗೆ ಇದು ಈಗ ಅನ್ವಯವಾಗುತ್ತದೆ, ಅವರಲ್ಲೂ ಎಷ್ಟು ಜನಕ್ಕೆ ಇದು ನಿಜವಾಗಿ ತಲುಪುತ್ತಿದೆ ಎಂಬುದು ಸಂಶಯಾಸ್ಪದವೇ. ಏಕೆಂದರೆ ಈ ಯೋಜನೆಯ ಆಹಾರಧಾನ್ಯಗಳಲ್ಲಿ ಬಹಳಷ್ಟು ಪಾಲು ವ್ಯಾಪಾರಿಗಳ ಮೂಲಕ

ೀಕಟ್ಟೆಗೆ ಹೋಗುತ್ತವೆ ಎನ್ನಲಾಗುತ್ತಿದೆ. ಈ ದೇಶದಲ್ಲಿ ಬಡತನದ ರೇಖೆಯ ಡವರ ಸಂಖ್ಯೆ ಸರ್ಕಾರದ ಪ್ರಕಾರವೇ 35 , ಇತರ ಬಡವರ ಗತಿಯೇನು?

ಲಾ ವಾರ್ಷಿಕ ಆಹಾರಧಾನ್ಯ ಬಳಕೆ -98ರಲ್ಲಿ 174.2 ಕೆ.ಜಿ. ಇದ್ದದ್ದು -01ರಲ್ಲಿ 151.06 ಕೆ.ಜಿ.ಗೆ ಇಳಿಯಿತು. ಈಗ ಪರಿಸ್ಥಿತಿ ಕಳೆದ ನಂತರ 2002-2003ರಲ್ಲಿ 156.55 ಕೆ.ಜಿ. ಏರಿದೆಯಷ್ಟೇ. ಗ್ರಾಮೀಣ ೆಯ ಶೇ.66.6 ತೀವ್ರ ಶೋಷಣೆಗೆ ಯಾಗಿದ್ದಾರೆ. ಆಹಾರ ಮತ್ತು ಕೃಷಿ ಸಂಘಟನೆ ಯ ವರದಿಯ ಪ್ರಕಾರ ಹಸಿದ ಜನಗಳ 1995-97ರಲ್ಲಿ 19.40 ಕೋಟಿಯಿದ್ದದ್ದು -2000ರಲ್ಲಿ 21.45ಕೋಟಿಗೇರಿದೆ. ಕಳೆದ ವರ್ಷಗಳಲ್ಲಿ ಕನಿಷ್ಠ 16000 ರೈತರು ಆತ್ಮಹತ್ಯೆ

ಎಲ್‌ಐಸಿ

ಡಿಕೊಂಡರು.

ಾರಿಗೆ 'ಹಿತಾನುಭವ'?

ಬಿಜೆಪಿ ಪ್ರಧಾನ ಮಂತ್ರಿಗಳ ಆಳೆತ್ತರದ ದೊಂದಿಗೆ 'ಭಾರತ ಪ್ರಕಾಶಿಸುತ್ತಿದೆ' ಮತ್ತು ಾನುಭವ'ದ ಜಾಹಿರಾತುಗಳನ್ನು ಅಬ್ಬರದಿಂದ ಯಬಿಟ್ಟಿತು. ಆದರೆ ದೇಶದ ಜನಸಾಮಾನ್ಯರಿಗೆ ಾದರೂ ಪ್ರಕಾಶ ಕಾಣುತ್ತಿದೆಯೇ? ಾನುಭವವಾಗು ತ್ತಿದೆಯೇ? ಮಾನವ ಅಭಿವೃದ್ಧಿ ್ಯಂಕದಲ್ಲಿ ಭಾರತದ ಸ್ಥಾನ ಕಳೆದ ಎರಡು ರ್ಷಗಳಲ್ಲೇ 123ರಿಂದ 127ಕ್ಕೆ ಇಳಿದಿರುವುದು ರತ ಪ್ರಕಾಶಿಸುತ್ತಿರುವುದರ ಸಂಕೇತವೇ?

ಹಾಗಿದ್ದರೆ ಹಿತಾನುಭವ ಆಗುತ್ತಿರುವುದು ಾರಿಗೆ? ಕ್ರಿಮಿನಲ್ ಕೇಸ್‌ಗಳಲ್ಲಿ ಚಾರ್ಜ್ ಟ್ ಆಗಿದ್ದರೂ ಎಲ್.ಕೆ.ಅಡ್ವಾಣಿ, ಮುರಳಿ ನೋಹರ ಜೋಷಿ, ಉಮಾಭಾರತಿ ಅಧಿಕಾರದ ಲಗಳನ್ನು ಉಣ್ಣುತ್ತಿದ್ದು, ಅವರಿಗಂತೂ ಜವಾಗಿಯೂ ಹಿತಾನುಭವ ವಾಗುತ್ತಿರಬೇಕು. ಹಲ್ಕಾ ಟೇಪುಗಳಲ್ಲಿ, ಶವಪೆಟ್ಟಿಗೆ ಹಗರಣಗಳಲ್ಲಿ ಲುಕಿಕೊಂಡ ಜಾರ್ಜ್ ಫರ್ನಾಂಡೀಸ್ ಇನ್ನೂ ಕ್ಷಣಾ ಮಂತ್ರಿಯ ಪೀಠದಲ್ಲೇ ಮುಂದುವರೆದಿದ್ದು ಂಪೂರ್ಣ ಹಿತಾನುಭವ ಕಾಣುತ್ತಿದ್ದಾರೆ. ಛಾಪಾ ಗದ ಹಗರಣದಲ್ಲಿ 60000 ಕೋಟಿ ರೂ.ಗಳನ್ನು ುಂಗಿದ ಪೋಲೀಸ್ ಅಧಿಕಾರಿಗಳು, ಶಾಸಕರು ೂಡಾ ನಿಜವಾಗಿಯೂ ಹಿತಾನುಭವ ಪಡೆಯುತ್ತಿದ್ದಾರೆ. ಅಮೂಲ್ಯ ಸಾರ್ವಜನಿಕ ಲಯದ ಘಟಕಗಳನ್ನು ಪುಕ್ಕಟೆಯಾಗಿ ಪಡೆದಿರುವ ಖಾಸಗೀ ವಲಯದ ತಿಮಿಂಗಿಲಗಳಂತೂ ಂಡಿತಾ ಈ 'ಹಿತಾನುಭವ'ದ ಆಚರಣೆಯಲ್ಲಿ ೇರಿಕೊಳ್ಳುತ್ತಾರೆ. ಯುಟಿಐ ಹಗರಣದಲ್ಲಿ ಲಾಭ ಡೆದ ಪ್ರಧಾನ ಮಂತ್ರಿಗಳ ಕಛೇರಿಯ ಮಂದಿ ುತ್ತು ಕೇಂದ್ರ ಜಾಗೃತಾ ಆಯುಕ್ತರು



ಪ್ರಧಾನಮಂತ್ರಿಗಳಿಗೆ ಯಾವ ಐವರು ಕೇಂದ್ರ ಮಂತ್ರಿಗಳ ವಿರುದ್ಧ ವರದಿ ನೀಡಿದರೋ ಅವರು ಕೂಡಾ ಹಿತಾನುಭವ ಪಡೆಯುತ್ತಿದ್ದರೆ ಆಶ್ಚರ್ಯವಿಲ್ಲ. ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ 1 ಲಕ್ಷ 20 ಸಾವಿರ ಕೋಟಿ ರೂ.ಗಳಷ್ಟು ಸಾಲ ಬಾಕಿಯಿರುವ ದೊಡ್ಡ ದೊಡ್ಡ ಕಂಪನಿಗಳ ಮಾಲೀಕರಿಗೆ ಮತ್ತು 1.5 ಲಕ್ಷ ಕೋಟಿ ತೆರಿಗೆ ವಂಚಿಸಿರುವ ಕಂಪನಿಗಳ ಮಾಲೀಕರಿಗಂತೂ ಇಷ್ಟೊಂದು ಹಿತಾನುಭವ ಎಂದೂ ಆಗಿರಲಿಕ್ಕಿಲ್ಲ. ಕಾರ್ಮಿಕರ ಹಕ್ಕುಗಳನ್ನು ಒಂದೆಡೆ ಕಾನೂನುಗಳ ತಿದ್ದುಪಡಿಗಳ ಮೂಲಕ, ಇನ್ನೊಂದೆಡೆ ತಮಿಳು ನಾಡಿನಲ್ಲಿ ಕಂಡಂತಹ ಆಡಳಿತದ ಸಂಯೋಜಿತ ಧಾಳಿಗಳ ಮೂಲಕ ದಮನ ಮಾಡುತ್ತಿರುವುದರಿಂದ ಸಿಐಐ, ಫಿರೆ ಮುಂತಾದ ಮಾಲಿಕರ ಸಂಘಗಳವರು ಮತ್ತು ಇತರ ಮಾಲೀಕರೂ ಖಂಡಿತವಾಗಿ ಹಿತಾನುಭವ ಪಡೆಯುತ್ತಿದ್ದಾರೆ.

ಕಾರ್ಮಿಕ ವರ್ಗ ಅನುಭವಿಸಿದ್ದೇನು?

ಎನ್‌ಡಿಎ ಆಳ್ವಿಕೆಯಲ್ಲಿ ಕಾರ್ಮಿಕ ವರ್ಗ ನಿಜವಾಗಿ ಅನುಭವಿಸಿದ್ದೇನು? ಒಂದಾದ ಮೇಲೊಂದರಂತೆ ವ್ಯವಸ್ಥಿತ ಧಾಳಿಗಳ ಮೂಲಕ ಅವರ ಹಕ್ಕುಗಳ ಮತ್ತು ಬದುಕಿನ ಮೇಲೆಯೇ ಗುರಿಯಿಡಲಾಗಿದೆ. ಒಂದೆಡೆ ಕಾರ್ಮಿಕ ಕಾನೂನುಗಳನ್ನೇ ಆಮೂಲಾಗ್ರವಾಗಿ ಬದಲಿಸಿ 'ಹೈರ್ ಅಂಡ್ ಫೈರ್' ವ್ಯವಸ್ಥೆ ತರುವ, ಸಂಪೂರ್ಣ ಕಾಂಟ್ರಾಕ್ಟೀಕರಣವನ್ನು ಕಾನೂನುಬದ್ಧಗೊಳಿಸುವ, ಆ ಮೂಲಕ ಕಾರ್ಮಿಕರನ್ನು ಗುಲಾಮರ ಮಟ್ಟಿಗೆ ಇಳಿಸುವ ಪ್ರಯತ್ನಗಳು ಭರದಿಂದ ಸಾಗಿವೆ. ಕಾರ್ಮಿಕ ಸಂಘಗಳ ದೃಢ ವಿರೋಧದಿಂದಾಗಿ ಸಂಸತ್ತಿನಲ್ಲಿ ಈ ಕಾನೂನು ಬದಲಾವಣೆಗಳನ್ನು ತರಲಾಗದ ಎನ್‌ಡಿಎ ಸರ್ಕಾರ ಒಂದು ಆದೇಶವನ್ನೇ ಹೊರಡಿಸಿ 'ನಿಗದಿತ ಅವಧಿಯ ಉದ್ಯೋಗ'ಕ್ಕೆ ಅವಕಾಶ ಒದಗಿಸಿ ಕಾರ್ಮಿಕರನ್ನು ಮನಬಂದಂತೆ ತೆಗೆದು ಹಾಕುವ ಅಧಿಕಾರವನ್ನು ಮಾಲೀಕರಿಗೆ ಕೊಡಮಾಡಿದೆ. ಖಾಸಗಿ ಮಾಲೀಕರು ಕಾನೂನಿನ ಕನಿಷ್ಠ ಅಂಶಗಳನ್ನೂ ಲೆಕ್ಕಿಸದೆ ಮನಬಂದಂತೆ ಲಾಕೌಟುಗಳನ್ನು ಮಾಡುತ್ತಿದ್ದರೆ ಸರ್ಕಾರ ಅವರಿಗೆ ಸಕ್ರಿಯ ಬೆಂಬಲ ನೀಡುತ್ತಿದೆ. ಆದ್ದರಿಂದಲೇ ಎನ್‌ಡಿಎ ಆಳ್ವಿಕೆಯಲ್ಲಿ ಮುಷ್ಕರಗಳಿಂದಾದ ಕೆಲಸದ ದಿನಗಳ ನಷ್ಟಕ್ಕಿಂತ ಲಾಕೌಟ್‌ಗಳಿಂದಾದ ನಷ್ಟ 8 ಪಟ್ಟು ಹೆಚ್ಚು. ಆದರೂ ಕಾರ್ಮಿಕರ ಮುಷ್ಕರದ ಹಕ್ಕನ್ನು ನಿಷೇಧಿಸಲು ಮುಂದಾದ ಸುಪ್ರೀಂ ಕೋರ್ಟ್ ಮಾಲಿಕವರ್ಗದ ಈ ವಕ್ರಬುದ್ಧಿಯನ್ನು ಗಮನಕ್ಕೆ ತಗೊಳ್ಳದಿರುವುದು ನಿಜಕ್ಕೂ ನಾಚಿಕೆಗೇಡು.

ಉಳಿತಾಯದ ಮೇಲೆ ಬಡ್ಡಿದರಗಳಲ್ಲಿ ಕಡಿತ

ಈ ಸರ್ಕಾರದ ಆಳ್ವಿಕೆಯಲ್ಲಿ ಕಾರ್ಮಿಕರನ್ನು ಸರ್ವವಿಧಗಳಿಂದಲೂ ಲೂಟಿ ಮಾಡಲಾಗಿದೆ. ಕಡಿಮೆ ಬಡ್ಡಿ ವ್ಯವಸ್ಥೆಯ ಹೆಸರಿನಲ್ಲಿ ಭವಿಷ್ಯ ನಿಧಿಯಲ್ಲಿ ಕಾರ್ಮಿಕರ ಜೀವನಪೂರ್ತಿಯ ಉಳಿತಾಯದ ಮೇಲಿನ ಬಡ್ಡಿದರವನ್ನು ಸತತವಾಗಿ ಇಳಿಸುತ್ತಾ ಬಂದು ಅದು ಶೇ.12 ರಿಂದ ಶೇ.9ಕ್ಕೆ ಇಳಿದಿದೆ (ಸರಕಾರಿ ನೌಕರರಿಗೆ ಶೇ.8). ಅದನ್ನು ಶೇ.8ಕ್ಕೆ ಇಳಿಸುವ ಹುನ್ನಾರವಿದೆ. ಇದೇ ಎನ್‌ಡಿಎ ಮಂದಿ ಮತ್ತೆ ಅಧಿಕಾರಕ್ಕೆ ಮರಳಿದರೆ ಮುಂದಿನ ವರ್ಷಗಳಲ್ಲಿ ಇನ್ನಷ್ಟು ಕಡಿತ ಕಾದಿದೆ. ಭವಿಷ್ಯನಿಧಿಯ ಮೇಲೆ ಮಾತ್ರವಲ್ಲ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್, ಕಿಸಾನ್ ವಿಕಾಸ್ ಪತ್ರ ಇತ್ಯಾದಿ ಸಣ್ಣ ಉಳಿತಾಯ ಸಾಧನಗಳ ಮೇಲಿನ ಬಡ್ಡಿ ದರಗಳನ್ನು ವಿಪರೀತವಾಗಿ ಇಳಿಸಿ ಕಾರ್ಮಿಕರು, ನೌಕರರು ಮತ್ತು ನಿವೃತ್ತರು ತಮ್ಮ ಉಳಿತಾಯವನ್ನು ಶೇರು ಮಾರುಕಟ್ಟೆಗಳಲ್ಲಿ ತೊಡಗಿಸಿ ವ್ಯಾಪಾರಸ್ಥರ ಮರ್ಜಿಗೆ ಒಳಪಡುವಂತೆ ಮಾಡಲಾಗುತ್ತಿದೆ. ಕೇಂದ್ರ ಸರ್ಕಾರಿ ನೌಕರರಲ್ಲಿ ಹೊಸಬರ ಪೆನ್ಷನ್ ಯೋಜನೆಗೆ ಅವರು ತಾವೇ ವಂತಿಗೆ ನೀಡುವಂತೆ ಮಾಡಲಾಗಿದೆ.

ಕೇಂದ್ರ ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆಯನ್ನು ಮೂಲ ವೇತನದೊಂದಿಗೆ ಸೇರಿಸುವ ಪ್ರಕಟಣೆ ಬಂದಿರುವುದು ಎನ್‌ಡಿಎ ಸರ್ಕಾರದ ಉದಾರತನದಿಂದ ಅಲ್ಲ, ಬದಲಿಗೆ ನೌಕರರಲ್ಲಿ ಹಬ್ಬಿರುವ ಅಸಂತೃಪ್ತಿಯ ವಾತಾವರಣದಲ್ಲಿ ಚುನಾವಣೆಗಳನ್ನು ಎದುರಿಸಬೇಕಾಗಿ ಬಂದಿರುವ ಅಗತ್ಯದಿಂದಾಗಿ. ಫೆಬ್ರವರಿ 24ರ ಮುಷ್ಕರದ ಸಿದ್ಧತೆಯಲ್ಲಿ ಇದು ಅವರ ಗಮನಕ್ಕೆ ಬಂದಿತ್ತು. 5ನೇ ವೇತನ ಆಯೋಗ ಈ ಬಗ್ಗೆ ಹಿಂದೆಯೇ ಶಿಫಾರಸ್ಸು ಮಾಡಿತ್ತು. ಕೇಂದ್ರ ಸರ್ಕಾರ ಕೆಲವು ತಿಂಗಳ ಹಿಂದೆಯಷ್ಟೇ ಈ ಶಿಫಾರಸ್ಸನ್ನು ಜಾರಿಗೆ ತರಬೇಕೆನ್ನುವ ನೌಕರರ ಬೇಡಿಕೆಯನ್ನು ತಿರಸ್ಕರಿಸಿತ್ತು. ಕೇಂದ್ರದ ಹಣಕಾಸು ಕಾರ್ಯದರ್ಶಿ ಇದನ್ನು ಜಂಟಿ ಸಮಾಲೋಚನಾ ವ್ಯವಸ್ಥೆ (ಜೆಸಿಎಂ)ಯ ಸದಸ್ಯರಿಗೆ ತಿಳಿಸಿದ್ದರು. ಈಗ ಚುನಾವಣೆಯ ಹಿನ್ನೆಲೆಯಲ್ಲಿ ಎನ್‌ಡಿಎ ಸಚಿವ ಸಂಪುಟದ ಆ ನಿರ್ಧಾರ ಬದಲಾಗಿದೆ. ಆದರೂ ಈ ಒಂದು ಕ್ರಮ ಈ ಎನ್‌ಡಿಎ ಸರ್ಕಾರ ಕಛೇರಿಗಳ ಮುಚ್ಚಿಕೆ, ನೌಕರರ ಸಂಖ್ಯೆ ಕಡಿತ, ಸಾರ್ವಜನಿಕ ಸೇವೆಗಳ ಕಡಿತ ಅಥವಾ ಅವನ್ನು ಲಾಭದಾಹೀ ಖಾಸಗಿ ತಿಮಿಂಗಿಲಗಳಿಗೆ ಕೊಡಮಾಡಿದ್ದು ಇತ್ಯಾದಿ ಅಪರಾಧಗಳನ್ನೇನೂ ತೊಳೆಯುವುದಿಲ್ಲ.

ಬೇಕಾಬಿಟ್ಟಿ ಖಾಸಗೀಕರಣ

ಸರ್ಕಾರೀ ಕಛೇರಿಗಳಲ್ಲಿ ಬೇಕಾದ್ದಕ್ಕಿಂತ ಹೆಚ್ಚು ನೌಕರರಿರುವುದರಿಂದ ಸಂಖ್ಯೆಯಲ್ಲಿ ಕಡಿತ ತರಲಾಗುತ್ತಿದೆ ಎಂದು ಎನ್‌ಡಿಎ ಸರ್ಕಾರ ಹೇಳುತ್ತಿದೆ. ಇದು ನಿಜವಲ್ಲ, ಬದಲಾಗಿ ಇದು ಈ ಸಾರ್ವಜನಿಕ ಸೇವೆಗಳನ್ನು ಖಾಸಗಿಯವರಿಗೆ ಒಪ್ಪಿಸಲು ಒಂದು ಕುಟಿಲ ತಂತ್ರ. ಭಾರತದಲ್ಲಿ ಸರ್ಕಾರಿ ನೌಕರರ ಪ್ರಮಾಣ ಬೇರೆ ಹಲವು ದೇಶಗಳಿಗೆ ಹೋಲಿಸಿದರೆ ಬಹಳ ಕಡಿಮೆ. ಇದು ಒಟ್ಟು ಜನಸಂಖ್ಯೆಯ ಶೇ.0.2 ರಷ್ಟಿದೆ. ಹಲವು ಅಭಿವೃದ್ಧಿಶೀಲ ದೇಶಗಳಲ್ಲಿ ಇದು ಶೇ.0.4ರಷ್ಟಿದೆ. ಅಮೆರಿಕಾದಲ್ಲಿ ಶೇ.0.6ರಷ್ಟಿದೆ ಹಾಗೂ ಯೂರೋಪಿಯನ್ ದೇಶಗಳಲ್ಲಿ ಇನ್ನೂ ಹೆಚ್ಚಿದೆ. ಇದು ಎನ್‌ಡಿಎ ಸರ್ಕಾರದ ನೌಕರ-ವಿರೋಧಿ, ಜನ-ವಿರೋಧಿ ಮುಖವನ್ನು ಸ್ಪಷ್ಟವಾಗಿ ಬಯಲಿಗೆಳೆಯುತ್ತದೆ.



ಆರ್‌ಎಸ್‌ಎಸ್ ಸಂಸ್ಥೆಗಳ ವಂಚಕ ತಂತ್ರ

ಆದ್ದರಿಂದ ಜನಗಳನ್ನು ವಂಚಿಸಲು, ಮತ್ತೆ ಅಧಿಕಾರಕ್ಕೆ ಮರಳಲು ಬಿಜೆಪಿ ಮಂದಿ ಸುಳ್ಳು ಪ್ರಚಾರಮಾಲೆಯೊಂದಿಗೆ ಚುನಾವಣೆ ಸಮೀಪಿಸುತ್ತಿದ್ದಂತೆ ಕೋಮುವಾದಿ ಭಾವನೆಗಳನ್ನು ಬಡಿದೆಬ್ಬಿಸುವ ಪ್ರಯತ್ನವನ್ನೂ ನಡೆಸುತ್ತಿದ್ದಾರೆ. ವಿಶ್ವ ಹಿಂದೂ ಪರಿಷತ್, ಭಜರಂಗದಳ ಇತ್ಯಾದಿಗಳು ರಾಮ ದೇವಸ್ಥಾನ ಕಟ್ಟುವ ಹೆಸರಲ್ಲಿ ಮತ್ತೆ ಭಾವೋದ್ವೇಗವನ್ನು ಬಡಿದೆಬ್ಬಿಸಲು, ಹಿಂದುತ್ವದ ಬಗ್ಗೆ ಭಂಡತನದಿಂದ ಮಾತನಾಡುತ್ತಿದ್ದರೆ, ಬಿಜೆಪಿ ಮುಖಂಡರು ಅವರಿಗೆ ಕಡಿವಾಣ ಹಾಕುವ ಮಧ್ಯಸ್ಥಿಕೆದಾರರ ಪಾತ್ರ ವಹಿಸುವ ನಾಟಕವಾಡುತ್ತಾ

ಪುಟ 8 ಕ್ಕೆ

84 ಲಕ್ಷ ಉದ್ಯೋಗಗಳೆಂಬ ಹಸಿ ಸುಳ್ಳು

ಇನ್ನು ಉದ್ಯೋಗದ ನಿರ್ಮಾಣದ ಮಿಥ್ಯೆ. ಕಳೆದ ವರ್ಷ 84 ಲಕ್ಷ ಉದ್ಯೋಗಾವಕಾಶ ನಿರ್ಮಾಣವಾಗಿದೆಯೆಂಬುದು ಇನ್ನೊಂದು ಹಸೀ ಸುಳ್ಳು.

ಸಂಘಟಿತ ವಲಯದಲ್ಲಿ ಕಳೆದ ಐದು ವರ್ಷಗಳಲ್ಲಿ ಉದ್ಯೋಗಾವಕಾಶ ಸತತವಾಗಿ ಕಡಿತಗೊಳ್ಳುತ್ತಾ ಬಂದಿದೆ. 1996-97ರಿಂದ 2001-02ರ ನಡುವೆ 8.8 ಲಕ್ಷ ಉದ್ಯೋಗಗಳು ನಾಶಗೊಂಡಿವೆ. ಸರ್ಕಾರೀ ವಲಯದಲ್ಲಿ ಮುಂದಿನ ಐದು ವರ್ಷಗಳಲ್ಲಿ ವರ್ಷಕ್ಕೆ ಶೇ.10ರಂತೆ ಕಡಿತವನ್ನು ಸಾರಲಾಗಿದೆ. ಅಂದರೆ ವರ್ಷಕ್ಕೆ 66000 ಉದ್ಯೋಗಗಳು ನಾಶವಾಗಲಿವೆ. ಹಾಗಿದ್ದರೆ 84 ಲಕ್ಷ ಉದ್ಯೋಗಗಳು ನಿರ್ಮಾಣಗೊಂಡದ್ದೆಲ್ಲಿ? ಐಟಿ (ಮಾಹಿತಿ ತಂತ್ರಜ್ಞಾನ) ವಲಯದಲ್ಲಿ ಎನ್ನುತ್ತಿದೆ ಸರ್ಕಾರ.

ಆದರೆ ಐಟಿ ವಲಯದಲ್ಲಿನ ಸ್ಥಿತಿ ಇದನ್ನು ಸಮರ್ಥಿಸುವುದಿಲ್ಲ. ಮುಂದಿನ ನಾಲ್ಕು ವರ್ಷಗಳಲ್ಲಿ ಈ ವಲಯದಲ್ಲಿ 11-20 ಲಕ್ಷ ಉದ್ಯೋಗಾವಕಾಶಗಳು ಬರಬಹುದೆಂದು ಅಂದಾಜು ಮಾಡಲಾಗಿದೆ. ಆದರೆ ಆ ವೇಳೆಗೆ ಈ ಉದ್ಯೋಗದ ಮಾರುಕಟ್ಟೆಯಲ್ಲಿ 11.68 ಲಕ್ಷ ಉದ್ಯೋಗಾರ್ಥಿಗಳು ಇರುತ್ತಾರೆ ಎಂದೂ ಅಂದಾಜು ಮಾಡಲಾಗಿದೆ. ಅಂದರೆ ಐಟಿ ಕ್ಷೇತ್ರದಲ್ಲೇ 48000 ನಿರುದ್ಯೋಗಿಗಳಿರುತ್ತಾರೆ.

ಅಸಂಘಟಿತ ವಲಯದಲ್ಲೂ ಉದ್ಯೋಗ ನಿರ್ಮಾಣ ಉತ್ಸಾಹಜನಕವಾಗಿಲ್ಲ. ಅಲ್ಲಿಯೂ ಹೆಚ್ಚಳದ ಬದಲು ಒಟ್ಟಾರೆಯಾಗಿ ಇಳಿಕೆಯೇ ಆಗಿದೆ. ಕಟ್ಟಡ ನಿರ್ಮಾಣ ವಲಯದಲ್ಲಿ 51 ಲಕ್ಷ ಉದ್ಯೋಗಗಳು ಹೆಚ್ಚಿದ್ದರೆ, ಕೃಷಿಯಲ್ಲಿ 50 ಲಕ್ಷ, ಗಣಿಗಾರಿಕೆಯಲ್ಲಿ 4.3 ಲಕ್ಷ ಇಳಿಕೆಯಾಗಿದೆ.

ಸಾರಾಂಶವೆಂದರೆ, ಎನ್‌ಡಿಎ ಆಳ್ವಿಕೆಯಲ್ಲಿ ಸಂಘಟಿತ ವಲಯದಲ್ಲಿ ಉದ್ಯೋಗ ಕಡಿತವಾಗಿದೆ; ಅಸಂಘಟಿತ ವಲಯದಲ್ಲಿಯೂ ಬೆಳವಣಿಗೆ ಅಲ್ಪ. ಒಟ್ಟಿನಲ್ಲಿ 2003ರಲ್ಲಿ 84 ಲಕ್ಷ ಉದ್ಯೋಗಾವಕಾಶ ನಿರ್ಮಾಣವಾಗಿದೆ ಎಂಬುದಕ್ಕೆ ಯಾವುದೇ ಪುರಾವೆಯಿಲ್ಲ.

ಆರ್ಥಿಕ ಧೋರಣೆಯೇ ಉದ್ಯೋಗರಹಿತ ಬೆಳವಣಿಗೆಗೆ ಅನುಗುಣವಾಗಿರುವಾಗ ದೇಶದ ಆಂತರಿಕ ಉತ್ಪಾದನಾ ಸಾಮರ್ಥ್ಯವೇ ಇಳಿದಿರುವಾಗ ಉದ್ಯೋಗಾವಕಾಶ ನಿರ್ಮಾಣ ಹೇಗೆ ತಾನೇ ಸಾಧ್ಯ? ಆದ್ದರಿಂದಲೇ ಆರ್ಥಿಕದಲ್ಲಿ ಹಲವು ವಿನಾಶಕಾರೀ ವಿಕೃತಿಗಳು ಕಾಣ ಬರುತ್ತಿವೆ. ಬ್ಯಾಂಕುಗಳಲ್ಲಿ ಹಣ ಬಹಳಷ್ಟಿದ್ದರೂ ಆಂತರಿಕ ಹೂಡಿಕೆಯ ದರ ತ್ವರಿತವಾಗಿ ಇಳಿಯುತ್ತಿದೆ, ಅತ್ತ ರೈತರಿಗೆ ವಿಪರೀತ ಬಡ್ಡಿಗಳಿಂದಾಗಿ ಸಾಲ ಸಿಗುತ್ತಿಲ್ಲ. ಆಹಾರ ದಾಸ್ತಾನು ಗೋದಾಮುಗಳಲ್ಲಿ ತುಂಬಿ ತುಳುಕುತ್ತಿರುವಾಗ ಜನ ಹಸಿವಿನಿಂದ ಸಾಯುತ್ತಿದ್ದಾರೆ.

'ಕಡಿತ', 'ಕಾಂಟ್ರಾಕ್ಟೀಕರಣ' ಸರ್ಕಾರದ ಕಾರ್ಯತಂತ್ರವಾಗಿಬಿಟ್ಟಿರುವಾಗ, ಖಾಸಗೀ ವಲಯವೂ ಲಾಕೌಟ್, ಅನಧಿಕೃತ ಕ್ಲೋಶರ್, ರಿಟ್ರೆಂಚ್‌ಮೆಂಟ್‌ಗಳ ಮೂಲಕ ಧಾಳಿ ನಡೆಸಿದೆ. ಹೀಗಿರುವಾಗ ಉದ್ಯೋಗಾವಕಾಶ ಇಳಿಕೆಗೊಳ್ಳುವುದು ಖಂಡಿತ. ಮುಖ್ಯವಾಗಿ ವಿದ್ಯಾವಂತರಲ್ಲಿ ನಿರುದ್ಯೋಗ. ಆದರೂ ಸಾಕಷ್ಟು ಉದ್ಯೋಗಾವಕಾಶ ಬೆಳವಣಿಗೆ ಯಾಗುತ್ತಿದೆ ಎನ್ನುವುದು ಮಹಾ ಸುಳ್ಳುಗಾರರಿಗೆ ಮಾತ್ರ ಸಾಧ್ಯ.

ತೃತೀಯ ಶಕ್ತಿ ಕರ್ನಾಟಕದ ಆಯ್ಕೆ

ಪುಟ 3 ರಿಂದ


ವರ್ಷಕ್ಕೆ ಒಂದುಕೋಟಿ ಉದ್ಯೋಗಗಳನ್ನು ಸೃಷ್ಟಿಸುತ್ತೇವೆ ಎಂಬ ಭರವಸೆ ನೀಡಿ ನಿರುದ್ಯೋಗಿ ಯುವಕರನ್ನು ಆಕರ್ಷಿಸಿದ್ದ ವಾಜಪೇಯಿ ಅವರು ಕಳೆದ 5 ವರ್ಷಗಳ ಅವಧಿಯಲ್ಲಿ 20 ಲಕ್ಷಕ್ಕೂ ಹೆಚ್ಚು ಸಣ್ಣ ಮತ್ತು ಮಧ್ಯಮ ಕಾರ್ಖಾನೆಗಳನ್ನು ಮುಚ್ಚಿಸಿ ಲಕ್ಷಗಟ್ಟಲೆ ಕಾರ್ಮಿಕರು ಕೆಲಸ ಕಳೆದುಕೊಂಡು ಬೀದಿಪಾಲಾಗುವಂತೆ ಮಾಡಿದರು. ಸರ್ಕಾರಿ ಸ್ವಾಮ್ಯದ ಲಾಭದಾಯಕ ಉದ್ದಿಮೆಗಳನ್ನು ಖಾಸಗೀಕರಣ ಮಾಡುವ ಹೆಸರಿನಲ್ಲಿ ಬೆಲೆಬಾಳುವ ಸಾರ್ವಜನಿಕ ಆಸ್ತಿಗಳನ್ನು ಖಾಸಗೀ ಲಾಭಕೋರರಿಗೆ ದುಗ್ಗಾಣಿಗೆ ಮಾರಾಟ ಮಾಡಿ ಕೋಟಿಗಟ್ಟಲೆ ರೂ. ಕಮಿಷನ್ ಪಡೆದು ತಮ್ಮ ತಮ್ಮ ಜೇಬುಗಳಿಗೆ ಇಳಿಸಿಕೊಳ್ಳಲಾಯಿತು. ಈ ವಿಷಯದಲ್ಲಿ ರಾಜ್ಯ ಸರ್ಕಾರವು ಹಿಂದೆ ಬೀಳಲಿಲ್ಲ. ಕೆ.ಜಿ.ಎಫ್., ಕಿರ್ಲೋಸ್ಕರ್ ಮುಂತಾದ ಮುಚ್ಚಿದ ಕಾರ್ಖಾನೆಗಳನ್ನು ತೆರೆಯಲು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಎಳ್ಳಷ್ಟು ಪ್ರಯತ್ನ ಮಾಡಲಿಲ್ಲ ಮಾತ್ರವಲ್ಲ ಹಾರ್ನಹಳ್ಳಿ ರಾಮಸ್ವಾಮಿ ಆಯೋಗದ ವರದಿಯನ್ನು ಅಂಗೀಕರಿಸಿ ಸರ್ಕಾರಿ ಇಲಾಖೆಗಳಲ್ಲಿನ ಸಾವಿರಾರು ಹುದ್ದೆಗಳನ್ನು ರದ್ದು ಮಾಡಿತು. ರಾಜ್ಯ ಸರ್ಕಾರಕ್ಕೆ ಸೇರಿದ ಸಾರ್ವಜನಿಕ ಘಟಕಗಳನ್ನು ಖಾಸಗೀಯವರಿಗೆ ಮಾರಾಟ ಮಾಡುವ ಮತ್ತು ಸ್ವಂತಕ್ಕೆ ಬಾರೀ ಮೊತ್ತದ ಕಮಿಶನ್ ಹೊಡೆಯುವ ವಿಷಯದಲ್ಲಿ ಕೇಂದ್ರದ ಎನ್‌ಡಿಎ ಸರ್ಕಾರದ ಧೋರಣೆಗೂ ರಾಜ್ಯದ ಕಾಂಗ್ರೆಸ್ ಸರ್ಕಾರಕ್ಕೂ ಯಾವುದೇ ವ್ಯತ್ಯಾಸವಿಲ್ಲ ಎಂಬುದು ಸಾಬೀತಾಗಿದೆ.

ಕೇಂದ್ರದ ಬಿಜೆಪಿ ಸರ್ಕಾರ ಶಿಕ್ಷಣ, ಆರೋಗ್ಯದಂತಹ ಕ್ಷೇತ್ರಗಳಲ್ಲಿ ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ದಾಕ್ಷಿಣ್ಯವಾಗಿ ಕೈಬಿಟ್ಟಿರುವಂತೆ ರಾಜ್ಯ ಸರ್ಕಾರವೂ ಸಾಮಾಜಿಕ ಜವಾಬ್ದಾರಿಗಳಿಂದ ಹಿಂದಕ್ಕೆ ಸರಿಯುತ್ತಿದೆ. ಶಿಕ್ಷಣದ ಖಾಸಗೀಕರಣಕ್ಕೆ, ವ್ಯಾಪಾರೀಕರಣಕ್ಕೆ ಎಂದಿಲ್ಲದ ಕುಮ್ಮಕ್ಕು ನೀಡಲಾಗುತ್ತಿದೆ. ರಾಜ್ಯ ಬಜೆಟ್‌ನಲ್ಲಿ ಶಿಕ್ಷಣದ ಪಾಲನ್ನು ಶೇ.17ರಿಂದ ಶೇ.14 ಕ್ಕೆ ಇಳಿಸಲಾಗಿದೆ. ಉನ್ನತ ಶಿಕ್ಷಣಕ್ಕೆ ಶೇ.15 ರಷ್ಟು ಹಣ ಕಡಿತ ಮಾಡಲಾಗಿದೆ. ಉನ್ನತ ಶಿಕ್ಷಣವಂತೂ ಬಡವರ ಪಾಲಿಗೆ ಗಗನ ಕುಸುಮವಾಗಿದೆ.

ಬೆಂಗಳೂರು ಗುಲ್ಬರ್ಗಾ, ಹುಬ್ಬಳ್ಳಿ ಧಾರವಾಡದಂತಹ ನಗರಗಳ ಕುಡಿಯುವ ನೀರು ಸರಬರಾಜು ವ್ಯವಸ್ಥೆಯನ್ನು ಖಾಸಗೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗಿದ್ದು ನಗರವಾಸಿಗಳಿಗೆ ನೀರು ಭಾರೀ ದುಬಾರಿಯಾಗಲಿದೆ. ಗ್ರಾಮೀಣ ಪ್ರದೇಶಗಳಲ್ಲಿಯೂ ಸತತ ಬರಗಾಲದ ಕಾರಣದಿಂದ ಕುಡಿಯುವ ನೀರಿನ ಕೊರತೆ ಗಂಭೀರ ಸಮಸ್ಯೆಯಾಗಿದ್ದು ಹಳ್ಳಿಗಾಡಿನ ಜನತೆಗೆ, ಮುಖ್ಯವಾಗಿ, ಶುದ್ಧ ಕುಡಿಯುವ ನೀರಿನ ಅಭಾವ ಇರುವ ಫ್ಲೋರೈಡ್‌ಯುಕ್ತ ಪ್ರದೇಶಗಳಿಗೆ ಕುಡಿಯುವ ನೀರು ಒದಗಿಸುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಹುಬ್ಬಳ್ಳಿ- ಧಾರವಾಡ ನಗರಗಳಿಗೆ ಕುಡಿಯುವ ನೀರಿನ ಅಭಾವ ನೀಗಿಸಲು ಮಲಪ್ರಭಾ ನದಿಗೆ ಮಹದಾಯಿ ನದಿಯ ಕಳಸಾ-ಬಂಡೂರಿ ನಾಲೆಗಳನ್ನು ಜೋಡಿಸುವ ಪ್ರಶ್ನೆ ವಿಜಾಪುರಕ್ಕೆ ಭೀಮಾನದಿಯ ನೀರನ್ನು ದೊರಕಿಸುವ ಪ್ರಶ್ನೆ, ಸಿಂಗಟಾಲೂರ ಏತ ನೀರಾವರಿ ಯೋಜನೆಯಿಂದ ಗದಗ ನಗರಕ್ಕೆ ಕುಡಿಯುವ ನೀರು ಒದಗಿಸುವ ಪ್ರಶ್ನೆ - ಕೋಲಾರದ ಚಿತ್ರಾವರಿ ನದಿಗೆ ಆಣೆಕಟ್ಟು ಕಟ್ಟಿ ನೀರನ್ನು ಒದಗಿಸುವ ಪ್ರಶ್ನೆ, ಮಹಾರಾಷ್ಟ್ರದ ಕೊಯ್ನಾ, ಜಲಾಶಯದಿಂದ ಬೆಳಗಾವಿ ಜಿಲ್ಲೆಯ ಕೆಲವು ನಗರಗಳಿಗೆ ಕುಡಿಯುವ ನೀರು ಒದಗಿಸುವ ಪ್ರಶ್ನೆಯಂತಹ ಅತ್ಯಂತ ತುರ್ತಾಗಿ ಇತ್ಯರ್ಥವಾಗಬೇಕಾದ ವಿಷಯಗಳಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ.

ಸಾರ್ವಜನಿಕ ಆರೋಗ್ಯ ಕ್ಷೇತ್ರದಿಂದಲೂ ಸರ್ಕಾರ ಕಾಲ್ಕೀಳಲಾರಂಭಿಸಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತಸೇವೆ ಮಾಯವಾಗಿದೆ. ಹುಬ್ಬಳ್ಳಿಯ ಕಿಮ್ಸ್, ಬೆಂಗಳೂರಿನ ಬೌರಿಂಗ್, ವಿಕ್ಟೋರಿಯಾ ಮೊದಲಾದ ಪ್ರಮುಖ ಸರ್ಕಾರಿ ಆಸ್ಪತ್ರೆಗಳನ್ನು ಸ್ವಾಯತ್ತ ಸಂಸ್ಥೆಗಳಾಗಿ ಪರಿವರ್ತಿಸಿ ಅವುಗಳ ಖಾಸಗೀಕರಣದತ್ತ ಹೆಜ್ಜೆ ಇಡಲಾಗಿದೆ.

ಆರ್ಥಿಕವಾಗಿ ಹಿಂದುಳಿದಿರುವ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಪ್ರತ್ಯೇಕ ರಾಜ್ಯದ ಕೂಗು ಎದ್ದಿದ್ದರೂ ರಾಜ್ಯ ಸರ್ಕಾರ ಆ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಈ ಕುರಿತು ನಂಜುಂಡಪ್ಪ ಸಮಿತಿಯ ವರದಿ ಸರ್ಕಾರದ ಕೈಯಲ್ಲಿದ್ದರೂ ವರದಿಯಲ್ಲಿ ಒದಗಿಸಲಾದ ಶಿಫಾರಸುಗಳಲ್ಲಿ ಯೋಗ್ಯವಾದವುಗಳ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗಿಲ್ಲ. ಅಭಿವೃದ್ಧಿ ಎಂದರೆ ಕೇವಲ ರಸ್ತೆಗಳು, ಸೌಧಗಳು, ಕೋರ್ಟುಗಳು, ಕಛೇರಿಗಳು ಅಲ್ಲ. ಸಾಮಾನ್ಯ ಜನರ ಜೀವನದಲ್ಲಿ ಬದಲಾವಣೆ ತರುವಂತಹ, ಅವರ ಕೊಂಡುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವಂತಹ ಮಾನವ ಕೇಂದ್ರೀಕೃತ ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಮುಖ್ಯವಾಗಿ ಪ್ರಸಕ್ತ ಭೂಸುಧಾರಣಾ ಕಾಯ್ದೆಯಲ್ಲಿರುವ ಲೋಪದೋಷಗಳನ್ನು ಸರಿಪಡಿಸಿ ಭೂಹೀನ ಬಡವರಿಗೆ ಭೂಮಿಯ ವಿತರಣೆ ಆಗಬೇಕು. ನೀರಾವರಿಯೂ ಸೇರಿದಂತೆ ಕೃಷಿಗೆ ಮತ್ತು ಗ್ರಾಮೀಣ ಅಭಿವೃದ್ಧಿಗೆ ಸರ್ಕಾರ ಹೆಚ್ಚೆಚ್ಚು ಹಣ ಹೂಡುವಂತಾಗಬೇಕು. ಆದರೆ ಈ ವಿಷಯಗಳಲ್ಲಿ ಸರ್ಕಾರ ವಿರುದ್ಧ ಧಿಕ್ಕಿಗೆ ಮುಖ ಮಾಡಿಕೊಂಡಿದೆ. ಭೂಸುಧಾರಣಾ ಕಾಯ್ದೆಯನ್ನು ತಲೆಕೆಳಗೆ



ಮಾಡಲಾಗುತ್ತಿದೆ. ಸರ್ಕಾರಿ ಸ್ವಾಧೀನದಲ್ಲಿಟ್ಟುಕೊಳ್ಳಲಾದ ಭಾರೀ ಪ್ರಮಾಣದ ಭೂಮಿಯನ್ನು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ನೀಡುವ ಹುನ್ನಾರ ನಡೆದಿದೆ. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಅನಧಿಕೃತ ಗೇಣಿ ಪದ್ಧತಿ ಮತ್ತೊಮ್ಮೆ ವ್ಯಾಪಕವಾಗಿ ಬೆಳೆಯಲಾರಂಭಿಸಿದ್ದು ಗೇಣಿದಾರರ ಹಕ್ಕುಗಳಿಗೆ ರಕ್ಷಣೆ ಇಲ್ಲದಂತಾಗಿದೆ. ಅಕ್ರಮ ಸಾಗುವಳಿ ಸಕ್ರಮ ಪ್ರಕ್ರಿಯೆ ನೆನೆಗುದಿಗೆ ಬಿದ್ದಿದೆ. ಅರಣ್ಯ ಭೂಮಿಯಲ್ಲಿ ಕೃಷಿ ಮಾಡಿಕೊಂಡು ಅಥವಾ ಮನೆ ಕಟ್ಟಿಕೊಂಡು ಬದುಕುತ್ತಿರುವ ಬಡವರನ್ನು ಒಕ್ಕಲೆಬ್ಬಿಸುವ ಬೆದರಿಕೆ ಹಾಕಲಾಗುತ್ತಿವೆ.

ವಿಶ್ವಬ್ಯಾಂಕಿನ ಆದೇಶಕ್ಕೆ ತಕ್ಕಂತೆ ಕೃಷ್ಣ ಸರ್ಕಾರ ರಾಜ್ಯದಲ್ಲಿ ಇನ್ನು ಪೂರ್ಣಗೊಳ್ಳದಿರುವ ನೀರಾವರಿ ಯೋಜನೆಗಳಿಗೆ ಅಗತ್ಯ ಹಣಕಾಸನ್ನು ಒದಗಿಸುತ್ತಿಲ್ಲ. ಕೃಷ್ಣ ಮೇಲ್ದಂಡೆ ಯೋಜನೆ ಯಡಿ ಬಚಾವತ್ ಅವಾರ್ಡಿನ 'ಬಿ' ಸ್ಕೀಮ್‌ನಲ್ಲಿ ಕರ್ನಾಟಕದ ಪಾಲನ್ನು ಬಳಸಿ ಕೊಳ್ಳಲು ಯೋಜನೆಗಳನ್ನು ರೂಪಿಸಲಾಗಿಲ್ಲ ಘಟಪ್ರಭಾ, ಮಲಪ್ರಭಾ, ತುಂಗ ಎಡದಂಡೆ, ಬಲದಂಡೆ, ಹೇಮಾವತಿ ಯೋಜನೆ, ವಿಜಾಪುರ ಜಿಲ್ಲೆಗೆ ವರದಾನವಾಗಬಲ್ಲ ಮಳವಾಡ, ಚಿಮ್ಮಲಗಿ, ಗುತ್ತಿ ಬಸವಣ್ಣ ಏತ ನೀರಾವರಿ ಮೊದಲಾದವುಗಳು ಇನ್ನೂ ಪೂರ್ಣಗೊಂಡಿಲ್ಲ. ಪ್ರತಿ ಬಜೆಟ್‌ನಲ್ಲಿ ಒದಗಿಸಲಾಗುತ್ತಿರುವ ಅಲ್ಪಸ್ವಲ್ಪ ಹಣವೂ ಇಲಾಖೆಯ ಭ್ರಷ್ಟಾಚಾರಕ್ಕೆ ಪೋಲಾಗುತ್ತಿರುತ್ತದೆ.

ಕೃಷ್ಣ ಸರ್ಕಾರದ ಇನ್ನೊಂದು ಆತಂಕದ ವಿಷಯ: ಅದರ ಮೃದು ಹಿಂದುತ್ವ ಧೋರಣೆ. ಕೋಮು ಆಧಾರಿತ ದ್ರುವೀಕರಣದ ಮೂಲಕ ರಾಜ್ಯದಲ್ಲಿ ಒಂದು ನೆಲೆ ಕಂಡುಕೊಳ್ಳಲು ಬಿಜೆಪಿ, ಆರ್.ಎಸ್.ಎಸ್, ಪ್ರಯತ್ನ ಪಡುತ್ತಿರುವಾಗ ಕೋಮುವಾದಿ ಶಕ್ತಿಗಳ ವಿರುದ್ಧ ದೃಢವಾದ ನಿಲುಮೆ ತೆಗೆದುಕೊಳ್ಳಲು ಕೃಷ್ಣ ಸರ್ಕಾರ ಹಿಂದೇಟು ಹಾಕುತ್ತಾ ಬಂದಿದೆ. ಹಿಂದೂ ಮುಸ್ಲಿಂ ಸಾಮರಸ್ಯ ಸಂಕೇತದಂತಿರುವ ಬಾಬಾಬುಡನ್‌ಗಿರಿಯ ಪರಂಪರಾಗತವಲ್ಲದ ದತ್ತಜಯಂತಿ, ದ ಮಾಲೆಯಂತಹ ಆಚರಣೆಗಳನ್ನು ಮಾಡಲ ಬಜರಂಗದಳದವರಿಗೆ ಅನುಮತಿ ಕೊಟ್ಟ ಸರ್ಕಾರ ಸಂಘಪರಿವಾರದ ದುರುದ್ದೇಶವನ್ನು ಬಯಲ ಮಾಡಿ ಆ ಕ್ಷೇತ್ರದ ಪರಂಪರೆಗೆ ಧಕ್ಕೆಯಾಗುವುದ ತಡೆಯಬೇಕು ಎಂದು ಒತ್ತಾಯಿಸುತ್ತಿದ್ದ ಪ್ರಗತಿಪ ಸಂಘಟನೆಗಳ ಕಾರ್ಯಕರ್ತರನ್ನು ಬಂಧಿಸು ಮೂಲಕ ಇಡೀ ದೇಶದ ಜನತೆ ಆತಂ ಪಡುವಂತೆ ಮಾಡಿದ್ದು ಇದೇ ಕೃಷ್ಣರವರ ಸರ್ಕಾರ ಕರ್ನಾಟಕದಲ್ಲಿ ಜಾತ್ಯಾತೀತ ಶಕ್ತಿಗಳು ಬೆಳೆದ ದಶಕಗಳಿಂದ ಬೆಂಬಲಿಸುತ್ತಾ ಬಂದಿರು ಅಲ್ಪಸಂಖ್ಯಾತರು ಕಾಂಗ್ರೆಸ್ಸನ್ನು ಬಿಟ್ಟುಹೋ ಬಹುದು ಎಂಬುದು ಕೃಷ್ಣರವರ ಲೆಕ್ಕಾಚಾರ ಬಿಜೆಪಿ ಭೀತಿಯಿಂದ ಮುಸಲ್ಮಾನರು ಕಾಂಗ್ರೆಸ್ಸಿನಲ್ಲಿ ಉಳಿಯುವಂತೆ ಮಾಡಲು ಬಿಜೆಪಿಯ ಭೂತ ಇವರೇ ಅವಕಾಶ ಮಾಡಿಕೊಡುತ್ತಿದ್ದಾರ ರಾಜ್ಯದಲ್ಲಿ ಕಾಂಗ್ರೆಸ್ಸಿಗೆ ಮತ್ತು ಬಿಜೆಪಿ ಪರ್ಯಾಯವಾಗಿ ಮೂರನೇ ಶಕ್ತಿ ಜನತಾದಳ ನೇತೃತ್ವದಲ್ಲಿ ಬೆಳೆದು ಬರುವುದನ್ನು ತಡೆಯ ಕೃಷ್ಣ ಮತ್ತು ಅನಂತಕುಮಾರ್ ರಹಸ್ಯ ಒಪ್ಪಂ ಮಾಡಿಕೊಂಡು ಜನತಾದಳದ ವಿವಿಧ ಗುಂಪುಗ ಒಂದಾಗುವುದನ್ನು ವ್ಯವಸ್ಥಿತವಾಗಿ ತಡೆದಿರುವು ಗುಟ್ಟಿನ ವಿಷಯವೇನಲ್ಲ.

ಇತ್ತೀಚೆಗೆ ರಾಜಸ್ತಾನ, ಮಧ್ಯಪ್ರದೇ ಛತ್ತಿಸ್‌ಘಡ ರಾಜ್ಯಗಳ ವಿಧಾನಸಭಾ ಚುನಾವ ಗಳ ಸಂದರ್ಭದಲ್ಲಾದ ಅನಾಹುತ ಕರ್ನಾಟ ದಲ್ಲಾಗಬೇಕಾಗಿಲ್ಲ. ಆ ಮೂರು ರಾಜ್ಯಗಳ ಕಾಂಗ್ರೆಸ್ ದುರಾಡಳಿತದ ವಿರುದ್ಧ ವ ಚಲಾಯಿಸಲು ಹೊರಟ ಮತದಾರರಿಗೆ ಬಿಜೆ ಹೊರತುಪಡಿಸಿ ಮೂರನೇ ಪರ್ಯಾಯ ಲಭ್ಯವಿರಲಿಲ್ಲ. ಕಾಂಗ್ರೆಸ್ ವಿರುದ್ಧದ ಅತೃಪ್ತಿ ಲಾಭ ನಿರಾಯಾಸವಾಗಿ ಬಿಜೆಪಿ ಸಿಗುವಂತಾಯಿತು. ಕರ್ನಾಟಕದಲ್ಲಿ ಅಂತ ಪರಿಸ್ಥಿತಿ ಇಲ್ಲ. ಕಾಂಗ್ರೆಸ್ ಪಕ್ಷವ ತಿರಸ್ಕರಿಸಬಯಸುವ ಜನತೆ ಇಲ್ಲಿ ಬಿಜೆಪಿಯ ಬೆಂಬಲಿಸಬೇಕಾಗಿಲ್ಲ. ಕಾಂಗ್ರೆಸ್ ಮತ್ತು ಬಿಜ ಎರಡಕ್ಕೂ ಬದಲಿಯಾಗಿ ಇಲ್ಲಿ ಎಡ, ಜಾತ್ಯಾತೀ ಪಕ್ಷಗಳ ಪರ್ಯಾಯ ಶಕ್ತಿ ಅಸ್ತಿತ್ವದಲ್ಲಿದೆ. ಅ ಸಾಕಷ್ಟು ಬಲಿಷ್ಠವಾಗಿರಲಿಕ್ಕಿಲ್ಲ. ಮೂರ ಪರ್ಯಾಯದ ಅಡಿಯಲ್ಲಿ ಬರಬಹುದಾದ ಪಕ್ಷ ನಡುವೆ ಸ್ಥಾನ ಹೊಂದಾಣಿಕೆ ಸಾಕಷ್ಟು ಮೊದ ಆಗಬೇಕಾಗಿತ್ತು. ಮತದಾರರ ಮುಂದೆ ಮೂರ ಪರ್ಯಾಯ ಸ್ಪಷ್ಟವಾಗಿ ಗೋಚರಿಸುವಂತ ಬೇಕಾಗಿತ್ತು. ಈ ಎಲ್ಲಾ ದೌರ್ಬಲ್ಯಗ ನಡುವೆಯೂ ಜನತಾದಳ (ಜಾತ್ಯಾತೀ ಸಿಪಿಐ(ಎಂ), ಸಿಪಿಐ, ರೈತಸಂಘ ಮೊದಲ ಪಕ್ಷಗಳ ಅಭ್ಯರ್ಥಿಗಳನ್ನು ಗರಿಷ್ಠ ಸಂಖ್ಯೆಯಲ್ಲಿ ಗೆ ರಾಜ್ಯದಲ್ಲಿ ಮೂರನೇ ಶಕ್ತಿಯನ್ನು ಅಧಿಕಾ ತರುವುದರಲ್ಲೇ ರಾಜ್ಯದ ಜನತೆಯ ಹಿತ ಅಡಗಿ

ಪರ್ಯಾಯ ಶಕ್ತಿ

ಕರ್ನಾಟಕದ ಜನತೆಯ ಮುಂದೆ ಈಗ ಉಳಿದಿರುವ ಆಯ್ಕೆ ಕಾಂಗ್ರೆಸ್ ಮತ್ತು ಬಿಜೆಪಿಯೇತರ ತೃತೀಯ ಶಕ್ತಿ ಮಾತ್ರ. ಅದ್ವಾನಿಯಂತಹ ಬಿಜೆಪಿ ನಾಯಕರು ದೇಶದಲ್ಲಿ ಎರಡು ಪಕ್ಷಗಳ ಅಥವಾ ಎರಡು ಕೂಟಗಳ ವ್ಯವಸ್ಥೆಯೇ ಜಾರಿಯಲ್ಲಿ ಉಳಿಯಬೇಕು ಎಂದು ಅಪೇಕ್ಷಿಸುತ್ತಿದ್ದಾರೆ. ಎಡ ಪಕ್ಷಗಳ ಪ್ರಭಾವ ಹೊಂದಿರುವ 3ನೇ ಶಕ್ತಿ ರೂಪುಗೊಳ್ಳುವುದು ಅವರಿಗೆ ಇಷ್ಟವಿಲ್ಲ. ಅದರೆ ಕರ್ನಾಟಕದ ಜನತೆ ಬಿಜೆಪಿಯ ನೀತಿಗಳನ್ನು ಕಾಂಗ್ರೆಸ್ಸಿನ ನೀತಿಗಳನ್ನು ಅನುಭವಿಸಿ ನೋಡಿದ್ದಾರೆ. ಅವುಗಳ ನಡುವೆ ವ್ಯತ್ಯಾಸವಿಲ್ಲ ಎಂಬುದನ್ನು ಮನದಟ್ಟು ಮಾಡಿಕೊಂಡಿದ್ದಾರೆ. ಎಡ-ಜಾತ್ಯಾತೀತ ಪಕ್ಷಗಳ ಪರ್ಯಾಯವೇ ರಾಜ್ಯದ ಜನತೆಯ ಮುಂದಿರುವ ಆಯ್ಕೆ. ಉದಾರೀಕರಣ, ಖಾಸಗೀಕರಣದ ಪರವಾಗಿರುವ ಬಿಜೆಪಿಯನ್ನು ಮತ್ತು ಕಾಂಗ್ರೆಸನ್ನು ರಾಜ್ಯದ ಜನತೆ ತಿರಸ್ಕರಿಸಿ, ಸಿಪಿಐ(ಎಂ), ಸಿಪಿಐ, ರೈತಸಂಘ ಮತ್ತು ಜನತಾದಳ (ಜಾತ್ಯಾತೀತ) ಪಕ್ಷಗಳ ಅಭ್ಯರ್ಥಿಗಳನ್ನು ಗೆಲ್ಲಿಸಿ ರಾಜ್ಯದಲ್ಲಿ ಒಂದು ಪ್ರಗತಿಪರ ಜಾತ್ಯಾತೀತ ಸರ್ಕಾರವನ್ನು ಅಧಿಕಾರಕ್ಕೆ ತರುವುದು ಅಗತ್ಯವೂ ಅನಿವಾರ್ಯವೂ ಆಗಿದೆ.

ಬಿಜೆಪಿ ಕೂಟವನ್ನು ಸೋಲಿಸಿ

ಪುಟ 7 ರಿಂದ

ಜನಗಳನ್ನು ವಂಚಿಸಿ ಮತಗಳನ್ನು ಬಾಚುವ ಪ್ರಯತ್ನದಲ್ಲಿದ್ದಾರೆ. ಆರ್ಥಿಕ ನೀತಿಯ ವಿಷಯದಲ್ಲೂ ಅದೇ ತಂತ್ರ ಅನುಸರಿಸಲಾಗುತ್ತಿದೆ. ಸ್ವದೇಶಿ ಜಾಗರಣ ಮಂಚ್ ಹಾಗೂ ಬಿಎಂಎಸ್ ಸಾರ್ವಜನಿಕವಾಗಿ ಉದಾರೀಕರಣ, ಜಾಗತೀಕರಣದ ಆರ್ಥಿಕ ನೀತಿಯ ವಿರುದ್ಧ ವಿಷ ಕಾರುತ್ತಾರೆ, ಆದರೆ ಈ ನೀತಿಗಳ ವಿರುದ್ಧ ಯಾವುದೇ ನಿರ್ದಿಷ್ಟ ಕಾರ್ಯಾಚರಣೆಯಿಂದ ಸದಾ ದೂರವಿರುತ್ತಾರೆ.

ವಂಚಕರನ್ನು ಬಯಲಿಗೆಳೆಯಿರಿ

ಕಾರ್ಮಿಕವರ್ಗ ಮತ್ತು ಶ್ರಮಜೀವಿ ಜನತೆ ಮತ್ತೊಮ್ಮೆ ಈ ಬಿಜೆಪಿ ಕೂಟದ ವಂಚನೆಗೆ ಒಳಗಾಗಬಾರದು. ತಮ್ಮ ಈ ಮಹಾಶತ್ರು ಆಳ್ವಿಕೆಯನ್ನು ಮುಂಬರುವ ಚುನಾವಣೆಗಳಲ್ಲಿ ನಿರ್ಣಾಯಕವಾಗಿ ಸೋಲಿಸಿ ಅವರಿಗೆ ಒಂದು ಪಾಠವನ್ನು ಕಲಿಸಬೇಕು. ಶ್ರಮಜೀವಿ ಜನತೆ ಇತರ ಎಲ್ಲಾ ಜಾತ್ಯಾತೀತ, ಪ್ರಜಾಪ್ರಭುತ್ವವಾದಿ ಶಕ್ತಿಗಳೊಂದಿಗೆ ಸೇರಿಕೊಂಡು ಮುಂಬರುವ ದಿನಗಳಲ್ಲಿ ಒಂದು ಬಲಿಷ್ಠ ಪ್ರಚಾರ ಕಾರ್ಯಕ್ಕೆ ಇಳಿಯಬೇಕು, ದೇಶದ ಆರ್ಥಿಕವನ್ನು, ಸಮಾಜವನ್ನು, ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಈ ಬಿಜೆಪಿ ನೇತೃತ್ವದ ಕೂಟ ವಿನಾಶದ ದಾರಿಯಲ್ಲಿ ಒಯ್ಯುವಲ್ಲಿ ವಹಿಸಿರುವ ರಾಷ್ಟ್ರ-ವಿರೋಧಿ, ಜನ-ವಿರೋಧಿ ಪಾತ್ರವನ್ನು ಜನರಿಗೆ ವಿವರಿಸಬೇಕು, ಈ ಮೂಲಕ ಮುಂಬರುವ ಚುನಾವಣೆಗಳಲ್ಲಿ ಅವರು ಪರಾಭವ ಹೊಂದುವಂತೆ ಮಾಡಬೇಕು ಎಂದು ಸಿಐಟಿಯು ಮನವಿ ಮಾಡಿಕೊಳ್ಳುತ್ತದೆ.

- ಚುನಾವಣಾ ಸಮರದಲ್ಲಿ ಬಿಜೆಪಿಯನ್ನು ಸೋಲಿಸಿ, ಭಾರತದ ಜಾತ್ಯಾತೀತತೆ ಮತ್ತು ಅಮೂಲ್ಯ ಪ್ರಜಾಪ್ರಭುತ್ವ ಪರಂಪರೆಗಳನ್ನು ಉಳಿಸಿ!
- ಎಡ, ಪ್ರಜಾಪ್ರಭುತ್ವವಾದಿ, ಜಾತ್ಯಾತೀತ ಶಕ್ತಿಗಳಿಗೆ ಮತ ನೀಡಿ! ಜಾತ್ಯಾತೀತ ಮತಗಳ ವಿಭಜನೆ ಹೊಂದದಂತಾಗಲಿ!
- ಬಿಜೆಪಿ ವಂಚಕ ಹಾಗೂ ಮೂಲಭೂ ವಾದಿ ಘೋಷಣೆಗಳಿಂದ ಜನಗಳನ ಮೋಸಗೊಳಿಸುವ ಪ್ರಯತ್ನಗಳನ್ನು ಬುಡದಲ್ಲ ಚಿವುಟಿ ಹಾಕಿ, ಭಾರತವನ್ನು ಬಹುರಾಷ್ಟ್ರೀಯ ಕಂಪನಿಗಳಿಂದ, ಸಾಮ್ರಾಜ್ಯಶಾಹಿಯಿಂದ ರಕ್ಷಿಸಿ
- ಭಾರತದ ಸ್ವಾವಲಂಬೀ ಆರ್ಥಿ ಪ್ರಕಾಶಿಸಬೇಕಾದರೆ ಬಿಜೆಪಿ ಮತ್ತವರ ಮಿತ್ರರ ಮುಂಬರುವ ಚುನಾವಣೆಗಳಲ್ಲಿ ಪರಾಭ ಹೊಂದಲೇಬೇಕು.


ಉಳ್ಳಾಲ ಕ್ಷೇತ್ರ

ಕರ್ನಾಟಕ ವಿಧಾನಸಭಾ ಚುನಾವಣೆ - 2004

ಸಿಪಿಐ(ಎಂ) ಅಭ್ಯರ್ಥಿ ರಾಮಚಂದ್ರ ಉಚ್ಚಿಲ್

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಮುಖಂಡರು, ಹಿರಿಯ ಕಾರ್ಮಿಕ ಮುಂದಾಳು ಕಾಮ್ರೇಡ್ ರಾಮಚಂದ್ರ ಉಚ್ಚಿಲ್ ಮಂಗಳೂರಿನ ಉಳ್ಳಾಲ ವಿಧಾನಸಭಾ ಕ್ಷೇತ್ರಕ್ಕೆ ಏಪ್ರಿಲ್ 2 ರಂದು ಪಕ್ಷದ ಅಸಂಖ್ಯಾತ ಬೆಂಬಲಿಗರೊಂದಿಗೆ ನಾಮಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್ ಸಿಐಟಿಯು ರಾಜ್ಯ ಅಧ್ಯಕ್ಷರಾದ ಬಿ.ಮಾಧವ, ಕಾರ್ಮಿಕ ಮುಂದಾಳುಗಳಾದ ಕೆ.ಯಾದವ ಶೆಟ್ಟಿ, ವಸಂತ ಆಚಾರಿ, ಮಹಿಳಾ ಸಂಘಟನೆಯ ಜಿಲ್ಲಾ ನಾಯಕಿಯಾದ ಪದ್ಮಾವತಿ ಎಸ್.ಶೆಟ್ಟಿ, ಡಿವೈಎಫ್ಐ ಜಿಲ್ಲಾ ಸಮಿತಿ ಅಧ್ಯಕ್ಷರಾದ ಸುನೀಲ್ ಕುಮಾರ್ ಬಜಾಲ್, ಸಿಪಿಐ(ಎಂ) ನಗರ ಸಮಿತಿ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ ಉಳ್ಳಾಲ ವಲಯದ ಚುನಾವಣಾ ಸಮಿತಿ ಸಂಚಾಲಕರಾದ ಕೆ.ಮಂಜಪ್ಪ, ಪಾವೂರು ಮಂಡಲದ ಮಾಜಿ ಪ್ರಧಾನರಾದ ಬಿ.ಬಾಬು ಪೂಜಾರಿ ಸೋಮೇಶ್ವರ ಮಂಡಲದ ಮಾಜಿ ಪ್ರಧಾನರಾದ ಪಿ.ಪರಮೇಶ್ವರ ಶೆಟ್ಟಿ, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯೆ ಪದ್ಮಾವತಿ ಶೆಟ್ಟಿ, ಕೋಟೆಕಾರು ಮತ್ತು ಮುತ್ತಣ್ಣ ಶೆಟ್ಟಿ, ಶ್ರೀ ಯಾಸುಬು ಉಚ್ಚಿಲ್, ಬಶೀರ್, ಬಿ.ಎಸ್.ಅಬ್ದುಲ್ ಸಲಾಂ, ಶ್ರೀಧರ ನಾಗಾತೋಟ, ಗಣೇಶ್ ಟೈಲರ್, ಜಯಂತ್ ನಾಯಕ್, ಬಾಬು ಪಿಲಾರ್ ಸಂಚಾಲಕರಾದ ಕೆ. ಕೃಷ್ಣಪ್ಪ ಮುಂತಾದವರಿದ್ದರು.



ಭೂಮಾಲೀಕರ ದಬ್ಬಾಳಿಕೆಗೆದುರಾಗಿ ಬಡ ರೈತ ಗೇಣಿದಾರರ ಪರವಾದ ಹೋರಾಟಗಳಿಗೆ ಧುಮುಕುವ ಮೂಲಕ ಭೂಸುಧಾರಣೆ ಕಾನೂನು ಜ್ಯಾರಿಗಾಗಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನಿರಂತರ ಹೋರಾಟದಲ್ಲಿ ಮುಂಚೂಣಿಯಾಗಿ ನಿಂತು ರೈತ ಪರ ನಾಯಕನೆಂದು ಗುರುತಿಸಿ ಕೊಂಡಿದ್ದ ರಾಮಚಂದ್ರ ಉಚ್ಚಿಲ್‌ರವರು ಈ ಬಾರಿ ಉಳ್ಳಾಲ ಕ್ಷೇತ್ರದಿಂದ ಸಿಪಿಐ(ಎಂ) ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕಿಳಿದಿದ್ದಾರೆ.

ಶೋಷಿತ ಜನರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸುತ್ತಾ ತನ್ನ ರಾಜಕೀಯ ಜೀವನದ 4 ದಶಕಗಳನ್ನು ಕಳೆದ ರಾಮಚಂದ್ರ ಉಚ್ಚಿಲ್‌ರವರು 59 ರ ಹೊಸ್ತಿಲಲ್ಲಿ ಇದ್ದರೂ ಪಕ್ಷದ ಕಾರ್ಯಕರ್ತರ ನಡುವೆ ಹಾಗೂ ಜನಸಾಮಾನ್ಯರ ನಡುವೆ ಉತ್ಸಾಹಿ ಯುವಕನಂತೆ ಬೆರೆಯುತ್ತಿದ್ದಾರೆ.

ಉಳುವವನೇ ಹೊಲದೊಡೆಯನಾಗಬೇಕೆಂಬ ಬೇಡಿಕೆಯನ್ನು ಮುಂದಿಟ್ಟು ನಡೆಸಿದ ಹೋರಾಟಗಳ ಸಂದರ್ಭದಲ್ಲಿ ಹಲವಾರು ಬಾರಿ ಭೂಮಾಲೀಕರ ಮತ್ತು ಪೋಲೀಸರ ಮರ್ದನಕ್ಕೆ ಒಳಗಾಗಿ ಕಷ್ಟಕರ ಜೀವನವನ್ನು ನಡೆಸಿರುವಂತಹ ಧೀಮಂತ ಹೋರಾಟಗಾರರಾಗಿರುವರು.

ಎಲ್ಲಾ ಜನವರ್ಗದ ನಡುವೆ ಪರಿಚಿತರಾಗಿರುವ ಇವರು ದಕ್ಷಿಣ ಕನ್ನಡ ಜಿಲ್ಲಾ ರೈತ ಸಂಘದ ಕಾರ್ಯದರ್ಶಿಯಾಗಿ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ಸದಸ್ಯರಾಗಿ, ವಿದ್ಯುತ್ ಬಳಕೆದಾರರ ಹೋರಾಟ ಸಮಿತಿಯ ಕಾರ್ಯದರ್ಶಿಯಾಗಿ ಹಾಗೂ ಕೋಟೆಕಾರ್ ವ್ಯವಸಾಯ ಸೇವಾ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ. ಸಣ್ಣ ರೀತಿಯಲ್ಲಿ ವ್ಯವಹಾರ ನಡೆಸುತ್ತಿದ್ದ ಈ ಸಹಕಾರಿ ಸೊಸೈಟಿಯನ್ನು 10 ಗ್ರಾಮಗಳಿಗೆ ವಿಸ್ತರಿಸಿ, 3 ಹೆಚ್ಚುವರಿ ಶಾಖೆಗಳನ್ನು ತೆರೆದು ಬ್ಯಾಂಕ್ ಆಗಿ ಪರಿವರ್ತಿಸಿ ವ್ಯವಹಾರವನ್ನು ಬೆಳೆಸುವ ಮೂಲಕ ಬಡವರ್ಗದ ಜನರಿಗೂ, ರೈತರಿಗೂ ಸಾಲ ವಿತರಣೆಯಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ ಸಹಾಯ ಹಸ್ತ ನೀಡಿದ್ದಾರೆ. ಅಲ್ಲದೆ ರೈತ ಸದನ ಹೆಸರಿನಲ್ಲಿ ಬ್ಯಾಂಕಿಗೆ ಸ್ವಂತ ಕಟ್ಟಡವನ್ನು ನಿರ್ಮಿಸುವಲ್ಲಿ ಪ್ರಧಾನ ಪಾತ್ರ ವಹಿಸಿರುತ್ತಾರೆ. ಉಳ್ಳಾಲ ಕ್ಷೇತ್ರ ವ್ಯಾಪ್ತಿಯ ಉಚ್ಚಿಲ ನಿವಾಸಿ ಯಾಗಿರುವ ಇವರು ಕಾರ್ಮಿಕ ಕುಟುಂಬ ದಲ್ಲಿ ಜನಿಸಿ, ಸರಳ ಜೀವನ ನಡೆಸುತ್ತಿದ್ದು ಕಾರ್ಮಿಕ ವರ್ಗದ ಹಿತಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿರಿಸಿದ್ದಾರೆ.

ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆ ವಿರುದ್ಧ ಮತ್ತು ವಿದ್ಯುತ್ ದರ ಏರಿಕೆ ವಿರುದ್ಧದ ಹೋರಾಟ, ಭ್ರಷ್ಟಾಚಾರದ ವಿರುದ್ಧದ ಹೋರಾಟ, ಅಡಿಕೆ ಬೆಳೆಗಾರರ ಹೋರಾಟ, ರೈತರ ಸಬ್ಸಿಡಿ ಕಡಿತದ ವಿರುದ್ಧದ ಹೋರಾಟ, ಹಳದಿ ಪಡಿತರ ಚೀಟಿಗಾಗಿ ಹೋರಾಟ, ಕೋಮು ಸೌಹಾರ್ದತೆಗಾಗಿ ಸತತ ಯತ್ನ ಹಾಗೂ ಬೀಡಿ ಕಾರ್ಮಿಕರಿಗೆ ಕಾನೂನು ಸವಲತ್ತು ಜ್ಯಾರಿ ಗೊಳಿಸಲು ಒತ್ತಾಯಿಸಿ 1973 ಮೇ ತಿಂಗಳಲ್ಲಿ ರಾಜ್ಯಾದ್ಯಂತ ನಡೆದ ಹೋರಾಟದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಬೀಡಿ ಮಾಲಕರಿಂದ ಜನಸಂಘ ದವರಿಂದ ದಬ್ಬಾಳಿಕೆ ಕ್ಕೊಳಗಾಗಿದ್ದರು.


ಕಾರ್ಮಿಕರೇ ಹೆಚ್ಚಾಗಿರುವ ಉಳ್ಳಾಲ ಕ್ಷೇತ್ರದಲ್ಲಿ ಪ್ರಮುಖ ಕೈಗಾರಿಕೆಗಳಾದ ಬೀಡಿ ಮತ್ತು ಹೆಂಚು ಉದ್ದಿಮೆ ನಶಿಸುವುದಕ್ಕೆ ರಾಜ್ಯದ ಕಾಂಗ್ರೆಸ್ ಸರಕಾರ ಹಾಗೂ ಕೇಂದ್ರದ ಬಿಜೆಪಿ ನೇತೃತ್ವದ ಸರಕಾರಗಳು ತಳೆದಿರುವ ಆರ್ಥಿಕ ಧೋರಣೆಯೇ ಕಾರಣವೆನ್ನುವುದನ್ನು ಜನರಿಗೆ ಮನವರಿಕೆ ಮಾಡಿ ಈ ಎರಡು ಪಕ್ಷಗಳ ವಿರೋಧ ಮತ ಪಡೆದು ಗೆಲ್ಲುವ ಭರವಸೆಯಲ್ಲಿದ್ದಾರೆ. ಬೀಡಿ ಕೈಗಾರಿಕೆಯನ್ನು ಉಳಿಸುವ ಹೊಣೆಗಾರಿಕೆ ಕೇಂದ್ರ ಮತ್ತು ರಾಜ್ಯ ಸರಕಾರಗಳಿಗಿದ್ದರೂ ಇದುವರೆಗೆ ಈ ನಿಟ್ಟಿನಲ್ಲಿ ಯಾವುದೇ ಪ್ರಯತ್ನವನ್ನು ಮಾಡಲಿಲ್ಲ. ಮಾತ್ರವಲ್ಲದೆ ಈ ಕೈಗಾರಿಕೆಯನ್ನೇ ಅವಲಂಬಿಸಿರುವ ಸಾವಿರಾರು ಬಡ ಕುಟುಂಬಗಳ ಮೇಲೆ ಮಾರಕ ಹೊಡೆತ ನೀಡಿರುವ ಧೂಮಪಾನ ನಿಷೇಧ ಮಸೂದೆಯನ್ನು ಕೇಂದ್ರ, ರಾಜ್ಯ ಸರಕಾರಗಳೆರಡು ಜ್ಯಾರಿಗೊಳಿಸಲು ಯತ್ನಿಸಿದಾಗ ಇದರ ವಿರುದ್ಧ ಚರಿತ್ರಾರ್ಹವಾದ ಹೋರಾಟ ನಡೆಸಿದ ಇವರು ಚುನಾಯಿತರಾದರೆ ಬೀಡಿ ಕಾರ್ಮಿಕರಿಗೆ ಉದ್ಯೋಗದ ಸ್ಥಿರತೆ ಮತ್ತು 6 ದಿವಸಗಳ ಕೆಲಸ ಒದಗಿಸಲು ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದ್ದಾರೆ. ಉಳ್ಳಾಲ ಕ್ಷೇತ್ರ ವ್ಯಾಪ್ತಿಯಲ್ಲಿ ಸರಕಾರದ ಭೂಮಿಯನ್ನು ಅತಿಕ್ರಮಣ ಮಾಡಿ ಹತ್ತಾರು ವರ್ಷಗಳಿಂದ ವಾಸ ಮಾಡುತ್ತಿರುವ ಬಡವರಿಗೆ ಅದನ್ನು ಸಕ್ರಮಗೊಳಿಸಬೇಕು. ಬಡವರಿಗೂ ಬೀಡಿ ಕಾರ್ಮಿಕರಿಗೂ ಅಂತ್ಯೋದಯ ಪಡಿತರ ಚೀಟಿಯನ್ನು ನ್ಯಾಯಯುತವಾಗಿ ವಿತರಿಸುವುದು. ಪಡಿತರ ಚೀಟಿ ವಿತರಣೆಯಲ್ಲಿನ ತಾರತಮ್ಯ ನಿವಾರಣೆ, ಸಮಗ್ರವಾದ ಕುಡಿಯುವ ನೀರಿನ ಯೋಜನೆ ಜ್ಯಾರಿಗೊಳಿಸುವುದು, ಕ್ಷೇತ್ರದ ವ್ಯಾಪ್ತಿಯಲ್ಲಿರುವ ಕಚ್ಚಾ ರಸ್ತೆಗಳಿಗೆ ಡಾಮರೀಕರಣ, ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕ್ಷೇತ್ರ ವ್ಯಾಪ್ತಿಯಲ್ಲಿ ಸರಕಾರಿ ಕಾಲೇಜು ಸ್ಥಾಪನೆಗೆ ಪ್ರಯತ್ನ, ಮಹಿಳಾ ಮೀಸಲಾತಿ ಜ್ಯಾರಿಗೆ ಯತ್ನ, ಸ್ವಂ ಘೋಷಿತ ಆಸ್ತಿ ತೆರಿಗೆ ಶಾಸನ ಜ್ಯಾರಿಗೆ ತಡೆ, ಕಟ್ಟಡ ಮತ್ತು ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಗಾಗಿ ಯತ್ನ, ಕೋಮು ಸಾಮರಸ್ಯವನ್ನು ಕಾಪಾಡುವ ಮೂಲಕ ಕ್ಷೇತ್ರವನ್ನು ಭೀತಿಮುಕ್ತಗೊಳಿಸುವುದು, ಅಂಗವಿಕಲ, ವೃದ್ಧಾಪ್ಯ, ವಿಧವಾ ಮಾಶಾಸನವನ್ನು ದೊರಕಿಸುವಂತೆ ಪ್ರಯತ್ನ ಹಾಗೂ ಅರ್ಹರಿಗೆ ನ್ಯಾಯ ಒದಗಿಸುವುದು, ಕ್ಷೇತ್ರದ ಸಮಗ್ರ ಅಭಿವೃದ್ಧಿಯ ಗುರಿಯನ್ನು ಇಟ್ಟು ಚುನಾವಣೆಯ ಕಣಕ್ಕಿಳಿದಿರುವ ಇವರು ಜನತೆಯ ವಿಶ್ವಾಸ ಗಳಿಸಿ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ.

ಕುಂದಾಪುರ ಕ್ಷೇತ್ರ

ಕೆ.ಶಂಕರ್ ಸ್ಪರ್ಧೆ

ವಿಧಾನಸಭಾ ಚುನಾವಣೆಯಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ಕ್ಷೇತ್ರದಲ್ಲಿ ಕಾಂ.ಕೆ.ಶಂಕರ್ ಸಿಪಿಐ(ಎಂ) ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ಕರ್ನಾಟಕದ ಜನವಿರೋಧಿ ಮತ್ತು ಭ್ರಷ್ಟ ಕಾಂಗ್ರೆಸ್ ಆಡಳಿತವು ಮರಳಿ ಅಧಿಕಾರಕ್ಕೆ ಬರುವುದನ್ನು ತಡೆಯುವುದರಲ್ಲಿ ಮತ್ತು ರಾಜ್ಯದಲ್ಲಿ ಅಧಿಕಾರದ ಕನಸು ಕಾಣುತ್ತಿರುವ ಸಂಘ ಪರಿವಾರ ನಿಯಂತ್ರಿತ ಬಿಜೆಪಿಯ ಹತಾಶ ಪ್ರಯತ್ನಗಳನ್ನು ವಿಫಲಗೊಳಿಸುವುದರಲ್ಲಿ ಸಿಪಿಐ(ಎಂ) ಸ್ಪರ್ಧೆಗೆ ವಿಶೇಷ ಮಹತ್ವವಿದೆ.

ಸಿಪಿಐ(ಎಂ) ಅಭ್ಯರ್ಥಿಯಾದ ಕೆ.ಶಂಕರ್ ಅವರು ಕಳೆದ 35 ವರ್ಷಗಳಿಂದ ಈ ಪ್ರದೇಶದ ಕಾರ್ಮಿಕರ ಮತ್ತು ಜನಸಾಮಾನ್ಯರ ಪ್ರಜಾಸತ್ತಾತ್ಮಕ ಚಳುವಳಿಯ ಪ್ರಮುಖ ನಾಯಕರಾಗಿ ದುಡಿಯುತ್ತಾ ಬಂದ ಅನುಭವಿ ನಾಯಕರು. ಅವರು ಸಿಪಿಐ(ಎಂ) ಪಕ್ಷದ ಉಡುಪಿ ಜಿಲ್ಲಾ ಕಾರ್ಯದರ್ಶಿಯೂ, ರಾಜ್ಯ ಸಮಿತಿಯ ಸದಸ್ಯರೂ ಆಗಿ ದುಡಿಯುತ್ತಿದ್ದಾರೆ. ಕಾರ್ಮಿಕ ವರ್ಗದ ಕೇಂದ್ರ ಸಂಘಟನೆಯಾದ ಸಿಐಟಿಯುವಿನ ಅಖಿಲ ಭಾರತ ಜನರಲ್ ಕೌನ್ಸಿಲ್ ಸದಸ್ಯರು, ಕರ್ನಾಟಕ ರಾಜ್ಯಸಮಿತಿಯ ಉಪಾಧ್ಯಕ್ಷರು, ಉಡುಪಿ ಜಿಲ್ಲಾ ಅಧ್ಯಕ್ಷರೂ ಆಗಿದ್ದು ದುಡಿಯುವ ಜನತೆಯ ಹಿತರಕ್ಷಣೆಗಾಗಿ ತಮ್ಮನ್ನು ಸಮರ್ಪಣಾ ಭಾವದಿಂದ ತೊಡಗಿಸಿಕೊಂಡಿದ್ದಾರೆ.



1949 ಜೂನ್ 23 ರಂದು ಕುಂದಾಪುರದಲ್ಲಿ ಜನಿಸಿದ ಇವರು ಕಾಲೇಜು ವಿದ್ಯಾಭ್ಯಾಸ ಮಾಡುತ್ತಿರುವಾಗಲೇ ವಿದ್ಯಾರ್ಥಿ ಸಂಘಟನೆಯನ್ನು ಕಟ್ಟಲು ಪ್ರಯತ್ನಿಸಿದರು. ಆರ್ಥಿಕ ಸಂಕಷ್ಟದಿಂದಾಗಿ ಶಿಕ್ಷಣ ಮುಂದುವರಿಸಲು ಸಾಧ್ಯವಾಗದೇ ಮಧ್ಯದಲ್ಲಿಯೇ ಬಿಡಬೇಕಾಗಿ ಬಂತು. ವಿದ್ಯಾರ್ಥಿ ಸಂಘಟನೆಯ ಮೂಲಕ, ದುಡಿಯುವ ಜನರ ಬೇರೆ ಬೇರೆ ವಿಭಾಗದವರನ್ನು ಸಂಘಟಿಸಿ ತಾಲ್ಲೂಕು ಮತ್ತು ಜಿಲ್ಲೆಯ ಇತರ ಭಾಗಗಳಲ್ಲಿ ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳನ್ನು ವಿಸ್ತರಿಸಿ, ಬೆಳೆಸಲು ಶ್ರಮಿಸಿದರು.

1970-1985 ರ ತನಕ ರೈತ-ಕೃಷಿ ಕೂಲಿಗಾರರ ಸಂಘಟನೆ ಕಟ್ಟಿ ಹಲವು ಹೋರಾಟಗಳಲ್ಲಿ ಪಾಲ್ಗೊಂಡರು. ಕಾಂ.ಅಬ್ರಹಾಂ ಕರ್ಕಡ ಹಾಗೂ ಕಾ.ಯು.ದಾಸ ಭಂಡಾರಿಯವರಂತಹ ರೈತ ಮುಖಂಡರಿಗೆ ಸಂಘಟನಾ ಕೆಲಸದಲ್ಲಿ ನೆರವಾದರು. ವಿದ್ಯಾರ್ಥಿ ಯುವಜನರ ಮಧ್ಯೆ ಕೂಡಾ ಸಂಘಟನಾ ಕೆಲಸ ಮಾಡಿ ಸಂಘಟನಾ ಪ್ರಜ್ಞೆ ಮತ್ತು ರಾಜಕೀಯ ಪ್ರಜ್ಞೆ ಬೆಳೆಸಿಕೊಂಡು, ಹಂಚು ಕಾರ್ಮಿಕರ ನಡುವೆ ಮತ್ತು ಬೀಡಿ ಕಾರ್ಮಿಕರ ನಡುವೆ ಕೆಲಸ ಮಾಡುತ್ತಾ ಜಿಲ್ಲಾ ಹಾಗೂ ರಾಜ್ಯಮಟ್ಟದ ಕಾರ್ಮಿಕ ಮುಖಂಡರಾಗಿ ಬೆಳೆದುಬಂದರು.

ಕುಂದಾಪುರ ವಿಧಾನಸಭಾ ಕ್ಷೇತ್ರದಿಂದ ಸಿಪಿಐ(ಎಂ) ಅಭ್ಯರ್ಥಿ ಆರಿಸಿ ಬಂದಲ್ಲಿ, ಪ್ರಸ್ತುತ ಜಲಕ್ಷಾಮದಿಂದ ತತ್ತರಿಸುತ್ತಿರುವ ಕುಂದಾಪುರ ಪಟ್ಟಣದ ಜನರಿಗೂ, ಕುಂದಾಪುರ ಮತ್ತು ಉಡುಪಿ ತಾಲೂಕಿನ ರೈತರಿಗೂ ವರದಾನವಾಗಬಲ್ಲ, ಸದ್ಯಕ್ಕೆ ಸರಕಾರದ ಅಸಡ್ಡೆಗೆ ಒಳಗಾಗಿರುವ ವಾರಾಹಿ ನೀರಾವರಿ ಯೋಜನೆಯನ್ನು ತ್ವರಿತವಾಗಿ ಕೈಗೆತ್ತಿಕೊಂಡು ಕಾರ್ಯಗತಗೊಳಿಸಲು ಒತ್ತಾಯಿಸುವ ಹೋರಾಟಕ್ಕೆ ಹೊಸ ಚಾಲನೆ ದೊರೆಯುವುದು, ಸರಕಾರದ ನೀತಿಗಳಿಂದಾಗಿ ಸಂಕಷ್ಟವನ್ನು ಎದುರಿಸುತ್ತಿರುವ ಹಂಚು, ಬೀಡಿ, ಇತ್ಯಾದಿ ಕೈಗಾರಿಕೆಗಳ ಉಳುವಿಗಾಗಿ ಮತ್ತು ಅವುಗಳಲ್ಲಿ ದುಡಿಯುತ್ತಿರುವ ಸಹಸ್ರಗಟ್ಟಲೆ ಕಾರ್ಮಿಕರ ಹಿತರಕ್ಷಣೆಗಾಗಿ ನಡೆಯಬೇಕಾದ ಚಳುವಳಿಯನ್ನು ರಾಜ್ಯ ವಿಧಾನಸಭೆಯೊಳಗೂ ಕೊಂಡೊಯ್ಯುವರು.

ಕಳೆದ ಐದು ವರ್ಷಗಳಿಂದ ಕೇಂದ್ರದ ಬಿಜೆಪಿ ನೇತೃತ್ವದ ಸರಕಾರವು ಅನುಸರಿಸುತ್ತಾ ಬಂದ ನೀತಿಗಳು ದೇಶದ ದೊಡ್ಡ ಬಂಡವಾಳಶಾಹಿಗಳ ಹಿತರಕ್ಷಣೆ ಮಾಡುವುದರ ಜತೆಗೆ ವಿದೇಶಿ ಬಂಡವಾಳಕ್ಕೆ ಮುಕ್ತ ಅವಕಾಶ ನೀಡಿದ ಪರಿಣಾಮವಾಗಿ ದೇಶದ ಆರ್ಥಿಕ ಸಾರ್ವಭೌಮತೆಗೆ ಅಪಾಯ ಒದಗಿ ಬಂದಿದೆ. ದೇಶದ ಸಂಪತ್ತೆಲ್ಲಾ ಶ್ರೀಮಂತರಿಗೆ ವರ್ಗಾವಣೆಗೊಳ್ಳುತ್ತಿದ್ದು ಕೋಟಿಗಟ್ಟಲೆ ಜನಸಾಮಾನ್ಯರ ಬದುಕು ದುಸ್ತರವಾಗಿದೆ. ರಾಜ್ಯದ ಕಾಂಗ್ರೆಸ್ ಸರ್ಕಾರದ ನೀತಿಗಳು ಕೇಂದ್ರದ ಬಿಜೆಪಿ ಸರ್ಕಾರದ ನೀತಿಗಳಿಂದ ಭಿನ್ನವಾಗಿಲ್ಲ. ಆದ್ದರಿಂದಲೇ ಕರ್ನಾಟಕದಲ್ಲಿ ಅತಿ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡರು. ಸಹಸ್ರಾರು ಕಾರ್ಖಾನೆಗಳು ಮುಚ್ಚಿ ರಾಜ್ಯದಲ್ಲಿ ಸಾವಿರಗಟ್ಟಲೆ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಕೇಂದ್ರದಲ್ಲಿ ಇದೇ ಬಿಜೆಪಿ ನೇತೃತ್ವದ ಸರ್ಕಾರ ಮತ್ತು ರಾಜ್ಯದಲ್ಲಿ ಇದೇ ಕಾಂಗ್ರೆಸ್ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದರೆ ದುಡಿಯುವ ವರ್ಗದ ಅಂದರೆ ರೈತ, ಕಾರ್ಮಿಕ, ಕೂಲಿಕಾರರ ಪರಿಸ್ಥಿತಿ ಇನ್ನಷ್ಟು ಗಂಭೀರವಾಗದೆ ಇರಲಾರದು. ಇದನ್ನು ತಪ್ಪಿಸಲು ಸಾಧ್ಯವಾಗಬೇಕಾದರೆ ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಪ್ರಗತಿಪರ, ಜಾತ್ಯತೀತ ಸರ್ಕಾರಗಳು ಅಧಿಕಾರಕ್ಕೆ ಬರುವಂತಾಗಬೇಕು. ದುಡಿಯುವ ವರ್ಗದ ಧ್ವನಿ ಪಾರ್ಲಿಮೆಂಟಿನಲ್ಲಿ ಮತ್ತು ರಾಜ್ಯ ವಿಧಾನಸಭೆಯಲ್ಲಿ ಮೊಳಗುವಂತಾಗಲು ಸಿಪಿಐ(ಎಂ) ಅಭ್ಯರ್ಥಿಗಳು ಮತ್ತು ಎಡಪಕ್ಷಗಳ ಅಭ್ಯರ್ಥಿಗಳು ಗಣನೀಯ ಸಂಖ್ಯೆಯಲ್ಲಿ ಆಯ್ಕೆಯಾಗುವುದು ಅಗತ್ಯವಾಗಿದೆ.

ಕುಂದಾಪುರ ಕ್ಷೇತ್ರದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಸಿಪಿಐ(ಎಂ) ಅಭ್ಯರ್ಥಿಯ ಗೆಲುವಿನ ಮೇಲೆ ಜನತೆ ತುಂಬಾ ನಿರೀಕ್ಷೆ ಇಟ್ಟುಕೊಂಡಿದೆ.

ಕೆ.ಶಂಕರ್ ನಾಮಪತ್ರ

ಏಪ್ರಿಲ್ 5 ರಂದು ಕೆ.ಶಂಕರ್ ಸಿಪಿಐ(ಎಂ) ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ.

ನಾಮಪತ್ರ ಸಲ್ಲಿಸಿದ ಬಳಿಕ ಸಿಪಿಐ(ಎಂ) ಕಛೇರಿಯಲ್ಲಿ ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ, ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಬಿ.ಮಾಧವರವರು ಮಾತನಾಡಿ ಕರ್ನಾಟಕದಲ್ಲಿ ಜನವಿರೋಧಿ ಮತ್ತು ಭ್ರಷ್ಟ ಕಾಂಗ್ರೆಸ್ ಆಡಳಿತವು ಮರಳಿ ಅಧಿಕಾರಕ್ಕೆ ಬರುವುದನ್ನು ತಡೆಯುವುದರಲ್ಲಿ ಮತ್ತು ರಾಜ್ಯದಲ್ಲಿ ಅಧಿಕಾರದ ಕನಸು ಕಾಣುತ್ತಿರುವ ಸಂಘ ಪರಿವಾರ ನಿಯಂತ್ರಿತ ಬಿಜೆಪಿಯ ಹತಾಶ ಪ್ರಯತ್ನಗಳನ್ನು ವಿಫಲಗೊಳಿಸುವುದರಲ್ಲಿ ಜೆಡಿ(ಎಸ್) - ಸಿಪಿಐ(ಎಂ) ಮೈತ್ರಿಕೂಟವು ಯಶಸ್ವಿಯಾಗುವುದೆಂಬ ಭರವಸೆಯೊಂದಿಗೆ ಎರಡೂ ಪಕ್ಷಗಳು ರಾಜ್ಯಾದ್ಯಂತ ದುಡಿಯುತ್ತಿವೆ ಎಂದರು. ತಾಲೂಕಿನ ಜಾತ್ಯತೀತ ಜನತಾದಳದ ಮುಖಂಡರೂ ಉಪಸ್ಥಿತರಿದ್ದರು. ಕುಂದಾಪುರದ ವಿಧಾನಸಭಾ ಕ್ಷೇತ್ರದಲ್ಲಿ ಸಿಪಿಐ(ಎಂ) ಅಭ್ಯರ್ಥಿಯನ್ನು ಬಹುಮತದಿಂದ ಗೆಲ್ಲಿಸಲು ಸರ್ವಪ್ರಯತ್ನ ಮಾಡಬೇಕೆಂದು ಅವರು ಕರೆ ನೀಡಿದರು. ಜನತಾದಳ (ಎಸ್) ಮುಖಂಡರಾದ ಶ್ರೀ ಸುರೇಂದ್ರ ಶೆಟ್ಟಿ ಮತ್ತು ತಂಗಪ್ಪನ್ ಸಿಪಿಐ(ಎಂ) ಅಭ್ಯರ್ಥಿಯನ್ನು ಗೆಲ್ಲಿಸಲು ಸರ್ವಪ್ರಯತ್ನ ನಡೆಸುತ್ತೇವೆಂದು ಘೋಷಿಸಿದರು.

ಪಕ್ಷದ ರಾಜ್ಯ ಸಮಿತಿ ಸದಸ್ಯರಾದ ಬಾಲಕೃಷ್ಣ ಶೆಟ್ಟಿ ಮತ್ತು ಹಿ.ವಿಶ್ವನಾಥ ರೈ, ಜಿಲ್ಲಾ ಸಮಿತಿ ಸದಸ್ಯರಾದ ನಾರಾಯಣ, ದೇವಿದಾಸ್ ಕರ್ಕಡ, ಎಚ್.ನರಸಿಂಹ, ಚಂದ್ರಶೇಖರ ವಿ., ಮಾಜಿ ಪುರಸಭಾ ಅಧ್ಯಕ್ಷೆ ಶ್ರೀಮತಿ ಗುಣರತ್ನ ಹಾಗೂ ಪುರಸಭಾ ಸದಸ್ಯರು ಉಪಸ್ಥಿತರಿದ್ದರು.

ಪ್ರಜಾಸತ್ತೆಗೆ ತ್ರಿಶೂಲ

- ಅಧಿಕಾರಶಾಹಿ, ಪೋಲೀಸು, ನ್ಯಾಯಾಂಗ, ಶಿಕ್ಷಣ ಎಲ್ಲೆಡೆ ಸಂಘ ಪರಿವಾರದ ನಿಯಂತ್ರಣ
- ಎಲ್ಲಾ ಸಂವಿಧಾನಾತ್ಮಕ ಸಂಸ್ಥೆಗಳನ್ನು ಬುಡಮೇಲು ಮಾಡುವ ಯತ್ನ
- ಸಂವಿಧಾನದ ಮೂಲಭೂತ ಸ್ವರೂಪ ಬದಲಿಸುವ ಪ್ರಯತ್ನ

ಪೋಟಾ

- ಭಯೋತ್ಪಾದನೆ ವಿರುದ್ಧದ ಹೋರಾಟದ ಹೆಸರಲ್ಲಿ ರಾಜಕೀಯ ವಿರೋಧಿಗಳ ದಮನದ ಆಯುಧ
- ಮೀಸಾ-ಟಾಡಾ ವಿರೋಧಿಸಿದವರು ತಂದ ಕರಾಳ ಕಾನೂನು
- ಗುಜರಾತಿನಲ್ಲಿ ಎಲ್ಲಾ ಪೋಟಾ ಬಂಧಿತರು ಮುಸ್ಲಿಮರೇ





ಕಾರ್ಮಿಕರ ಹಕ್ಕಿನ ಮೇಲೆ ಧಾಳಿ

- ಸರ್ಕಾರಿ ನೌಕರರ ಮುಷ್ಕರದ ಹಕ್ಕು ವಿರುದ್ಧ ಸುಪ್ರೀಂಕೋರ್ಟ್ ತೀರ್ಪಿನ ವಿರುದ್ಧ ಕಿರು ಬೆರಳೆತ್ತದವರು
- ಕಾರ್ಮಿಕರ ಕಾನೂನುಗಳನ್ನು ಮಾಲಕರ ಪರವಾಗಿ ತಿದ್ದುವ ಯತ್ನ
- ಕಾರ್ಮಿಕರ ಪಿ.ಎಫ್., ಪೆನ್ಶನ್ ದೋಚುವ ಯತ್ನ
- ಕೆಲಸದಿನಗಳ ನಷ್ಟದಲ್ಲಿ ಮುಷ್ಕರದ ಎಂಟು ಪಟ್ಟು ಲಾಕೌಟ್‌ಗಳು



ಬಿಜೆಪಿ ದುಷ್ಟಕೂಟ ಸೋಲಿಸಿ – ಜಾತ್ಯತೀತ ಸರ್ಕಾರ ಆರಿಸಿ
ಎಡಪಕ್ಷಗಳನ್ನು ಬಲಪಡಿಸಿ


ಅಭಿವೃದ್ಧಿಯ ಹೊರೆ ಬಡವರಿಗೆ – ಐಷಾರಾಮ ಶ್ರೀಮಂತರಿಗೆ

ಐಎಂಎಫ್‌ನ ಅಭಿವೃದ್ಧಿ ಪಥವನ್ನು ಅಕ್ಷರಶಃ ಪಾಲಿಸಿ ಸಾಲ ಪಡೆದು ಆ ಮಾದರಿಯನ್ನು ಜಾರಿಗೆ ತಂದ ರಾಜ್ಯ ಆಂಧ್ರ ಪ್ರದೇಶ. ಅದರ ರಾಜಧಾನಿ ಹೈದರಾಬಾದೂ ಸಹ ಈ ಮಾದರಿಯ ಫಲಾನುಭವಿ.

ಕಳೆದ ಆರೇಳು ವರ್ಷಗಳಲ್ಲಿ ಹೈದರಾಬಾದು ಕಂಡ ಬದಲಾವಣೆಯನ್ನು ಮೇಲ್ನೋಟದ ಗಮನಿಸಿದರೂ ಹಲವು ವಿಷಯಗಳು ವೇದ್ಯವಾಗುತ್ತವೆ. ಹೌದು ಹೈದರಾಬಾದಿನಲ್ಲಿ ಹಲವು ಬದಲಾವಣೆಗಳಾಗಿವೆ. ರಸ್ತೆಗಳು ಉತ್ತಮವಾಗಿವೆ. ಹಲವು ಫ್ಲೈ ಓವರ್ ಗಳು ಬಂದಿವೆ. ರಸ್ತೆ ತುಂಬ ಗಿಜಿಗಿಜಿ ಎಂದು ವಾಹನಗಳು ನಿರಂತರವಾಗಿ ಎಡೆಬಿಡದೆ ಓಡಾಡುತ್ತಲೇ ಇರುತ್ತವೆ. ನೋಡುವವರಲ್ಲಿ ಹಲವರು ವಾಹ್! ಎನ್ನುವವರೂ ಇದ್ದಾರೆ. ಇದು ಒಂದು ಮುಖ.

ಈ ಅಂದದ ಹೈದರಾಬಾದಿಗೆ ಇನ್ನೊಂದು ಮುಖವಿದೆ. ಅದು ಜನಸಾಮಾನ್ಯರ ಅನುಭವದ್ದು. ಉತ್ತಮಗೊಂಡ ರಸ್ತೆಗಳು ಮೋಟಾರು ವಾಹನಗಳಿಗೆ ಅನುಕೂಲಕರವಾಗಿವೆ. ಆದರೆ ಜನಸಾಮಾನ್ಯ ಪಾದಚಾರಿಗಳಿಗೆ? ಪಾದಚಾರಿಗಳ ದಾರಿ ಅತ್ಯಂತ ಕಿರಿದಾಗಿದ್ದು ಅದರ ಮೇಲೆ ಗಿಡಗಳನ್ನು ನೆಡಲಾಗಿದೆ. ಮೂತ್ರಿಗಳನ್ನು ಕಟ್ಟಲಾಗಿದೆ ಇತ್ಯಾದಿ. ಪಾದಚಾರಿಗಳಿಗೆ ದಾರಿಯೇ ಇಲ್ಲ ಎಂಬಂತಾಗಿದೆ. ಶೇ 70ಕ್ಕಿಂತ ಹೆಚ್ಚು ಜನರು ಉಪಯೋಗಿಸುವ ಪಾದಚಾರಿಗಳ ದಾರಿ ಇದು. ಮೋಟಾರು ವಾಹನಗಳಿಗೆ ರಾಜ ಮಾರ್ಗಗಳು ಅಲ್ಲದೆ ಈ ರಸ್ತೆಗಳನ್ನು ದಾಟುವುದು ಬಹಳ ಕಷ್ಟ. ಯಾಕೆಂದರೆ ರಸ್ತೆ ದಾಟಲು ಮೇಲ್ಸೇತುವೆಗಳಿಲ್ಲ. ವಾಹನಗಳು ನಿಧಾನ ಚಲಿಸಬೇಕಾದಲ್ಲೂ ಹಾಗೆ ಚಲಿಸುವುದಿಲ್ಲ. ರಸ್ತೆ ಸಿಗ್ನಲ್‌ಗಳು ಇಲ್ಲವೇ ಇಲ್ಲ. ಇವೆಲ್ಲ ಯಾರ ಅನುಕೂಲಕ್ಕಾಗಿ?

ಬಹುಮುಖ್ಯವಾದದ್ದು ಇವುಗಳ ಬೆಲೆ ಹೈದರಾಬಾದಿನಲ್ಲಿ ಕಳೆದ ಐದಾರು ವರ್ಷಗಳಲ್ಲಿ ಬೆಲೆಗಳು ಯದ್ವಾತದ್ವಾ ಏರಿವೆ. ಹಿಂದೆ ಬಡವರ ನಗರವಾಗಿದ್ದ ಅದು ಇಂದು ಶ್ರೀಮಂತರಿಗೆ ಮಾತ್ರ ಅನುಕೂಲ ನೀಡುವ ನಗರವಾಗಿದೆ. ಜನಸಾಮಾನ್ಯರಿಗೆ ಗೋಳು ದಿನನಿತ್ಯ ತಪ್ಪದಂತಾಗಿದೆ. ನೀರು, ವಿದ್ಯುತ್‌ಗಳ ದರ ಏರಿಕೆ, ಮನೆ ಬಾಡಿಗೆ ಏರಿಕೆ, ಇತ್ಯಾದಿ ಏರಿಕೆಗಳು ಜನಸಾಮಾನ್ಯರ ಜೀವನವನ್ನು ದುರ್ಭರಗೊಳಿಸುತ್ತಿದೆ.




ಜನರಿಂದ ಹಣ ವಸೂಲು ಮಾಡಲಂತೂ ಸರ್ಕಾರೀ ಯಂತ್ರಗಳು ಹೊಸ ಹೊಸ ವಿಧಾನಗಳನ್ನು ಹುಡುಕುತ್ತಲೇ ಇರುತ್ತವೆ. ಉದಾಹರಣೆಗೆ ಮೊನ್ನೆ ಮೊನ್ನೆಯ ವರದಿಯ ಪ್ರಕಾರ ದ್ವಿಚಕ್ರ ವಾಹನಗಳನ್ನೆಲ್ಲ ನಿಲ್ಲಿಸಿ ಯದ್ವಾತದ್ವಾ ದಂಡವನ್ನು ಕಾರಣವಿಲ್ಲದೆಯೂ ವಸೂಲಿ ಮಾಡುತ್ತಿರುವುದು. ಪೊಲೀಸ್ ಅಧಿಕಾರಿಗಳಿಗೆ ಇಷ್ಟು ದಂಡ ವಸೂಲಿ ಮಾಡಬೇಕೆಂದು ಗುರಿ ನೀಡಿರುವುದರಿಂದ ಅವರು ಚಾಲಕರದು ತಪ್ಪಿರಲಿ ಇಲ್ಲದಿರಲಿ ನಿಲ್ಲಿಸಿ ದಂಡ ವಸೂಲು ಮಾಡುತ್ತಿದ್ದಾರೆ.

ಇವು ಕೆಲವು ಸ್ಯಾಂಪಲ್ಲುಗಳು ಮಾತ್ರ. ಗ್ರಾಮೀಣ ಆಂಧ್ರದಲ್ಲೂ ಜೀವನ ಕಷ್ಟವಾಗಿರುವುದರಿಂದ ಹೈದರಾಬಾದಿನತ್ತ ಜನ ಹರಿದು ಬರುತ್ತಿರುವುದೇನೂ ನಿಂತಿಲ್ಲ. ಹೀಗೆ ಸಮಸ್ಯೆ ಉಲ್ಬಣಿಸುತ್ತಲೇ ಇದೆ.

ಬೆಂಗಳೂರು ಹೈದರಾಬಾದಿನ ತಮ್ಮ ಅಥವಾ ಅಣ್ಣ ಯಾಕೆಂದರೆ ಕೆಲವು ವಿಷಯಗಳಲ್ಲಿ ಹೈದರಾಬಾದನ್ನು ಬೆಂಗಳೂರು ಅನುಕರಣೆ ಮಾಡುತ್ತಿದ್ದರೆ ಇನ್ನು ಕೆಲವು ವಿಷಯಗಳಲ್ಲಿ ಬೆಂಗಳೂರನ್ನು ಹೈದರಾಬಾದು ಅನುಕರಣೆ ಮಾಡುತ್ತಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಎರಡೂ ರಾಜ್ಯಗಳು ಐಎಂಎಫ್, ವಿಶ್ವ ಬ್ಯಾಂಕುಗಳ ಖಾಸಗೀಕರಣದ ನೀತಿಗಳನ್ನು ಉತ್ಸಾಹದಿಂದ ಅನುಷ್ಠಾನಗೊಳಿಸುತ್ತಿವೆ. ಈ ನೀತಿಗಳು ಕೆಲವರಿಗೆ ಮಾತ್ರ ಐಷಾರಾಮ ತಂದು ಉಳಿದ ಬಹುತೇಕರಿಗೆ ಹೊರೆ ಹೊರಿಸುತ್ತವೆ. ಪ್ರಜಾಸತ್ತೆಯ ಪೂರ್ತಿ ವಿರೋಧಿ ನೀತಿಗಳು ಇವು.

ಅಭಿವೃದ್ಧಿ ಯಾರಿಗಾಗಿ? ಅನುಕೂಲ/ಐಷಾರಾಮ ಯಾರಿಗೆ? ನೀವೇ ಹೇಳಿ?



ಜಿ.ಎಸ್.ಮಣಿ

...ದ್ಯಮಿಕ ಸಾಲಗಳಿಗೆ ಬೇಡಿಕೆ?

...್ಯಾಂಕು ಸಾಲಗಳಿಗೆ ಉದ್ದಿಮೆಗಳಿಂದ ಬೇಡಿಕೆ ...ದೆ ಎಂದು ಗುಲ್ಲು ಹಬ್ಬಿದೆ. ಔದ್ಯಮಿಕ ...ಗಳಿಗೆ ಬೇಡಿಕೆ ಇಲ್ಲದೆ ಕಳೆದ ಕೆಲವು ...ಗಳಲ್ಲಿ ಬ್ಯಾಂಕಿಂಗ್ ನೀತಿಗಳೇ ...ಗುತ್ತಿರುವ ಮಾತಿತ್ತು. ಔದ್ಯಮಿಕ ಸಾಲಗಳಿಗೆ ...ಕೆ ಬಂದಿದೆ ಎಂದರೆ?

...ದ್ಯಮಿಕ ಬೆಳವಣಿಗೆ ಆಗುತ್ತಿದೆ ಎಂಬುದನ್ನು ... ಸೂಚಿಸುತ್ತದಾದ್ದರಿಂದಲೇ ಈ ಗುಲ್ಲಿಗೆ ...ಂದು ಮಹತ್ವ. ಹೀಗೆ ನಿಜವಾಗಿಯೂ ...ಕೆ ಬಂದು ಔದ್ಯಮಿಕ ಬೆಳವಣಿಗೆ ಆಗುತ್ತಿದ್ದರೆ ...ಂದ ಹಲವು ಲಾಭಗಳು ಜನರಿಗೆ ಆಗುತ್ತವೆ ...ದೇ ಆರ್ಥಿಕ ತಜ್ಞರ ಅಭಿಪ್ರಾಯ. ಈ ...ವಾಳಶಾಹಿ ಆರ್ಥಿಕ ತಜ್ಞರು ಗುಲ್ಲುಗಳ ...ಯೂ ಅವಲಂಬಿತರಾಗಿರುತ್ತಾರೆ ಎಂಬುದು ...ಂದ ಗೊತ್ತಾಗುತ್ತದೆ.

...ದ್ಯಮಿಕ ಸಾಲಗಳಿಗೆ ಬೇಡಿಕೆ ಹೆಚ್ಚುತ್ತಿದ್ದರೆ ...ಂದ ಕೆಲವು ಪರಿಣಾಮಗಳು ಉಂಟಾಗುತ್ತವೆ. ...ವಾಳ ಮಿತ ಪ್ರಮಾಣದಲ್ಲಿ ಇರುವ ...ರದಂತಹ ದೇಶದಲ್ಲಿ ಸಾಲ ತುಟ್ಟಿಯಾಗುತ್ತದೆ. ... ಮಾತುಗಳಲ್ಲಿ ಹೇಳುವುದಾದರೆ ಬಡ್ಡಿ ...ಳು ಹೆಚ್ಚಬೇಕು.

...ಗ ಇರುವ ಪರಿಸ್ಥಿತಿ ನೋಡಿದರೆ ಬಡ್ಡಿ ...ಗಳು ಏರುವ ಲಕ್ಷಣಗಳಿಲ್ಲ. ಸದ್ಯಕ್ಕೆ ...ಂಕುಗಳಲ್ಲಿ ಬೇಕಾದಷ್ಟು ಹಣವಿದೆ. ...ಂದಲೇ ಅವುಗಳು ಸರ್ಕಾರಿ ಮತ್ತು ಇತರೆ ...ಟಿಗಳಲ್ಲಿ ಹಣ ಹೂಡಿರುವುದು. ಇವುಗಳನ್ನು ...ನಿಸಿದರೆ ಔದ್ಯಮಿಕ ಸಾಲಗಳಿಗೆ ಬೇಡಿಕೆ ಹೆಚ್ಚಿದೆ ...ಬುದು ಸುಳ್ಳು.

...ಜೆಪಿ ನೇತೃತ್ವದ ಏನ್‌ಡಿಎಯು ...ರದಂತಿರುವ ಇದು, ನಿಜವನ್ನು ಎಷ್ಟೇ ...ಮಾಚಿದರೂ ನಿಜ ಹೊರಗೆ ಬರುತ್ತಿದೆ. ಇದೇ ...ರ ಹಿತಾನುಭವ ಇರಬಹುದಲ್ಲವೆ?

.......'ಆರೋಗ್ಯ ಬರೀ ಭಾಗ್ಯ'!

ಪುಟ 5 ರಿಂದ

ಗ್ರಾಮೀಣ ಪ್ರದೇಶದಲ್ಲಿ ಪ್ರತಿ ಸಾವಿರ ಜನಸಂಖ್ಯೆಗೆ ಡಾಕ್ಟರುಗಳ ಸಂಖ್ಯೆ ನಗರ ಪ್ರದೇಶದಲ್ಲಿ ಆರನೇ ಒಂದು ಭಾಗ.

ಪ್ರತಿಯೊಬ್ಬನ ಮೇಲೆ ಸರ್ಕಾರ ಆರೋಗ್ಯಕ್ಕೆ ಮಾಡುವ ವೆಚ್ಚ ಗ್ರಾಮೀಣ ಪ್ರದೇಶದಲ್ಲಿ ನಗರ ಪ್ರದೇಶಗಳ ಏಳನೇ ಒಂದು ಭಾಗ.

ಇಂತಹ ಭೀಕರ ಸ್ಥಿತಿಗೆ ಎನ್.ಡಿ.ಎ. ಸರ್ಕಾರ ಸ್ಪಂದಿಸಲಿಲ್ಲವೆ? ಸ್ಪಂದಿಸಿದೆ ಸ್ಥಿತಿಯನ್ನೂ ಇನ್ನೂ ಗಂಭೀರಗೊಳಿಸುವ ರೀತಿಯಲ್ಲಿ. ಗ್ರಾಮೀಣ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸುವ ಬದಲು, ನಗರಗಳಲ್ಲಿ ಇನ್ನಷ್ಟು AIIMS (ಅಖಿಲ ಭಾರತ ವೈದ್ಯಕೀಯ ವಿಜ್ಞಾನಿಗಳ ಸಂಸ್ಥೆ)ಗಳನ್ನು ಸ್ಥಾಪಿಸುವುದು. ಸರ್ಕಾರಿ ಆರೋಗ್ಯ ಸೇವೆಗಳಲ್ಲಿ ಫೀ ತೆರುವ ವ್ಯವಸ್ಥೆ ತರಲು ಪ್ರಯತ್ನ ನಡೆಸಿದೆ. ಖಾಸಗಿ ಆರೋಗ್ಯ ಸಂಸ್ಥೆಗಳನ್ನು ಬೆಳೆಸಲು ಪ್ರಯತ್ನಿಸುತ್ತಿದೆ.

ಖಾಸಗಿ ಸಂಸ್ಥೆಗಳು ಗ್ರಾಮೀಣ ಮತ್ತು ಬಡವರಿಗೆ ಆರೋಗ್ಯ ಸೇವೆ ವಿಸ್ತರಿಸುವಲ್ಲಿ ಯಾವುದೇ ಆಸಕ್ತಿ ವಹಿಸುವುದಿಲ್ಲ ಎಂದು ಗೊತ್ತಿದ್ದರೂ ಔಷಧಿ ಬೆಲೆಗಳ ಮೇಲೆ ಇದ್ದ ನಿಯಂತ್ರಣ ಸಡಿಲಿಸಿ; ಬೆಲೆ ಏರಿಕೆಗೆ ಕಾರಣವಾಗಿದೆ. 1994ರಲ್ಲಿ 74 ಔಷಧಿಗಳು ನಿಯಂತ್ರಿತ ಪಟ್ಟಿಯಲ್ಲಿದ್ದರೆ, ಈಗ ಬಂದು 25 ಆ ಪಟ್ಟಿಯಲ್ಲಿವೆ. ಇದರ ಬದಲು ವಿದೇಶಿಯರಿಗೆ "ಆರೋಗ್ಯ ಪ್ರವಾಸ"ಕ್ಕೆ (ವಿದೇಶಿಯರು ಇಲ್ಲಿನ ಕಡಿಮೆ ವೆಚ್ಚದ ಆರೋಗ್ಯ ಸೇವೆಗಳಿಗಾಗಿ ಇಲ್ಲಿಗೆ ಬರುವಂತೆ ಪ್ರೋತ್ಸಾಹಿಸುವುದು) ಕುಮ್ಮಕ್ಕು ಕೊಡುವ ಕ್ರೂರ ಜೋಕ್ ಮಾಡುತ್ತಿದೆ.

ಒಂದು ಕಡೆ ಅಪೋಲ್ಲೋ ಮುಂತಾದ ಪಂಚತಾರಾ ಆಸ್ಪತ್ರೆಗಳಿಗೆ ಭೂಮಿ, ತೆರಿಗೆ ರಿಯಾಯಿತಿ ಇತ್ಯಾದಿ ಮೂಲಕ ಪ್ರೋತ್ಸಾಹ ನೀಡುತ್ತಿದೆ. ಆದರೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸಂಪನ್ಮೂಲ ಇಲ್ಲದೆ ಸೊರಗಿ ಸಾಯುತ್ತಿವೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುಸ್ಥಿತಿ ನೋಡಿ:

- ಶೇಕಡಾ 38 ಕೇಂದ್ರಗಳು ಮಾತ್ರ ಅವಶ್ಯಕ ಸಿಬ್ಬಂದಿ ಹೊಂದಿವೆ.
- ಶೇಕಡಾ 31 ಮಾತ್ರ (ಕನಿಷ್ಟ ಶೇಕಡಾ 60) ಅಗತ್ಯ ಸಾಧನಗಳನ್ನು ಹೊಂದಿದೆ.
- ಶೇಕಡಾ 3 ಮಾತ್ರ (ಕನಿಷ್ಟ ಶೇಕಡಾ 80) ಅಗತ್ಯ ಸಾಧನಗಳನ್ನು ಹೊಂದಿದೆ.
- ಹತ್ತರಲ್ಲಿ ಎಂಟು ಕೇಂದ್ರಗಳಲ್ಲಿ ಹೆರಿಗೆ ವೈದ್ಯಕೀಯ ಕಿಟ್ ಇಲ್ಲ.
- ಶೇಕಡಾ 34 ಮಾತ್ರ ಹೆರಿಗೆ ಸೇವೆ ಕೊಡುತ್ತವೆ.
- ಹತ್ತರಲ್ಲಿ ಏಳು ಕೇಂದ್ರಗಳಲ್ಲಿ ಹೆರಿಗೆ ವಿಶೇಷ ತಜ್ಞರಿಲ್ಲ.

ಹೀಗಿವೆ ಎನ್.ಡಿ.ಎ. ದ ಆರೋಗ್ಯ ಕ್ಷೇತ್ರದ ಸಾಧನೆಗಳು. ಆರೋಗ್ಯ ಬಹುಸಂಖ್ಯಾತರ ಭಾಗ್ಯದಲ್ಲಿ ಇಲ್ಲವೇ ಇಲ್ಲ.

ಲಿವರ್ ಚಿಕಿತ್ಸೆಗಳು ಮತ್ತು ಮೌಢ್ಯ

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ



ಡಾ. ಪ್ರಕಾಶ್ ಸಿ.ರಾವ್



...ರೋಗಗಳ ಬಗ್ಗೆ ಅಜ್ಞಾನ, ಆತಂಕ, ಈ ...ರಹದ ಚಿಕಿತ್ಸೆಗೆ ಕಾರಣವಾಗುತ್ತದೆ. ಈ ...ರಹದ ನಂಬಿಕೆಗಳು ಹಲವಾರು ಜನರಲ್ಲಿ ...ಉಂಟು ಹಾಗೂ ಅನೇಕ ಬಾರಿ ವೈದ್ಯರೇ ...ಪ್ರೋತ್ಸಾಹಿಸುತ್ತಾರೆ. ಉದಾ ಆಯುರ್ವೇದ ...ಲಿವರ್ ಟಾನಿಕ್ ಬರೆದು ಕೊಡುವುದು ...ಇತ್ಯಾದಿ. "ಲಿವರ್ ಕಾಯಿಲೆಗಳಿಗೆ ಯಾವ ...ಔಷಧಿ ಇಲ್ಲವೆಂದ ಮೇಲೆ, ಆಯುರ್ವೇದ ...ಟಾನಿಕ್ ಬರೆದುಕೊಟ್ಟರೆ ಏನು ತಪ್ಪ" ಎಂದು ...ಅವರು ವಾದಿಸುತ್ತಾರೆ. "ತಂತಾನೇ ...ವಾಸಿಯಾಗುವ ರೋಗಕ್ಕೆ ಟಾನಿಕ್‌ಗಳ ಅಗತ್ಯತೆ ...ಇಲ್ಲ" ಎಂಬ ಮಾತನ್ನು ಅವರು ಒಪ್ಪುತ್ತಾರೆ!

...ಕಾಮಾಲೆ ರೋಗವಲ್ಲ, ಕೇವಲ ರೋಗ ...ಚಿಹ್ನೆಯಷ್ಟೆ. ಕಾಮಾಲೆ ಉಂಟಾಗಲು ...ಹಲವಾರು ಕಾರಣಗಳಿವೆ. ಉದಾ-ಲಿವರ್‌ನ ...ಸೋಂಕು ರೋಗಗಳು, ಮದ್ಯಪಾನದ ...ದುಷ್ಪರಿಣಾಮ, ಲಿವರ್ ಕಾಯಿಲೆಗಳು ಇತ್ಯಾದಿ.

...ಸೋಂಕುರೋಗಗಳಲ್ಲಿ ಮುಖ್ಯವಾದವು ...ಗಳು ಹೆಪಟೈಟಿಸ್ ಎ, ಬಿ, ಸಿ, ಇ ಇತ್ಯಾದಿ. ...ಹೆಪಟೈಟಿಸ್ ಎ ರೋಗ ಎಲ್ಲಾ ...ಸೋಂಕುರೋಗಗಳಂತೆ ಹೆಚ್ಚು ಸಂಖ್ಯೆಯಲ್ಲಿ ಕಂಡು ಬರುತ್ತದೆ. ಇದು ನೀರು ಹಾಗೂ ಆಹಾರದಿಂದ ಹರಡುವ ರೋಗ. ಕಾಮಾಲೆ ಕೆಲವೇ ದಿನಗಳಲ್ಲಿ ಕಡಿಮೆಯಾಗಿ ರೋಗಿ ಗುಣಹೊಂದುತ್ತಾನೆ. ಈ ರೋಗ ಉಂಟಾದಲ್ಲಿ ವಿಶ್ರಾಂತಿ, ಶಕ್ತಿಯುತವಾದ ಆಹಾರವೇ ಅದರ ಚಿಕಿತ್ಸೆ. ಈ ರೋಗ ಉಂಟಾದಾಗ ಕೆಲವರು "ಔಷಧಿ(ಲಿವರ್ ಟಾನಿಕ್) ಉಪಯೋಗಿಸಿದೆ, ಗುಣವಾಯಿತು" ಎಂದು ನಂಬುವರು. ಉಪಯೋಗಿಸಿದಿದ್ದರೂ ಗುಣ ಹೊಂದಬಹುದಾಗಿದೆಯೆಂದು ತಿಳಿದಿರುವುದಿಲ್ಲ.


ಹೆಪಟೈಟಿಸ್ ಬಿ ರೋಗ ಉಂಟಾಗಲು ಸೋಂಕು ತಗುಲಿದ ರಕ್ತ ಪೂರಣ, ಹೆಪಟೈಟಿಸ್ ಬಿ ಇರುವ ವ್ಯಕ್ತಿಯೊಂದಿಗೆ ಲೈಂಗಿಕ ಸಂಬಂಧ ಹಾಗೂ ವೈರಸ್ ಹೊಂದಿದ ಚುಚ್ಚು ಮದ್ದು ತೆಗೆದುಕೊಳ್ಳುವುದು ಮುಖ್ಯ ಕಾರಣ. ಈ ರೋಗ ನೀರು ಹಾಗೂ ಆಹಾರದಿಮದ ಹರಡುವುದಿಲ್ಲ. ಸಾಮಾನ್ಯವಾಗಿ ದೀರ್ಘಕಾಲದವರೆಗೆ, ಅಥವಾ ಮೇಲಿಂದ ಮೇಲೆ ತೀವ್ರತರ ಕಾಮಾಲೆ ಉಂಟಾಗಲು ಸಾಧ್ಯ. ಒಮ್ಮೆ ವೈರಸ್ ದೇಹದಲ್ಲಿ ಪ್ರವೇಶಮಾಡಿದ ಮೇಲೆ ಬಹಳ ದಿವಸದವರೆಗೆ ದೇಹದಲ್ಲಿ ಇರುತ್ತದೆ. ಈ ರೋಗ ತಂತಾನೇ ವಾಸಿಯಾಗಲೂ ಬಹುದು. ವ್ಯಕ್ತಿ ಅನೇಕ ವರ್ಷಗಳು ಜೀವಿಸಬಹುದಾಗಿದೆ. ಈ ರೋಗ ಚಿಕಿತ್ಸೆಗೂ ವಿಶೇಷ ಔಷದಿಗಳಿಲ್ಲ. ಆದರೆ ಕೆಲವು ಔಷಧಿಗಳಿಂದ ರೋಗ ಉಲ್ಬಣಿಸಿದಂತೆ ಮಾಡಬಹುದಾಗಿದೆಯಷ್ಟೆ. ರೋಗ ತಡೆಗಟ್ಟಲು ಲಸಿಕೆ ಪರಿಣಾಮಕಾರಿ. ರೋಗ ಉಂಟಾಗುವ ಅಪಾಯ ಉಳ್ಳವರು (ವೈದ್ಯರು, ಪೊಲೀಸರು, ಅಂತರರಾಷ್ಟ್ರೀಯ ಪ್ರಯಾಣಿಕರು, ಅಗ್ನಿ ಶಾಮಕ ದಳದವರು ಇತ್ಯಾದಿ) ಲಸಿಕೆ ಹಾಕಿಸಿಕೊಳ್ಳಬಹುದು. ಲಿವರ್ ಟಾನಿಕ್‌ಗಳಿಂದ ಈ ರೋಗ ಗುಣಪಡಿಸಲು ಸಾಧ್ಯವಿಲ್ಲ. ನಮ್ಮ ದೇಶದಲ್ಲಿ ಈ ರೋಗ ದಿನೇ ದಿನೇ ಹೆಚ್ಚುತ್ತಿದೆ. ಜನಾರೋಗ್ಯ ವಿಧಾನದಿಂದ ಈ ರೋಗ ತಡೆಗಟ್ಟಬೇಕಾಗಿದೆ.



ಕಾಂಗ್ರೆಸ್ ಸರ್ಕಾರ

ರೈತರ ಆತ್ಮಹತ್ಯೆಗಳಿಗೆ ಬಿಜೆಪಿ ದುಷ್ಟಕೂಟದಷ್ಟೇ ದೊಡ್ಡ

ಅಪರಾಧಿ



ಆರು ಆರೋಪಗಳು



1. ಬಿಜೆಪಿ -ದುಷ್ಟಕೂಟದ ಎಲ್ಲಾ ಜನವಿರೋಧಿ ಆರ್ಥಿಕ ನೀತಿಗಳಿಗೆ ಜೋ ಹುಕುಂ
2. ವಿಶ್ವಬ್ಯಾಂಕ್‌ನಿಂದ 26 ಸಾವಿರ ಕೋಟಿ ಸಾಲ ಪಡೆದು ರಾಜ್ಯದ ಬೆಳವಣಿಗೆ, ಭವಿಷ್ಯತ್ತು ಹರಾಜು



3. ವಿಶ್ವಬ್ಯಾಂಕ್ ಆಣತಿಯಂತೆ ವಿದ್ಯುತ್, ನೀರು, ಶಿಕ್ಷಣ ಖಾಸಗೀಕರಣ - ಬೆಲೆ ಏರಿಕೆ, ಕಲ್ಯಾಣ ಯೋಜನೆ ಕಡಿತ
4. ರೈತರ ಆತ್ಮಹತ್ಯೆ, ಬರದ ಪರಿಹಾರಕ್ಕೆ ಕಿರು ಬೆರಳೆತ್ತಲಿಲ್ಲ



5. ಖಾಸಗಿ ಬಂಡವಾಳ ನೆಚ್ಚಿದ ಬೆಳವಣಿಗೆ - 16 ಸಾವಿರ ಕೋಟಿ ರೂ. ಬಂಡವಾಳ ಆಕರ್ಷಿಸಲು 9 ಸಾವಿರ ಕೋಟಿ ರೂ. ರಿಯಾಯಿತಿ !
6. ಸಂಘ ಪರಿವಾರದ ಬಾಬಾ ಬುಡನಗಿರಿಯನ್ನು ಅಯೋಧ್ಯೆ, ಕರ್ನಾಟಕವನ್ನು ಗುಜರಾತ್ ಮಾಡುವ ಪ್ರಯತ್ನಗಳನ್ನು ದಮನ ಮಾಡಲು ವಿಫಲ

ಬಿಜೆಪಿ ದುಷ್ಟಕೂಟ ಸೋಲಿಸಿ - ಜಾತ್ಯತೀತ ಸರ್ಕಾರ ಆರಿಸಿ
ಎಡಪಕ್ಷಗಳನ್ನು ಬಲಪಡಿಸಿ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್. ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH